ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

ಸೋಮವಾರ ೨೬ನೇ ಆಗಸ್ಟ್ ೧೯೯೬ರಂದು ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೧.೩೦ ಗಂಟೆಗೆ ಸಮಾವೇಶಗೊಂಡಿತು.

ಉಪಾಧ್ಯಕ್ಷರು : (**ಶ್ರೀ ಚಂದ್ರಶೇಖರ್ ಮಾಮನಿ**) ಅವರು ಪೀಠವನ್ನು ಅಲಂಕರಿಸಿದ್ದರು.

ಅವಿಶ್ವಾಸ ನಿರ್ಣಯದ ಪ್ರಸ್ತಾವದ ಮೇಲೆ ಚರ್ಚೆ

ಶ್ರೀ ಜೆ.ಹೆಚ್. ಪಟೇಲ್ ಮುಖ್ಯಮಂತ್ರಿಗಳ ಸರ್ಕಾರದ ಮೇಲೆ

+ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಸನ್ಮಾನ್ಯ ಸಭಾಪತಿಗಳೇ, ಜನತಾದಳ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಎರಡನೆಯ ಬಾರಿಗೆ ಈ ಅವಿಶ್ವಾಸ ನಿರ್ಣಯವನ್ನು ಅನಿವಾರ್ಯವಾಗಿ ನಾವು ಮಂಡನೆಯನ್ನು ಮಾಡುವಂತಹ ಸಂದರ್ಭ ಒದಗಿ ಬಂದಿದೆ. ಸನ್ಮಾನ್ಯ ಶ್ರೀ ಜೆ.ಹೆಚ್. ಪಟೇಲರು ಮುಖ್ಯಮಂತ್ರಿಯಾಗಿ ಮೂರು ತಿಂಗಳು ಕಳೆದಿರುವಂತಹ ಈ ಸಂದರ್ಭದಲ್ಲಿ ಈ ಅವಿಶ್ವಾಸ ನಿರ್ಣಯವನ್ನು ಬಿ.ಜೆ.ಪಿ. ಕಾಂಗ್ರೆಸ್ ಪಕ್ಷ, ಕರ್ನಾಟಕ ರಾಜ್ಯ ರೈತ ಸಂಘ ಶ್ರೀ ಬಂಗಾರಪ್ಪನವರ ಕೆ.ಸಿ.ಪಿ. ಪಕ್ಷದವರು, ಶ್ರೀ ವಾಟಾಳ್ ನಾಗರಾಜ್‌ರವರ ಪಕ್ಷ, ನಾವುಗಳೆಲ್ಲರೂ ಸೇರಿ ಈ ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡುತ್ತಿದ್ದೇವೆ. ಶ್ರೀ ಜೆ.ಹೆಚ್. ಪಟೇಲ್‌ರು ಮುಖ್ಯಮಂತ್ರಿಗಳಾದ ಮೇಲೆ ಒಬ್ಬ ಬುದ್ಧಿ ಜೀವಿ., ಸಮಾಜ ಚಿಂತಕ, ಶ್ರೀ ಗೋಪಾಲಗೌಡರ ಜೊತೆಯವರು ಈ ರಾಜ್ಯದ ಮುಖ್ಯಮಂತ್ರಿಗಳಾಗಿರುವಂತಹ ಸಂದರ್ಭದಲ್ಲಿ ಕರ್ನಾಟಕ ರಾಜ್ಯದ ಹಿತವನ್ನು ಕಾಯುತ್ತಾರೆಂದು ನಾವುಗಳೆಲ್ಲರೂ ಭಾವಿಸಿಕೊಂಡಿದ್ದೆವು.

ಈ ಆಡಳಿತ ಯಂತ್ರವನ್ನು ಮೊದಲಿಗಿಂತಲೂ ಹೆಚ್ಚು. ಚುರುಕುಗೊಳಿಸಿ ಸಮರ್ಥವಾದ ಆಡಳಿತವನ್ನು ರಾಜ್ಯಕ್ಕೆ ಕೊಡುತ್ತಾರೆಂದು ನಾವು ಭಾವಿಸಿದ್ದೆವು. ಕರ್ನಾಟಕ ರಾಜ್ಯದ ಜನತೆ ಇವರನ್ನು ನಂಬಿದ್ದಾರೆ. ಆ ನಾಲ್ಕೂಮುಕ್ಕಾಲು ಕೋಟಿ ಜನರ ಸಮಗ್ರ ಜವಾಬ್ದಾರಿಯನ್ನು ಹೊತ್ತು ಜನಪರ ಕಾರ್ಯ ಯೋಜನೆಗೆ ಇವರು ಮುಂದಾಗುತ್ತಾರೆಂದು ನಾವು ಭಾವಿಸಿದ್ದೆವು. ಆದರೆ ದುರ್ದೈವದಿಂದ ಈ ಕನ್ನಡ ನಾಡಿನ ಎಲ್ಲಾ ಜನರ ಆಸೆ ಅಪೇಕ್ಷೆ, ನಿರೀಕ್ಷೆಗಳನ್ನು ಸುಳ್ಳು ಮಾಡಿದಿರಿ. ನೀವು ಅನೇಕ ವರ್ಷಗಳ ಕಾಲ ಪ್ರತಿಪಕ್ಷದಲ್ಲಿದ್ದುಕೊಂಡು ಹೋರಾಟ ಮಾಡಿ, ಈ ನಾಡಿನ ಮುಖ್ಯ ಮಂತ್ರಿಯಾಗಿ ಜನರ ಸೇವೆಯನ್ನು ಮಾಡುವಂಥ ದೈವಿಕ ಅವಕಾಶ ಏನು ಸಿಕ್ಕಿದೆ ಇದನ್ನು ಸಂಪೂರ್ಣವಾಗಿ ದುರುಪಯೋಗವನ್ನು ತಮ್ಮ ಅಧಿಕಾರದ ಉಳಿವಿಗಾಗಿ ಮಾಡಿಕೊಳ್ಳುತ್ತಿದ್ದೀರಿ ಎಂಬ ಭಾವನೆ ನಾಡಿನ ಜನರಲ್ಲಿ ಮೂಡೂತ್ತಿದೆ. ನಿಮ್ಮ ಬೇಜವಾಬ್ದಾರಿತನದಿಂದ ನಿಮಗೆ ವಿವೇಕ ಇದ್ದರೂ ಕೂಡ ಇಲ್ಲದಂತೆ ನಡೆದುಕೊಳ್ಳುತ್ತಿರುವುದರಿಂದ, ಈ ನಾಡಿನ ಜನಕೋಟಿಯ ಭವಿಷ್ಯ ಒಂದು ರೀತಿಯ ಆಪತ್ತಿನಲ್ಲಿ ಸಿಕ್ಕಿಕೊಂಡಿದೆ ಎಂಬ ಭಾವನೆ ಜನರಲ್ಲಿ ಮೂಡುತ್ತಿದೆ. ಆಡಳಿತ ಪಕ್ಷ ತನ್ನ ಕರ್ತವ್ಯವನ್ನು ಮರೆತಾಗ ಪೂಜಾ ತಂತ್ರ ವ್ಯವಸ್ಥೆಯಲ್ಲಿ ವಿರೋಧಪಕ್ಷದಲ್ಲಿರುವಂಥ

ನಾವು ನಮ್ಮ ಕರ್ತವ್ಯವನ್ನು ನಿರ್ವಹಿಸಬೇಕಾಗಿದೆ. ಆ ಜವಾಬ್ದಾರಿ ಕೆಲಸವನ್ನು ಪ್ರತಿ ಪಕ್ಷದವರಾದ ನಾವು ಮಾಡುತ್ತಿದ್ದೇವೆ. ಅವತ್ತು ಮಾನ್ಯ ಮುಖ್ಯ ಮಂತ್ರಿಯವರು ಬಹಳ ಸೂಕ್ಷ್ಮರಾಗಿ ಮಾತನಾಡುತ್ತಾ ನಾನು ಅಧಿಕಾರವನ್ನು ವಹಿಸಿಕೊಂಡು ಮೂರು ತಿಂಗಳೂ ಆಗಿಲ್ಲ, ನನ್ನ ಸರ್ಕಾರದ ಮೇಲೆ ಇವರ ಅವಿಶ್ವಾಸ ನಿರ್ಣಯ ಏನಿದೆ ಎಂದು ಹೇಳಿದರು. ಕೇವಲ 3 ತಿಂಗಳಲ್ಲಿ ನೀವು ಚಮತ್ಕಾರವನ್ನು ಮಾಡುತ್ತೀರೆಂದು ನಾವೇನೂ ನಿರೀಕ್ಷೆ ಮಾಡಿಲ್ಲ, ಅಲ್ಲದೆ ನಿರೀಕ್ಷೆಯನ್ನು ಮಾಡುವುದಕ್ಕಾಗುವುದಿಲ್ಲ. ಆದರೆ ಒಂದು ಸಂಗತಿ ತಮಗೆ ಗೊತ್ತಿದೆ. ಈ ಹಿಂದೆ ಮಾನ್ಯ ದೇವೇಗೌಡರು ಈ ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಉಪ ಮುಖ್ಯ ಮಂತ್ರಿಗಳಾಗಿ ಯಾರು ಕಾರ್ಯವನ್ನು ನಿರ್ವಹಿಸಿದರೋ ಅವರೇ ಇವತ್ತು ಈ ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದಾರೆ, ಅದೇ ಇಂಧನ ಖಾತೆಯ ಮಂತ್ರಿಗಳಾಗಿದ್ದಾರೆ. ಅದೇ ಇಲಾಖೆಯನ್ನೇ ಹಿಂದೆಯೊ ನೋಡುತ್ತಿದ್ದರು. ಈಗಲೂ ನೋಡುತ್ತಿದ್ದಾರೆ. ಅದೇ ರೀತಿ ಮಾನ್ಯ ಹಿರಿಯ ಸಚಿವರಾದ ಶ್ರೀ ಸಿದ್ಧರಾಮಯ್ಯನವರು ಅವೊತ್ತು ಹಣಕಾಸಿನ ಇಲಾಖೆಯ ಸಚಿವರಾಗಿದ್ದರು. ಇವೊತ್ತು ಕೂಡ ಅವರು ಉಪ ಮುಖ್ಯ ಮಂತ್ರಿಗಳಾಗಿ ಅದೇ ಹಣಕಾಸಿನ ಇಲಾಖೆಯನ್ನು ನೋಡಿಕೊಳ್ಳುತ್ತಿದ್ದಾರೆ. ಇತ್ತೀಚೆಗೆ 1996-97ನೇ ಸಾಲಿಗೆ ಸಂಬಂಧಪಟ್ಟಂತೆ ಕಳೆದ ಮಾರ್ಚಿಯಲ್ಲಿ ರಾಜ್ಯದ ಅಭಿವೃದ್ಧಿಯ ನಕಾಶೆಯನ್ನು ನೀಡಿ ಬಜೆಟ್‌ನ್ನು ಮಂಡಿಸಿದ್ದಾರೆ.

ಈ ಹಿಂದೆ ಮಾನ್ಯ ದೇವೇಗೌಡರು ಮುಖ್ಯ ಮಂತ್ರಿಗಳಾಗಿದ್ದ ಸಂದರ್ಭದಲ್ಲಿದ್ದಂಥ ಅದೇ ಸಚಿವರು ಇವತ್ತೂ ಕೂಡ ಸಚಿವರುಗಳಾಗಿ ಮಾನ್ಯ ಜೆ.ಹೆಚ್. ಪಟೇಲರ ಜೊತೆಯಲ್ಲಿ ಕೆಲಸಮಾಡುತ್ತಿದ್ದಾರೆ. ಮಾನ್ಯ ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದಂಥ ಕಾಲದಲ್ಲಿ ನಡೆದಂಥ ಆಡಳಿತ ಮತ್ತು ಈದಿನ ನೀವು ನಡೆಸುತ್ತಿರುವ ಆಡಳಿತ, ಇವೆರಡಲ್ಲೂ ಕೂಡ ನಿಮ್ಮ ಮೇಲೆಯೇ ಜಂಟಿ ಜವಾಬ್ದಾರಿ ಇದೆ. ಈ ಸರ್ಕಾರ ಹೇಗೆ ನಡೆಯುತ್ತಿದೆ? ಮಂತ್ರಿಗಳಲ್ಲಿ ಯಾವ ರೀತಿಯ ಪರಸ್ಪರ ಸಮನ್ವಯ ಇದೆ? ಯಾವ ರೀತಿಯಲ್ಲಿ ಜನಹಿತ ಸಾಧನೆಯಾಗಿದೆ? ಇದೆಲ್ಲದರ ವಿಮರ್ಶೆಗೆ ಇದೊಂದು ಸಕಾಲವಾಗಿದೆ ಎಂದು ನಾನಾದರೂ ಭಾವಿಸಿದ್ದೇನೆ. ಕಳೆದ 3 ತಿಂಗಳ ಆಡಳಿತ ವೈಖರಿ ಮತ್ತು ಅದರ ಹಿಂದಿನ ಆಡಳಿತ ವೈಖರಿಯನ್ನು ನೋಡಿದಾಗ ಒಂದು ರೀತಿಯ ಸರ್ವಾಧಿಕಾರಿ ಶೈಲಿಯ ಆಡಳಿತ ಈ ಜನತಾದಳದ ಅಧಿಕಾರದ ಹೆಗ್ಗುರುತಾಗಿದೆ. ಈ ಮಾತನ್ನು ನಾನು ಹೇಳುತ್ತಿಲ್ಲ.

ಈ ರಾಜ್ಯದ ಯಾವುದೇ ಮೂಲೆಗಾದರೂ ತಾವು ಹೋಗಿ ನೋಡಿ, ಈ ನೆಲಗಳ್ಳರಿಗೆ, ಕಾಡುಗಳ್ಳರಿಗೆ, ಗ್ರ್ಯಾನೈಟ್ ಕಳ್ಳರಿಗೆ, ಭ್ರಷ್ಟ ಅಧಿಕಾರಿಗಳಿಗೆ, ಭ್ರಷ್ಟ ರಾಜಕಾರಣಿಗಳಿಗೆ, ರಾಜಾರೋಷವಾಗಿ ರಕ್ಷಣೆಯನ್ನು ಕೊಡುವಂಥ ಲಜ್ಜೆಗೆಟ್ಟ ಆಡಳಿತ ವೈಖರಿ ನಿಮ್ಮದಾಗಿದೆ ದೌರ್ಜನ್ಯದಲ್ಲಿ ವಿಕ್ರಮವನ್ನು ಸಾಧಿಸಿದ್ದೀರಿ. ಭ್ರಷ್ಟಾಚಾರದಲ್ಲಿರುವವರಿಗೆ ಬೆಂಬಲವನ್ನು ಕೊಡುವುದರಲ್ಲಿ ಹಿಂದಿನ ಎಲ್ಲಾ ಸರ್ಕಾರಗಳನ್ನೂ ಮೀರಿಸಿ ಒಂದು ಸಾಧನೆಯನ್ನು ಮಾಡಿದ್ದೀರಿ. ರಾಜ್ಯದ ಜನತೆಗೆ ನಿಮ್ಮ ಆಡಳಿತ ವೈಖರಿಯಿಂದ ಒಂದು ರೀತಿಯ ಗ್ರಹಣ ಹಿಡಿದಂತಾಗಿದೆ. ಯಾವುದೇ ಒಂದು ರಾಜ್ಯ ಸರ್ಕಾರದ ಮೊದಲನೇ ಜವಾಬ್ದಾರಿ ಎಂದರೆ, ಲಾ ಅಂಡ್ ಆರ್ಡರ್‌ನ್ನು ನೋಡಿಕೊಳ್ಳುವಂಥಾದ್ದು. ಇವತ್ತು ನಮ್ಮ ಕರ್ನಾಟಕ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣವಾಗಿ ಹದಗೆಟ್ಟಿದೆ, ಕೊಲೆ, ಸುಲಿಗೆ, ಲಾಕಪ್ ಡೆತ್, ಮಹಿಳೆಯರ ಮಾನಹರಣ ಇತ್ಯಾದಿ ಪ್ರತಿನದಿ ಒಂದಲ್ಲೊಂದು ರೀತಿಯಲ್ಲಿ ನಡೆಯುತ್ತಿದ್ದರೂ ಕೂಡ ಗೃಹ ಇಲಾಖೆಯನ್ನು ನೋಡಿಕೊಳ್ಳುತ್ತಿರುವಂಥ ಮಾನ್ಯ ಮುಖ್ಯ ಮಂತ್ರಿಗಳು ಕೈಕಟ್ಟಿಕೊಂಡು ಕೂತಿರುವಂಥ

ಒಂದು ವಿಚಿತ್ರ ಪರಿಸ್ಥಿತಿ ಇದೆ. ಹಿಂದೆ ಇದೇ ವಿದ್ಯುತ್ ಇಲಾಖೆಯನ್ನು ತಾವು ನೋಡಿಕೊಳ್ಳುತ್ತಿದ್ದಿರಿ.

ತಾವು ಏನಾದರೂ ಹೇಳಬೇಕಾದರೆ ಬಹಳ ಸುಲಭವಾಗಿ, ಹಗುರವಾಗಿ ಹೇಳುತ್ತೀರಿ. ಜಲಾಶಯದಲ್ಲಿ ನೀರಿಲ್ಲದಿದ್ದರೆ ನಾನೇನು ಮಾಡಲಿ? ಹಿಂದಿನ ಸರ್ಕಾರದವರು ವಿದ್ಯುತ್ ಉತ್ಪಾದನೆಯನ್ನು ಮಾಡದಿದ್ದರೆ ನಾನೇನು ಮಾಡಲಿ? ಅದರ ಫಲವನ್ನು ನೀವು ಅನುಭವಿಸಿ ಎನ್ನುವಂಥ ಮಾತನ್ನು ಬಹಳ ಗಂಭೀರವಾಗಿ ಸದನದೊಳಗೆ ಮತ್ತು ಹೊರಗೆ ಮಾತನಾಡುತ್ತೀರಿ. ಆದರೆ ನೀವು ಕಳೆದ ಸುಮಾರು ಒಂದೂವರೆ ವರ್ಷದಿಂದ ಈ ಇಲಾಖೆಯನ್ನು ನೋಡಿಕೊಳ್ಳುತ್ತಿರುವುದರಿಂದ ಈ ವಿದ್ಯುತ್ ಉತ್ಪಾದನೆಯ ಬಗ್ಗೆ ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ ಅದೂ ಕೂಡ ಇವತ್ತು ಸ್ಪಷ್ಟವಾಗಬೇಕಾಗಿದೆ ರಾಜ್ಯದಲ್ಲಿ ವಿದ್ಯುತ್ ಬರ, ಕುಡಿಯುವ ನೀರಿಗೆ ಹಾಹಾಕಾರ,

ಅಭಿವೃದ್ಧಿ ಕಾರ್ಯ ಕುಂಠಿತ ಇಂಥಾದ್ದು ಕಂಡುಬರುತ್ತಿದೆ. ನಿನ್ನೆ ಮೊನ್ನೆ ಕೆಲವು ಕಡೆಗಳಲ್ಲಿ ಮಳೆಯಾಗಿದೆ. ರಾಜ್ಯದ ಉದ್ದಗಲಕ್ಕೂ ಬರಗಾಲದ ವಾತಾವರಣ ಇದೆ. ಮಲೆನಾಡಿನಲ್ಲಿ ಕೆರೆಕಟ್ಟೆಗಳಲ್ಲಿ ನೀರಿಲ್ಲದೆ ಬೋರ್‌ವೆಲ್‌ಗಳಿಂದ ಜಾನುವಾರುಗಳಿಗೆ ನೀರನ್ನು ಕುಡಿಸುವ ಪರಿಸ್ಥಿತಿ ಇದೆ. ಇಷ್ಟಾದರೂ ಇವತ್ತಿನವರೆಗೂ ಯಾವುದೇ ಜಿಲ್ಲಾಮಂತ್ರಿ ರಾಜ್ಯದಲ್ಲಿ ಪ್ರವಾಸ ಮಾಡಲಿಲ್ಲ. ಜನರ ಸಂಕಷ್ಟಗಳನ್ನು ಕೇಳುವಂಥ ಪ್ರಾಮಾಣಿಕ ಪ್ರಯತ್ನವನ್ನು ಮಾಡಿಲ್ಲ. ಗಜಗಾತ್ರದ 45 ಜನರ ಸಚಿವ ಸಂಪುಟ ಆದಮೇಲೂ ಕೂಡ ಆಯಾಯ ಜಿಲ್ಲೆಗಳಿಗೆ ನೀವು ಜಿಲ್ಲಾಮಂತ್ರಿಗಳಾದಿರಿ. ರಾಜ್ಯದ ವಿಚಾರ ನಿಮಗೆ ಸಂಬಂಧವಿಲ್ಲ. ಕೆಲವು ಸಚಿವರಂತೂ ಅವರ ಕ್ಷೇತ್ರಗಳನ್ನು ಬಿಟ್ಟು ಹೊರಗೆ ಹೋಗಲಿಲ್ಲ. ಪರಸ್ಪರ ಬಡಿದಾಟದಲ್ಲಿ ನಿರತರಾಗಿದ್ದೀರಿ.

ನಮ್ಮ ಸರ್ಕಾರ ಪಾರದರ್ಶಕವಾಗಿ ಇರುತ್ತದೆಂದು ಚುನಾವಣೆ ಸಂದರ್ಭದಲ್ಲಿ ಘೋಷಣೆ ಮಾಡಿದಿರಿ. ಎಲ್ಲವೂ ಕೂಡ ಇವತ್ತು ಗುಟ್ಟಿನಲ್ಲಿ ನಡೆಯುತ್ತಿದೆ. ಯಾವ ದಾಖಲೆಗಳೂ ಸಿಕ್ಕುವುದಿಲ್ಲ. ಏಕೆಂದರೆ, ಅಧಿಕೃತ ದಾಖಲೆಗಳು ಸಿಕ್ಕಿದರೆ ನಮ್ಮ ಬಣ್ಣ ಬಯಲಾಗುತ್ತದೆಂಬ ಭಯ ನಿಮಗೆ. ನಿಮ್ಮ ಆಡಳಿತ ವೈಖರಿ ಹೇಗಿದೆ? ಪಕ್ಷಪಾತದಿಂದ ಕೂಡಿದ್ದು ಎಲ್ಲಾ ಸಂದರ್ಭದಲ್ಲೂ ಜಾತಿಯ ವಿಷ ಬೀಜವನ್ನು ಭಿತ್ತಿ ಅದರ ಲಾಭವನ್ನು ಪಡೆಯುವ ನೀತಿ ನಿಮ್ಮದಾಗಿದೆ. ಪ್ರತಿಪಕ್ಷದಲ್ಲಿ ನೂರಕ್ಕೂ ಹೆಚ್ಚು ಜನ ಶಾಸಕರಿದ್ದಾರೆಂದು ಎಲ್ಲಾ ಹಂತದಲ್ಲೂ ಪ್ರತಿಪಕ್ಷದ ಶಾಸಕರ ಕಾರ್ಯವನ್ನು ಪ್ರಾಮಾಣಿಕವಾಗಿ ನಿರ್ವಹಿಸಲು ಸಾಧ್ಯವಾಗದಂತೆ ನಮ್ಮನ್ನು ಹತ್ತಿಕ್ಕುವಂಥ ಎಲ್ಲಾ ರೀತಿಯ ವ್ಯವಸ್ಥಿತ ಪ್ರಯತ್ನವನ್ನು ತಾವು ಮಾಡುತ್ತಿದ್ದೀರಿ. ತಾವು ಈ ರಾಜ್ಯದ 15ನೇ ಮುಖ್ಯ ಮಂತ್ರಿಯಾಗಿ ಪ್ರಮಾಣ ವಚನ ಸ್ವೀಕಾರ ಮಾಡಿದಿರಿ. ನಿಮ್ಮ ಜೊತೆಯಲ್ಲೇ ಉಪ ಮುಖ್ಯ ಮಂತ್ರಿಗಳಾಗಿ ಮಾನ್ಯ ಸಿದ್ದರಾಮಯ್ಯನವರೂ ಪ್ರಮಾಣ ವಚನ ಸ್ವೀಕಾರ ಮಾಡಿದರು.

ಬೆಳಿಗ್ಗೆ 9.30 ಗಂಟೆಗೆ ಮುಖ್ಯಮಂತ್ರಿಗಳು ಅಧಿಕಾರವನ್ನು ವಹಿಸಿಕೊಳ್ಳುತ್ತಾರೆಂದರೆ ನಿರೀಕ್ಷಿತ ಸಮಾರಂಭ ಬಹಳ ಬೇಗನೆ ಮುಗಿದು ಹೋಯಿತು. ಪತ್ರಕರ್ತರು ಮತ್ತಿತರರು ಬರುವುದರೊಳಗೆ, ಬೇರೆ ಯಾರನ್ನೂ ಕರೆಯದೇ ಗಡಿಬಿಡಿಯಲ್ಲಿ ಮುಖ್ಯ ಮಂತ್ರಿಗಳಾಗಿ ತಾವು ಅಧಿಕಾರವನ್ನು ವಹಿಸಿಕೊಂಡಿರಿ. ಹಾಗೆ ಅಧಿಕಾರವನ್ನು ವಹಿಸಿಕೊಳ್ಳುವ ಸಂದರ್ಭದಲ್ಲಿ ಯಾವ ಪರಿಸ್ಥಿತಿ ಇತ್ತು? ಹಿಂದಿನ ಮುಖ್ಯ ಮಂತ್ರಿಗಳಾದ ಮಾನ್ಯ ದೇವೇಗೌಡರು ಮುಖ್ಯ ಮಂತ್ರಿಯಾಗಿ ಅಧಿಕಾರವನ್ನು ವಹಿಸಿಕೊಂಡಂಥ ಸಂದರ್ಭದಲ್ಲಿ ಯಾವ ರೀತಿಯ ಪರಿಸ್ಥಿತಿ ಇತ್ತು ಎಂಬ ವಿಚಾರದ

ಬಗ್ಗೆ ಚರ್ಚೆ ಮಾಡುವುದಕ್ಕೆ ನಾನು ಹೋಗುವುದಿಲ್ಲ. ಇಡೀ ರಾತ್ರಿ ಒಂದು ರೀತಿಯ ಸರ್ಕಸ್ ಮಾಡಿ ಮನಸ್ಸಿಲ್ಲದ ಮನಸ್ಸಿನಿಂದ, ನಿಮ್ಮಲ್ಲೇ ಪರಸ್ಪರ ವಿರೋಧ ಇರುವಂಥ ಕಾಲದಲ್ಲಿ ಈ ರಾಜ್ಯದ ಮುಖ್ಯ ಮಂತ್ರಿಯಾಗಿ ನೀವು ಅಧಿಕಾರವನ್ನು ಸ್ವೀಕಾರ ಮಾಡಿಕೊಂಡಿರಿ. ಅಧಿಕಾರವನ್ನು ವಹಿಸಿಕೊಳ್ಳುವ ಸಂದರ್ಭದಲ್ಲಿ ತಾವು ಏನು ಹೇಳಿದಿರಿ? ಇದನ್ನು ನಾನು ಹೇಳುವುದಿಲ್ಲ.

ಪತ್ರಿಕಾ ಕಟಿಂಗ್‌ನ್ನು ತಮಗೆ ಹೇಳುತ್ತೇನೆ. ತಾವೇ ಹೇಳಿದ್ದೀರಿ. ಯಾವುದೇ ಕಾರಣಕ್ಕೂ, ಯಾರೂ ಕೇಳದಿದ್ದರೂ ಕೂಡ ನನ್ನ ಸಚಿವ ಸಂಪುಟದ ಸಂಖ್ಯೆ 35ನ್ನು ದಾಟುವುದಿಲ್ಲವೆಂದು ಹೇಳಿದಿರಿ. ಈಗ 45 ಜನರಿಂದ ಕೂಡಿದ ಆನೆಗಾತ್ರದ ಸಚಿವ ಸಂಪುಟ ಆಗಿದೆ. ಇದು ಅನಿವಾರ್ಯವಾಯಿತೆಂದು ರಾಜ್ಯದ ಜನತೆಯಲ್ಲಿ ಕ್ಷಮಾಪಣೆಯನ್ನು ಕೇಳಿದಿರಿ. ಆ ಸಂದರ್ಭದಲ್ಲಿ ಈ ರಾಜ್ಯದ ರಾಜಕೀಯ ಅಸ್ಥಿರತೆ ಯಾವ ಮಟ್ಟಕ್ಕೆ ಬಂದಿತ್ತು ಎಂಬುದಕ್ಕೆ ತಾ: 6-6-96ರ ಕನ್ನಡ ಪ್ರಭ ಪತ್ರಿಕೆಯನ್ನು ತಾವು ನೋಡಿ. “6 ಜನ ಶಾಸಕರ ರಾಜೀನಾಮೆ” ಗಡಿಬಿಡಿ ಪ್ರಾರಂಭವಾಯಿತು. ತಾವು 16 ಜನ ಶಾಸಕರ ಮೇಲೆ ಕ್ರಮ ತೆಗೆದುಕೊಂಡು ಈ ರೀತಿಯ ಅಶಿಸ್ತನ್ನು ಸಹಿಸುವುದಿಲ್ಲ ಎಂಬ ಎಚ್ಚರಿಕೆಯನ್ನು ಬಹಿರಂಗವಾಗಿ ಕೊಡುವ ಪರಿಸ್ಥಿತಿಗೆ ತಾವು ಹೋದಿರಿ. ಈ ಮಂತ್ರಿಮಂಡಲ ಅಸಮತೋಲನದಿಂದ ಕೂಡಿದೆ ಎಂದು ನಿಮ್ಮ ಹಿಂದಿನ ಸಚಿವ ಸಂಪುಟದ ಸದಸ್ಯರೇ ಆರೋಪ ಮಾಡಿದರು. ರಾಜಕೀಯ ಒತ್ತಡಕ್ಕಾಗಿ ಗಜ ಗಾತ್ರದ ಸಚಿವ ಸಂಪುಟವನ್ನು ತಾವು ಮಾಡಿದಿರಿ.

ಸ್ವಾಮಿ ಇದು ಪತ್ರಿಕೆಯಲ್ಲಿ ಬರುತ್ತಿದೆ, ಈ ಅವಿಶ್ವಾಸ ನಿರ್ಣಯದಲ್ಲಿ ಅಕಸ್ಮಾತ್ ನೀವೇನಾದರೂ ಉಳಿದುಕೊಂಡರೆ ನನಗೆ ಸಿಕ್ಕಿರುವ ಮಾಹಿತಿ ಪ್ರಕಾರ ಇವತ್ತು ನಿಮ್ಮ ಸರ್ಕಾರ ಉಳಿಯುವಂಥ ಸ್ಥಿತಿಯಲ್ಲಿಲ್ಲ. ಏಕೆಂದರೆ 8-9 ಜನ ಶಾಸಕರು ಲೋಕಸಭೆಗೆ ಹೋಗಿದ್ದಾರೆ. 3 ಜನ ಶಾಸಕರು ರಾಜ್ಯದಲ್ಲಿ ಇಲ್ಲ, ಇನ್ನು ಕೆಲವರು ಈ ಸರ್ಕಾರದ ಪರವಾಗಿ ನಿಲ್ಲಬೇಕೋ ಅಥವ ಬೇಡವೋ ಎಂಬ ಗೊಂದಲದಲ್ಲಿದ್ದಾರೆ. ಆಮೇಲೆ ಶ್ರೀ ರಾಮಕೃಷ್ಣ ಹೆಗಡೆಯವರಿಂದ ಬೆಳೆದಂಥ ಅನುಯಾಯಿಗಳು ಇದೇ ಸೂಕ್ತವಾದ ಸಮಯ ಎಂದು ನಾವು ಹೋದರೆ ಏನಾಗಬಹುದೋ ಏನೋ ಎಂಬ ಭೀತಿ ಇದೆ ನಡೆದಿದೆ. ನೋ ಕಾನ್‌ಫಿಡೆನ್ಸ್ ಮೋಷನ್ ಅನ್ನು ನಾವು ಇವತ್ತು ಮೂವ್ ಮಾಡದಿದ್ದರೆ ಬಹುಶಃ ಶ್ರೀ ಹೆಗಡೆಯವರ ಜೊತೆಗೆ ಗರುಡಿಯಲ್ಲಿ ಬೆಳೆದಂಥ ಅನೇಕ ಜನರನ್ನು ಮೊನ್ನೆ ಪ್ರಧಾನಿಯವರು ಬಂದಾಗ ಕ್ಯಾಬಿನೆಟ್‌ನಿಂದ ಬಿಡಬೇಕೆಂಬುದು ನಡೆಯಿತು. ಅದು ನಾಳೆ ಆಗುತ್ತದೋ ಅಥವಾ ಇವತ್ತೇ ಆಗುತ್ತದೋ ಎಂಬುದನ್ನು ಇವತ್ತು ನಾವು ಕಾದು ನೋಡಬೇಕಾಗಿದೆ. ಮತ್ತೆ ಈ ತಮಿಳ್ನಾಡು ಮತ್ತು ಆಂಧ್ರ ಈ ಸರ್ಕಾರಗಳು ಕೇಂದ್ರಕ್ಕೆ ಬೆಂಬಲಕ್ಕೋಸ್ಕರ. ಕಾವೇರಿ ಮತ್ತು ಕೃಷ್ಣ ವಿಶೇಷವಾಗಿ ಆಲಮಟ್ಟಿಗೆ ಅನ್ಯಾಯವಾಗುವುದರಲ್ಲಿ ಯಾವುದೇ ಅನುಮಾನ ಇಲ್ಲ. ಝೀ-ಟಿ.ವಿ.ಯಲ್ಲಿ ಪಶ್ಚಿಮ ಬಂಗಾಳದ ಮುಖ್ಯಮಂತ್ರಿಗಳಾದ ಶ್ರೀ ಜ್ಯೋತಿ ಬಸು ಅವರು ಹೇಳಿಕೆ ಏನು ಕೊಟ್ಟಿದ್ದಾರೆ ಅದನ್ನು ತಾವು ಕೇಳಿದ್ದೀರೆಂದು ನಾನು ತಿಳಿದುಕೊಂಡಿದ್ದೇನೆ. ಈ ನೋ ಕಾನ್‌ಫಿಡೆನ್ಸಿ ಮುಗಿದಮೇಲೆ ಅವರೆಲ್ಲಾ ಕರ್ನಾಟಕಕ್ಕೆ ಬರುವವರಿದ್ದಾರೆ. ಅಂದರೆ, ಆಲಮಟ್ಟಿ ಕತ್ತಿ ತೂಗುತ್ತಿದೆ. ಇದು ಮುಗಿದಿದೆ ಎಂದು ಏನೂ ಇಲ್ಲ. ವಿಧಾನ ಮಂಡಲದ ಅಧಿವೇಶನ ನಡೆಯುತ್ತಿರುವ ಈ ಕಾಲದಲ್ಲಿ ಮುಂದೆ ಏನಾಗಬಹುದೋ ಏನೋ ಎಂಬ ಭಯದಿಂದ ಅವರು ಇವತ್ತು ಬಂದಿಲ್ಲ. ಏನೋ ಬೇಕಾದರೂ ಮಾಡುವುದಕ್ಕೆ ನೀವು ಸಿದ್ಧರಿದ್ದೀರಿ, ಕಾವೇರಿ, ಕೃಷ್ಣ ನೀರನ್ನು ನಮ್ಮ ನಾಡಿನ ಜನರಿಗೆ ಉಳಿಸಿಕೊಡುವಂಥ ನಂಬಿಕೆ, ವಿಶ್ವಾಸ ಈ ನಾಡಿನ

ಜನರಿಗೆ ಇಲ್ಲ, ನಮಗೆ ಇಲ್ಲ, ಮತ್ತು ನಿಮ್ಮ ಭಾಗದಲ್ಲಿ ಕುಳಿತಿರುವಂಥ ಅನೇಕ ಶಾಸಕರಿಗೆ ಇವತ್ತು ಇಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ನಾನು ಬಹಳ ಗುರುತರವಾದ ಮಾತನ್ನು ಹೇಳುತ್ತಿದ್ದೇನೆ. ಮಾನ್ಯ ದೇವೇಗೌಡರು ಈ ಹಿಂದೆ ಮುಖ್ಯ ಮಂತ್ರಿಗಳಾದರಲ್ಲಾ ಡಿಸೆಂಬರ್ 11ನೇ ತಾರೀಖು ಆ ದಿವಸ ಈ ನಾಡಿನ ಪವಿತ್ರ ಗುಡಿ ಏನಿದೆ ಅದು ಭಗ್ನವಾಯಿತು, ಕುರ್ಚಿ, ಮೇಜು, ಗ್ಲಾಸು ಲೂಟಿಯಾಯಿತು. ನಿಮ್ಮ ಪಕ್ಷದ ಧ್ವಜ ಹಾರಿಸುವಂಥ ಪ್ರಯತ್ನವಾಯಿತು. ಚಪ್ಪಲಿ ತೂರಾಟವಾಯಿತು. ನಿಮ್ಮ ಮುಖಂಡರಿಗೆ ಎಲ್ಲಾ ರೀತಿಯ ಪೂಜೆ ಆಯಿತು. ಆ ಸಮಯದಲ್ಲಿ ನಿಮ್ಮ ಸರ್ಕಾರ ಬೆಂಗಳೂರು ಪೊಲೀಸ್ ಕಮಿಷನರ್ ಶ್ರೀ ಕೋದಂಡ ರಾಮಯ್ಯ ಅವರನ್ನು ನೇಮಕ ಮಾಡಿ ಅದರ ಬಗ್ಗೆ ತಾವು ತನಿಖೆ ಮಾಡಿಸಿದ್ದೀರಿ.

ಆ ತನಿಖಾ ವರದಿ ನಿಮ್ಮ ಕೈಯಲ್ಲಿದೆ. ಅವರು ಯಾರು ಯಾರು ಪ್ರಮುಖ ಜನತಾ ದಳದ ಮುಖಂಡರು ಈ ಗಲಭೆಗೆ ಕಾರಣಕರ್ತರು ಅವರ ಮೇಲೆ ಕ್ರಮ ಕೈಗೊಳ್ಳಬೇಕೆಂದು ಹೇಳಿದರು, ಈ ಗಲಭೆಗೆ ಕಾರಣಕರ್ತರಾಗಿರುವಂಥ 4 ಜನ ಮುಖಂಡರು ಇವತ್ತು ನಿಮ್ಮ ಸಚಿವ ಸಂಪುಟದಲ್ಲಿ ಮಂತ್ರಿಗಳಾಗಿದ್ದಾರೆ. ಶ್ರೀ ಕೋದಂಡರಾಮಯ್ಯನವರು ಇದರಲ್ಲಿ ಯಾರು ಯಾರು ಅಪರಾಧಿಗಳು ಇದ್ದಾರೆ. ಏತಕ್ಕೋಸ್ಕರ ಕಾನೂನು ಕೈಗೆ ತೆಗೆದುಕೊಳ್ಳುವಂಥ ಕೆಲಸವಾಯಿತು ಎಂಬ ಬಗ್ಗೆ ನೀಡಿರುವ ವರದಿಯನ್ನು ಸದನದ ಮುಂದಿಡುವಂಥ ಒಂದು ಧೈರ್ಯ ಮಾಡಿದರೆ ಸತ್ಯಸಂಗತಿ ಇವತ್ತು ಬಯಲಾಗಬಹುದು.

ಉಪಾಧ್ಯಕ್ಷರೇ, ಇವತ್ತು ಇವರ ಆಡಳಿತದಲ್ಲಿ ಶೋಷಣೆ, ಭ್ರಷ್ಟಾಚಾರ ದಿನದಿನಕ್ಕೆ ಜಾಸ್ತಿಯಾಗುತ್ತಿದೆ. ಈ ಒಂದು ಪರಿಸ್ಥಿತಿಯ ಜೊತೆಗೆ ಜನರು ಅನಿವಾರ್ಯವಾಗಿ ಹೊಂದಿಕೊಳ್ಳುವಂಥ ಒಂದು ಪರಿಸ್ಥಿತಿ. ಮೇಲಾಧಿಕಾರಿ ಯಾರಾದರೂ ಕಾನೂನುಬಾಹಿರ ಚಟುವಟಿಕೆ ಮಾಡಿ ಕೈ ತುಂಬಾಲಂಚ ತೆಗೆದುಕೊಂಡಿದ್ದು ಗೊತ್ತಾದರೆ ನನಗೆ ಏನೂ ಗೊತ್ತಿಲ್ಲವೆಂದು ಎಲ್ಲರೂ ಮಾತನಾಡುವಂಥ ಪರಿಸ್ಥಿತಿ. ಏಕೆಂದರೆ ನಾಳೆ ನಾವೆಲ್ಲ ಸಿಕ್ಕಿ ಬೀಳುತ್ತೇವೆಂಬ ಭಯ. ಅರಣ್ಯ ಇಲಾಖೆಯವರು ಲಂಚ ಹೊಡೆದು ಕಾಡನ್ನು ಲೂಟಿ ಮಾಡುತ್ತಿದ್ದರೆ, ಲಾರಿಗಳಲ್ಲಿ ಮರುಮುಟ್ಟುಗಳನ್ನು ಸಾಗಿಸುತ್ತಿದ್ದರೆ ಇದರ ಬಗ್ಗೆ ಯಾರಾದರೂ ಒಬ್ಬ ರೈತ, ಒಬ್ಬ ಪ್ರಾಮಾಣಿಕ ವ್ಯಕ್ತಿ ಸೊಲ್ಲು ಎತ್ತಿದರೆ ನಾಳೆ ತನ್ನ ಬೇಲಿಗೆ ಮುಳ್ಳುತರುವುದಕ್ಕೆ, ಗೂಟ ತರುವುದಕ್ಕೆ ಎಲ್ಲಿ ತೊಂದರೆಯಾಗುತ್ತದೆಂಬ ಭಯದಿಂದ ತತ್ತರಿಸಿ ಹೋಗಿ ಅದು ಎಲ್ಲವನ್ನೂ ಮುಚ್ಚಿಟ್ಟುಕೊಳ್ಳುವಂಥ ಒಂದು ಪರಿಸ್ಥಿತಿ. ಪೊಲೀಸರೇ ನಿಂತು ಕೊಲೆ, ಲೂಟಿ ಮಾಡಿಸಿದರೂ ಇದರ ಬಗ್ಗೆ ಒಂದು ಚಕಾರ ಎತ್ತುವಂಥ ಧೈರ್ಯ ಇವತ್ತು ಈ ರಾಜ್ಯದ ಜನರಿಗೆ ಇಲ್ಲ. ನಾಳೆ ನಮ್ಮನ್ನು ಎಳೆದುಕೊಂಡು ಹೋಗಿ ಎಲ್ಲಿ ಒದ್ದು ಕೊಲ್ಲುತ್ತಾರೆಂಬ ಭಯ ಇವತ್ತು ರಾಜ್ಯದಲ್ಲಿ ನಮ್ಮನ್ನು ಕಾಡುತ್ತಿದೆ. ಹಾಡುಹಗಲಲ್ಲೇ ಬೆಂಗಳೂರಿನಲ್ಲಿ ನಾವು ಹಿಂದೆಂದೂ ಕಾಣಲಿಲ್ಲ. ಮನೆಮಠಗಳಿಗೆ ಕಳ್ಳಕಾಕರು ನುಗ್ಗಿ ಲೂಟಿ ಮಾಡುತ್ತಿದ್ದಾರೆ. ಸರಿ, ಒಡವೆ, ಮನೆಯಲ್ಲಿರುವ ವಸ್ತುಗಳು, ಆಸ್ತಿಪಾಸ್ತಿ ಲೂಟಿಯಾಗುತ್ತಿದೆ. ಮೈಸೂರಿನಲ್ಲಿ 10-12 ದಿನಗಳ ಹಿಂದೆ ನಡೆದಿದ್ದು ಶ್ರೀ ಸಿದ್ದರಾಮಯ್ಯನವರಿಗೆ ಗೊತ್ತಿರಬಹುದು. ಹಾಡುಹಗಲೇ ಒಬ್ಬ ಮನೆಗೆ ನುಗ್ಗಿ ಯಾವ ರೀತಿ ಹೆಣ್ಣು ಮಗಳ ಕೊಲೆ ಮಾಡಿದ ಮತ್ತು ಅವಳ ಆಸ್ತಿ ಪಾಸ್ತಿ, ಮೈಮೇಲೆ ಇದ್ದ ಒಡವೆ ವಸ್ತುಗಳನ್ನು ದೋಚಿಕೊಂಡು ಹೋದ, ಎಂಬುದು ಇದೇ ರೀತಿ 4-5 ಘಟನೆಗಳು ನಡೆದಿದ್ದು 3 ದಿವಸಗಳ ಹಿಂದೆ ನಾನು ಅಲ್ಲಿಗೆ ಹೋದಾಗ ಗೊತ್ತಾಯಿತು. ಅದು ನಿಮಗೂ ಗೊತ್ತಿರಬಹುದೆಂದು ತಿಳಿದಿದ್ದೇನೆ. ಇವತ್ತು ಗ್ರಾನೈಟ್ ಲಾಬಿ, ಬಿಲ್ಡರ್ಸ್ ಲಾಬಿ, ನೆಲಗಳ್ಳರ ಲಾಬಿ, ಲಿಕ್ಕರ್

ಲಾಬಿ ಸರ್ಕಾರವನ್ನು ಆಳುತ್ತಿರುವ ಸ್ಥಂಭಗಳಾಗಿವೆ. ಸಾಮಾನ್ಯವಾಗಿ ಸಾರ್ವತ್ರಿಕವಾಗಿ ಜನ ಮಾತನಾಡುವ ಒಂದು ಪರಿಸ್ಥಿತಿಯನ್ನು ಇವತ್ತು ನಾವು ಕಾಣುತ್ತಿದ್ದೇವೆ.

ಶ್ರೀ ಸಿದ್ಧರಾಮಯ್ಯನವರು ಮೊನ್ನೆ ಮಾರ್ಚ್‌ನಲ್ಲಿ ಬಜೆಟ್ ಮಂಡನೆ ಮಾಡಿದರು. ಆಗ 12339 ಕೋಟಿ ರೂಪಾಯಿ ಇದ್ದ ಒಟ್ಟು ವೆಚ್ಚದ ಅಂದಾಜು ಆಗಸ್ಟ್ 13ಕ್ಕೆ ಬಜೆಟ್ ಮಂಡನೆ ಮಾಡಿದಾಗ 13617 ಕೋಟಿ ರೂಪಾಯಿ ಆಯಿತು. ಮತ್ತೆ 97 ಕೋಟಿ ಒಟ್ಟು 13714 ಕೋಟಿ ರೂಪಾಯಿ ಏತಕ್ಕೆ ಆಯಿತು ಎಂಬುದು ಗೊತ್ತಿಲ್ಲ. ಇದರಲ್ಲಿ 1650 ಕೋಟಿ ರೂಪಾಯಿ ಶಿಕ್ಷಣಕ್ಕೆ ನೀವು ಖರ್ಚು ಮಾಡುತ್ತೀರಿ. 1850 ಕೋಟಿ ರೂಪಾಯಿ ನೀರಾವರಿ ಮತ್ತು ವಿದ್ಯುತ್‌ಗೆ ಖರ್ಚು ಮಾಡುತ್ತೀರಿ, 2611 ಕೋಟಿ ರೂಪಾಯಿಗಳನ್ನು ಮರುಪಾವತಿ ಮತ್ತು ಬಡ್ಡಿಗಾಗಿ ಖರ್ಚು ಮಾಡುವ ಪರಿಸ್ಥಿತಿ ಇದು ನಮ್ಮ ರಾಜ್ಯದ ಆರ್ಥಿಕ ಸ್ಥಿತಿ. ಹದಗೆಟ್ಟ ಆರ್ಥಿಕ ಸ್ಥಿತಿಗೆ ಇದೊಂದು ಕೈಗನ್ನಡಿ ಎಂದು ನಾನಾದರೂ ತಿಳಿದುಕೊಂಡಿದ್ದೇನೆ. ಕಳೆದ ವರ್ಷದ ನಿಗದಿತ ವೆಚ್ಚಕ್ಕಿಂತ 600 ಕೋಟಿ ರೂಪಾಯಿ ಕಡಿಮೆ ಆಯಿತು. ಸ್ವಾಮಿ, ನಿಮ್ಮನ್ನು ಕೇಳುತ್ತೇನೆ. ನೀವು ಬಜೆಟ್ ಮಂಡನೆ ಮಾಡಿ 5 ತಿಂಗಳಾಯಿತು. ತಾವು ಯಾವ ಯಾವ ಬಾಬಿಗೆ ಎಷ್ಟೆಷ್ಟು ಹಣವನ್ನು ಖರ್ಚು ಮಾಡಿದ್ದೀರಿ. ಆ ಅಂಕಿಅಂಶ ಕೊಡುತ್ತೀರೇನು? ವ್ಯವಸ್ಥಿತವಾಗಿ ತಿಂಗಳಿಗೊಮ್ಮೆ ಸರ್ಕಾರಿ ನೌಕರರಿಗೆ ಸಂಬಳ ಕೊಡುವುದು ಬಿಟ್ಟು ಕರ್ನಾಟಕ ರಾಜ್ಯದಲ್ಲಿ ಯಾವುದಾದರೂ ಅಭಿವೃದ್ಧಿ ಕಾರ್ಯ ಆಗುತ್ತಿದೆ ಏನು? ಇನ್ನೂ ಕಾಮಗಾರಿಗಳು ಮಂಜೂರಾತಿ ಆಗಿಲ್ಲ. ಎಸ್ಟಿಮೇಟ್ ಆಗಿ, ಅಡ್ಮಿನಿಸ್ಟ್ರೇಟೀವ್ ಅಪ್ರೂವಲ್ ಆಗಿ ಅದು ಕಾರ್ಯರೂಪಕ್ಕೆ ಬರುವುದಕ್ಕೆ ಎರಡು ತಿಂಗಳು ಬೇಕು. ಹೋದ ವರ್ಷ ಇದೇ ಸ್ಥಿತಿಯನ್ನು ನಾವು ಎದುರಿಸಿದೆವು. ಶ್ರೀ ಸಿದ್ಧರಾಮಯ್ಯನವರು ಮತ್ತೆ ಮತ್ತೆ ಹೇಳುತ್ತಾರೆ. ಯಡಿಯೂರಪ್ಪನವರೇ, ನಾವು ಸಾಲವನ್ನು ಮಾಡಿಲ್ಲ. ಹಿಂದಿನ ಸರ್ಕಾರ ಮಾಡಿದ ಸಾಲವನ್ನು ನಾವು ತೀರಿಸಿದ್ದೇವೆ. ಆ ಪರಿಸ್ಥಿತಿ ನಮ್ಮದು ಇಲ್ಲವೆಂದು ಹೇಳುತ್ತಾರೆ

ಸರ್ಕಾರಿ ನೌಕರರಿಗೆ ಸಂಬಳ ಸರಿಯಾಗಿ ಕೊಟ್ಟರೆ ಅದೇ ದೊಡ್ಡ ಸಾಧನೆ ಎಂದು ತಾವು ತಿಳಿದುಕೊಂಡಿದ್ದೀರಿ. ಇವತ್ತು ಅಧಿಕಾರ ವಿಕೇಂದ್ರೀಕರಣದ ಬಗ್ಗೆ ತಾವು ಮಾತನಾಡುತ್ತೀರಿ. ಗ್ರಾಮ ಪಂಚಾಯಿತಿ ಸದಸ್ಯರಿಗೆ, ವಿಧಾನ ಪರಿಷತ್ತಿಗೆ ಆಯ್ಕೆಯಾಗುವಂಥ ಸಂದರ್ಭದಲ್ಲಿ ಅವರ ಓಟಿನ ಹಕ್ಕನ್ನು ಕಿತ್ತುಕೊಳ್ಳುವಂಥ ಜನತಂತ್ರದ ಕೊಲೆಗಡುಕರು ಎಂಬ ಮಾತು ಮನೆ ಮಾತಾಗಿದೆ. ಗ್ರಾಮಗಳಿಗೆ ಹೋದಾಗ ಗೊತ್ತಾಗುತ್ತದೆ. ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಿದೆವು ಎಂದು ರಾಜ್ಯದ ಉದ್ದಗಲಕ್ಕೆ ಹೇಳಿಕೊಂಡು ಬಂದಿರಿ. ವಿಧಾನ ಪರಿಷತ್ತಿನ 25 ಸ್ಥಾನಗಳಿಗೆ ಚುನಾವಣೆ ನಡೆಸುವಂಥ ಸಂದರ್ಭದಲ್ಲಿ 80627 ಪಂಚಾಯಿತಿ ಸದಸ್ಯರಿಗೆ ಮತದಾನದ ಹಕ್ಕನ್ನು ಕಸಿಯುವುದಕ್ಕೋಸ್ಕರ ಒಂದು ಸುಗ್ರೀವಾಜ್ಞೆ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿರುವ ನಿಮಗೆ ಪಕ್ಷಾತೀತವಾಗಿ ಗೆದ್ದಿರುವ ಪ್ರಜಾಸತ್ತಾತ್ಮಕವಾಗಿ ಆಯ್ಕೆಯಾಗಿರುವ ಸದಸ್ಯರ ಮೇಲೆ ನಂಬಿಕೆ ಇಲ್ಲ, ಏಕೆಂದರೆ ಅವರು ಸ್ವತಂತ್ರವಾಗಿ ಗೆದ್ದರೂ, ನಾಳೆ ಓಟು ಕೊಡಲಿಕ್ಕೆ ಇಲ್ಲ.

ವಿಧಾನ ಪರಿಷತ್ತಿಗೆ ನಿಮ್ಮವರು ಆಯ್ಕೆಯಾಗುವುದು ಕಷ್ಟವಾಗಬಹುದು. ಅದಕ್ಕೆ ಕೇಂದ್ರ ಸರ್ಕಾರಕ್ಕೆ ಸರ್ಕಾರಕ್ಕೆ ಒತ್ತಾಯ ಮಾಡುವ ಪ್ರಯತ್ನ ಮಾಡಿದಿರಿ. ನಿಮ್ಮ ಶಿಫಾರಸ್ಸಿನ ಮೇಲೆ 21-6-95ಕ್ಕೆ ಸುಗ್ರೀವಾಜ್ಞೆ ಹೊರಡಿಸಿ ಪ್ರಜಾಪ್ರತಿನಿಧಿ ಕಾಯ್ದೆ 1950ಕ್ಕೆ ತಿದ್ದುಪಡಿ ಮಸೂದೆಯನ್ನು 20-3-96ಕ್ಕೆ ಲೋಕಸಭೆಯಲ್ಲಿ ಮಂಡಿಸಿ 5640

ಪಂಚಾಯಿತಿಗಳಲ್ಲಿ ಸುಮಾರು 80627 ಸದಸ್ಯರಿಗೆ ಮತದಾನದ ಹಕ್ಕನ್ನು ತೆಗೆದುಹಾಕಲು ವ್ಯವಸ್ಥಿತವಾದ ಪಿತೂರಿ ಮಾಡುತ್ತಿದ್ದೀರಿ. ಇದು ಎಷ್ಟರಮಟ್ಟಿಗೆ ನಿಮಗೆ ಗೌರವ ತರುತ್ತದೆ? ಅಧಿಕಾರ ವಿಕೇಂದ್ರೀಕರಣದ ಬಗ್ಗೆ ಮಾತನಾಡುತ್ತೀರಿ, ಜಯಪ್ರಕಾಶ್ ನಾರಾಯಣರ ಅವರ ಬಗ್ಗೆ ಮಾತನಾಡುತ್ತೀರಿ, ಗ್ರಾಮೀಣ ಪ್ರದೇಶದ ಜನರಿಗೆ ಅಧಿಕಾರ ಸಿಗಬೇಕೆಂದು ಹೇಳುತ್ತೀರಿ. ಆದರೆ ಇವತ್ತು ಈ ಸದನವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಆ ಚುನಾಯಿತ 80627 ಪ್ರತಿನಿಧಿಗಳಿಗೆ ಓಟನ್ನು ಹಾಕುವಂಥ ಹಕ್ಕನ್ನು ಕಿತ್ತುಕೊಳ್ಳುವುದಕ್ಕೆ ಹೊರಟಿದ್ದೀರಲ್ಲಾ, ಇದು ಸರಿಯೇ? ಅವರೇ ತಾನೇ ನಿಮಗೆ ಆಧಾರಸ್ತಂಭ. ಅವರೇ ತಾನೇ ನಿಮ್ಮನ್ನು ನಂಬಿ ಲೋಕಸಭೆಗೆ ಆಯ್ಕೆ ಯಾಗುವಂಥ ಅವಕಾಶ ಮಾಡಿಕೊಟ್ಟವರು, ಕೇಂದ್ರದಲ್ಲಿ ನಿಮ್ಮ ಸರ್ಕಾರ ಬರುವುದಕ್ಕೆ ಕಾರಣಕರ್ತರಾದವರು. 80627 ಜನರಿಗೆ ಈ ರೀತಿ ಮಾಡಿ ಇವತ್ತು ನಿಮ್ಮ ಮಂತ್ರಿ, ಶಾಸಕರು ಅಕಸ್ಮಾತ್ ಆಗಿದ್ದವರು ಸರ್ಕಾರದಲ್ಲಿ ಉಳಿಯುವುದಕ್ಕೆ ಸಾಧ್ಯವಿಲ್ಲ. ಆದರೆ ಹಳ್ಳಿಗೆ ಹೋದರೆ ನಿಮ್ಮನ್ನು ಅವರುಗಳು ಅಟ್ಟಿಸಿಕೊಂಡು ಬರುವಂಥ ಒಂದು ವಾತಾವರಣ, ಆಕ್ರೋಶ, ಇವತ್ತು ಅದರ ಒಂದು ಬಿಸಿ ನಿಮಗೆ ತಟ್ಟುವುದು ಇದೆ. ನಮ್ಮ ಶ್ರೀ ಜೆ.ಹೆಚ್. ಪಟೇಲರಿಗೂ ಮತ್ತು ಎಕ್ಸೈಸ್ ಲಾಬಿಗೂ ಬಹಳ ಹತ್ತಿರದ ಸಂಬಂಧ ಮೊದಲಿನಿಂದ. ನಾನು ಬಹಳ ಜವಾಬ್ದಾರಿಯಿಂದ ಈ ಮಾತು ಹೇಳುತ್ತಿದ್ದೇನೆ. ಒಂದು ಅಂದಾಜಿನ ಪ್ರಕಾರ ಪ್ರತಿನಿತ್ಯ ಸೆಕೆಂಡ್ಸ್ ಮೂಲಕ ಒಂದು ಕೋಟಿ ರೂಪಾಯಿ ಸರ್ಕಾರದ ಬೊಕ್ಕಸಕ್ಕೆ ಬರುವಂಥ ಆದಾಯ ಲೂಟಿಯಾಗುತ್ತಿದೆ. ಯಾವುದೇ ಒಂದು ರೀಟೈಲ್ ಲಿಕ್ಕರ್ ಷಾಪಿಗೆ ಹೋಗಿ, ಯಾವ ಒಂದು ಅಂಗಡಿಗೆ ಬೇಕಾದರೆ ಹೋಗಿ ಸಿಗುತ್ತದೆ.

11.00 ಎ.ಎಂ.

ನಿಮ್ಮ ಎಕ್ಸೈಜ್ ಇಲಾಖೆ ಅಧಿಕಾರಿ ಹೋಗಿ ಅದನ್ನು ತಡೆದು ಅವನ ಮೇಲೆ ಕ್ರಮ ತೆಗೆದುಕೊಳ್ಳುವ ಒಂದು ಉದಾಹರಣೆ ಇದೆಯೇ? ಸಾಧ್ಯವಿಲ್ಲ. ಒಂದು ರೀತಿ ಎಕ್ಸೈಜ್ ಲಾಬಿಗೆ ನಿಮ್ಮ ಸರ್ಕಾರದಲ್ಲಿ ರಾಜಾಶ್ರಯ ಸಿಕ್ಕಿದೆ. ಲೂಟಿಯಾಗುತ್ತಿದೆ. ಸರ್ಕಾರದ ಖಜಾನೆ ಖಾಲಿಯಾಗಿ ಜನ ಸಂಕಷ್ಟದಲ್ಲಿ ಸಿಕ್ಕಿರುವಂಥ ಕಾಲದಲ್ಲಿ ಈ ರೀತಿ ಲೋಕಸಭಾ ಚುನಾವಣೆಯಲ್ಲಿ ನಿಮಗೆ ಬೆಂಬಲ ಕೊಟ್ಟಂಥ ಜನರಿಗೆ ಉಪಕಾರ ಮಾಡುವುದಕ್ಕೋಸ್ಕರ ಎಕ್ಸೈಜ್ ನೀತಿಯಲ್ಲಿ ಒಂದು ಬದಲಾವಣೆಯಾಯಿತು. ಯಾರು ಅನುಮತಿಯನ್ನು ಕೊಟ್ಟರು? ಯಾರು ಅನುಮತಿಯನ್ನು ಕೊಟ್ಟರು ಸ್ವಾಮಿ?

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ ......

ಶ್ರೀ ಬಿ.ಎನ್. ಯಡಿಯೂರಪ್ಪ : ಇಲ್ಲ. ನಾನು ಈಲ್ಡ್ ಆಗಿಲ್ಲ. ನೀವು ಕೊನೆಯಲ್ಲಿ ಮಾತನಾಡಿ. ನಾನು ಈಲ್ಡ್ ಆಗಿಲ್ಲ. ಆಮೇಲೆ ಮಾತನಾಡಿ.

ಶ್ರೀ ಆರ್.ವಿ. ದೇಶಪಾಂಡೆ: ಸ್ಪೆಸಿಫಿಕ್ಕಾಗಿ ಆರೋಪ ಮಾಡಲಿ. ಎಕ್ಸೈಜ್ ಲಾಬಿಗೂ ಸಿ.ಎಂ. ಗೂ ಏನು ಸಂಬಂಧ ಇದೆ? ಮಾನ್ಯ ವಿರೋಧಪಕ್ಷದ ನಾಯಕರಿಗೆ ಅಧಿಕಾರ ಇದೆ ಹೇಳುವುದಕ್ಕೆ. ಆದರೆ ಸ್ಪೆಸಿಫಿಕ್ಕಾಗಿ ಹೇಳಲಿ. ವೇಗ್ ಆಗಿ ಒಂದು ಕೋಟಿ ಮಾಡಿದ್ದಾರೆ ಹತ್ತು ಕೋಟಿ ಮಾಡಿದ್ದಾರೆ ಎಂದು ಹೇಳುವುದು ಬೇಡ.

(ಗೊಂದಲ)

ಉಪಾಧ್ಯಕ್ಷರು : ತಾವು ಕೂಡಿ. ಯಡಿಯೂರಪ್ಪನವರೇ, ತಾವು ಮಾತನಾಡಿ.

(ಗೊಂದಲ)

ಉಪಾಧ್ಯಕ್ಷರು : ತಾವು ದಯಮಾಡಿ ಕೊಡಿ ಈಶ್ವರಪ್ಪನವರೇ.

ಶ್ರೀ ಕೆ.ಎಸ್. ಈಶ್ವರಪ್ಪ : ಎಕ್ಸೈಜ್ ಲಾಬಿಗೂ ಇವರಿಗೂ ಏನು ಸಂಬಂಧ ಇದೆ? ಎಕ್ಸೈಜ್ ಲಾಬಿಗೆ ರಕ್ಷಣೆ ಕೊಡುವ ಮಂತ್ರಿಗಳು ಇವರು?

ಉಪಾಧ್ಯಕ್ಷರು : ತಾವು ದಯಮಾಡಿ ಕೂಡ್ರಿ. ಯಡಿಯೂರಪ್ಪನವರೇ, ತಾವು ಮಾತನಾಡಿ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರಿಗೆ ಮತ್ತು ವಿರೋಧ ಪಕ್ಷದ ಸದಸ್ಯರಿಗೆ ಸರ್ಕಾರದ ವಿರುದ್ಧ ಆರೋಪ ಮಾಡುವುದಕ್ಕೆ ಸಂಪೂರ್ಣ ಅಧಿಕಾರ ಇದೆ. ಇದು ನೋ ಕಾನ್‌ಫಿಡೆನ್ಸ್ ಮೋಷನ್......

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಅವರು ಉದಾಹರಣೆ ಕೊಟ್ಟು ಹೇಳಲಿ. ಜನರಲ್ಲಾಗಿ ಅಲಿಗೇಷನ್ ಮಾಡಿದರೆ ಹೇಗೆ? ನೇರವಾಗಿ ಹೇಳಲಿ. ಸಬ್‌ಸ್ಟ್ಯಾನ್ಷಿಯೇಟ್ ಮಾಡಲಿ. ಸ್ಪೆಸಿಫಿಕ್ ಛಾರ್ಜಸ್ ಮಾಡಲಿ.

(ಗೊಂದಲ)

ಉಪಾಧ್ಯಕ್ಷರು : ಯಡಿಯೂರಪ್ಪನವರೇ, ತಾವು ಮಾತನಾಡಿ. ತಾವು ದಯಮಾಡಿ ಕುಳಿತುಕೊಳ್ಳಿ

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಉಪಾಧ್ಯಕ್ಷರೆ, ಅವರು ಏನಾದರೂ ಹೇಳಲಿ. ಅವರು ಏನೇ ಆಪಾದನೆಗಳನ್ನು ಮಾಡಿದರೆ ಅದನ್ನು ಸಬ್‌ಸ್ಟ್ಯಾನ್‌ಷಿಯೇಟ್ ಮಾಡಿಕೊಳ್ಳಬೇಕು. ಇಲ್ಲದಿದ್ದರೆ ಆಮೇಲೆ ನಾನೇನು ಹೇಳಬೇಕೋ ಅದನ್ನು ಹೇಳುತ್ತೇನೆ.

(ಗೊಂದಲ)

ಉಪಾಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ ನಿಮ್ಮ ನಾಯಕರು ಮಾತನಾಡುತ್ತಿದ್ದಾರೆ.

ಶ್ರೀ ಎಸ್. ಸುರೇಶ್ ಕುಮಾರ್ : ಕೋರ್ಟಿನಲ್ಲಿ ಕೇವಿಯೆಟ್ ಹಾಕುತ್ತಾರೆ. ಹಾಗೆ ದೇಶಪಾಂಡೆಯವರು ಕೇವಿಯೆಟ್ ಹಾಕುತ್ತಿದ್ದಾರೆ ತಮ್ಮ ಮೇಲೆ ಆಕ್ಷನ್ ತೆಗೆದುಕೊಳ್ಳಬಾರದು ಆಮೇಲೆ ಎಂದು.

ಶ್ರೀ ಕೆ.ಬಿ. ಶಾಣಪ್ಪ : ಡೇಲಿ ಒಂದು ಕೋಟಿ ರೂಪಾಯಿ ಹೋಗುತ್ತಿದೆ ಎಂದು ಹೇಳಿದರು. ಹಾಗೇನಾದರೂ ಇದ್ದರೆ ದಯಮಾಡಿ ಹೇಳಿ. ಈಗಲೇ ನಾನು ಹೊರಗೆ ಹೋಗಿಬಿಡುತ್ತೇನೆ.

(ಗೊಂದಲ)

ಶ್ರೀ ಅಶೋಕ್ ಎಸ್. ಕಾಟ್ವೆ : ಒಂದು ಕೋಟಿಗಿಂತ ಹೆಚ್ಚು ಹಣ ಹೋಗುತ್ತಿದೆ.

ಶ್ರೀ ಸಿ. ಭೈರೇಗೌಡ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರು ಬಹಳ ಗಹನವಾದಂಥ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಸಂತೋಷ. ಅವರು ಪ್ರಸ್ತುತ ಎಕ್ಸೈಜ್ ಬಗ್ಗೆ ಮಾತನಾಡುತ್ತಿದ್ದಾರೆ. ಹಿಂದೆ ಒಂದು ಸಾರಿ ನಾನು

ಇದೇ ಸದನದಲ್ಲಿ ದಿನವೊಂದಕ್ಕೆ ಒಂದು ಕೋಟಿ ರೂಪಾಯಿ ಹೋಗುತ್ತದೆಂದು ಆರೋಪ ಮಾಡಿದ್ದೆ. ಎಲ್ಲೆಲ್ಲಿ ಎಷ್ಟೆಷ್ಟು ಹೋಗುತ್ತದೆ ಎಂದು ನಾನು ಪಟ್ಟಿ ಸಮೇತ ಕೊಟ್ಟಿದ್ದೆ. ಅದಾದ ಮೇಲೆ ಅದು ಅಕ್ಷರಶಃ ನಿಜ ಎಂದು ಈ ಸಭೆಯ ದಾಖಲೆಗಳಿಂದ ಹೊರಗೆ ಬಂದಿದೆ. ಆ ರೀತಿ ತಾವು ದಯವಿಟ್ಟು ಇಂಥಿಂಥ ಕರೆ ಈ ರೀತಿ ಆಗುತ್ತಿದೆ ಎಂಬ ಮಾತನ್ನು ತಾವು ಹೇಳಿದರೆ ನಿಮ್ಮ ಮಾತಿಗೆ ಬೆಲೆ ಬರುತ್ತದೆ. ಇಲ್ಲದಿದ್ದರೆ ಇದು ಬುಡಬುಡಿಕೆ ಅಲ್ಲಾಡಿಸಿದ ಹಾಗೆ ಆಗುತ್ತದೆ. ದಯವಿಟ್ಟು ಬುಡಬುಡಿಕೆ ಅಲ್ಲಾಡಿಸಬೇಡಿ. ಏನಿದೆ ಎಂಬುದನ್ನು ಕರಾರುವಾಕ್ಕಾಗಿ ಹೇಳಿ ನೋಡೋಣ.

ಶ್ರೀ ಅಶೋಕ್ ಎಸ್. ಕಾಟ್ವೆ : ಬನ್ನಿ ನಮ್ಮ ಜೊತೆ, ತೋರಿಸುತ್ತೇವೆ.

ಉಪಾಧ್ಯಕ್ಷರು : ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಸಿ. ಭೈರೇಗೌಡ : ನಿಮ್ಮ ಮಾತಿಗೆ ಬೆಲೆ ಬರಬೇಕಾಗಿದ್ದರೆ ಅದಕ್ಕೆ ಇಂಥಿಂಥದ್ದು ಎಂದು ನಿರ್ದಿಷ್ಟವಾಗಿ ಇರಬೇಕು. ಇಲ್ಲದಿದ್ದರೆ ಸುಮ್ಮನ ಬುಡಬುಡಿಕೆ ಅಲ್ಲಾಡಿಸಿದ ಹಾಗೆ ಆಗುತ್ತದೆ. ಅದು ಬೇಕಾಗಿಲ್ಲ ಈಗ.

ಶ್ರೀ ಗುರುಪಾದಪ್ಪ ಎಸ್. ನಾಗಮಾರಪಲ್ಲಿ : ಅಲ್ಲಿ ಲೂಟಿ ಹೊಡೆದರು ಇಲ್ಲಿ ಲೂಟಿ ಹೊಡೆದರು ಅಂದರೆ ಎಲ್ಲಿ ಲೂಟಿ ಹೊಡೆದಿದ್ದಾರೆ ಅದಕ್ಕೆ ದಾಖಲೆಗಳನ್ನು ಕೊಡಿ. ಬರೀ ಲೂಟಿ ಹೊಡೆದರು, ಇಷ್ಟೊಂದು ತಿಂದುಹಾಕಿದರು ಅಷ್ಟೊಂದು ತಿಂದುಹಾಕಿದರು ಎಂದು ಹೇಳಿದರೆ ಹೇಗೆ? ನಿಮ್ಮ ಮಾತಿಗೆ ಬೆಲೆ ಬರಲಿ, ಹೇಳಿರಿ ಸರಿಯಾಗಿ. ನಿರ್ದಿಷ್ಟವಾಗಿ ಛಾರ್ಜ್‌ಮಾಡಿರಿ. ಸುಮ್ಮನೆ ಹೇಳಿದರೆ ಉಪಯೋಗ ಇಲ್ಲ.

(ಗೊಂದಲ)

ಶ್ರೀ ಗುರುಪಾದಪ್ಪ ಎಸ್. ನಾಗಮಾರಪಲ್ಲಿ : ಮತ್ತೆ ನಾನು ಅಷ್ಟು ಲೂಟಿ ಹೊಡೆದರು ಅಲ್ಲಿ ತಿಂದರು ಎಂದು ಮಾತನಾಡಿದರೆ ಸರಿಯಾಗುತ್ತದೆಯೇ? ಏತಕ್ಕೆ ಹೀಗೆ ಮನಸ್ಸಿಗೆ ಬಂದಹಾಗೆ ಮಾತನಾಡುತ್ತೀರಿ?

ಶ್ರೀ ಎಂ. ಶ್ರೀನಿವಾಸ್ : ಬಿ.ಡಿ.ಎ. ಪರ್ಮಿಷನ್ ಇಲ್ಲದೆ ಒತ್ತುವರಿ ಮಾಡಿಕೊಳ್ಳುತ್ತಿದ್ದಾರೆ ಎಂದು ಹೇಳಿದ್ದೇವೆ. ಸುಮ್ಮನೆ ಮಾತನಾಡುತ್ತೇವೆಯೇ?

ಉಪಾಧ್ಯಕ್ಷರು : ವಾಟಾಳ್ ನಾಗರಾಜ್ ಅವರೇ, ಏನು ಹೇಳಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಈಗ ವಿರೋಧಪಕ್ಷದ ನಾಯಕರು ಅವಿಶ್ವಾಸ ನಿರ್ಣಯದ ಬಗ್ಗೆ ಚರ್ಚೆಯನ್ನು ಆರಂಭಿಸಿದ್ದಾರೆ. ಉತ್ತರ ಕೊಡುವುದಕ್ಕೆ ಸಮಗ್ರವಾಗಿ ಮುಖ್ಯಮಂತ್ರಿಗಳಿಂದ ಎಲ್ಲರೂ ಸಜ್ಜಾಗಿ ಬಂದು ನಿಂತಿದ್ದೀರಿ. ಈ ಮಧ್ಯೆ ಶ್ರೀಮಾನ್ ದೇಶಪಾಂಡೆಯವರು ಎದ್ದರು. ನಾನು ನಿನ್ನೆ ನೋಡಿದೆ. ಅವರಿಗೆ ನಿದ್ದೆ ಇಲ್ಲ ಎಂದು ತಿಳಿದುಕೊಂಡಿದ್ದೆ. ನಿನ್ನೆ ಪತ್ರಿಕೆಯಲ್ಲಿ ಆಕಳಿಸುತ್ತಾ ಇದ್ದುದನ್ನು ನೋಡಿ. ಆಮೇಲೆ ಈಗ ಅವರು ಎಚ್ಚರವಾಗಿರುವುದನ್ನು ನೋಡಿ ನನಗೆ ಬಹಳ ಸಂತೋಷವಾಯಿತು. ಪತ್ರಿಕೆಯಲ್ಲಿ ಇವರ ಆಕಳಿಕೆಯದು ಭಾರಿ ದೊಡ್ಡದಾಗಿ ನಾಲ್ಕು ಕಾಲಂ ಹಾಕಿದದಾರೆ. ಏಕೆ, ನಿದ್ದೆ ಇಲ್ಲವೇ ತಮಗೆ? ಆದ್ದರಿಂದ ಈಗ ಎಚ್ಚರವಿರುವುದನ್ನು ನೋಡಿದರೆ ಸಂತೋಷ. ಪತ್ರಿಕೆಯಲ್ಲಿ ನೋಡಿದೆವು ನಾಳೆ ನಾಡಿದ್ದು ಹೊರಗಡೆ ಹೋಗುತ್ತೀರಿ ನೀವು ಎಂದು. ಆದರೆ ಈಗಲೇ ಸರ್ಕಾರದ ಪರ ಇಷ್ಟು ನಿಂತುಕೊಂಡು ಭದ್ರವಾಗಿ ನಿಂತಿರುವುದು ನೋಡಿದರೆ ನೀವು ಇರುತ್ತೀರೋ

ಹೋಗುತ್ತೀರೋ? ಶಾಣಪ್ಪನವರು ಸುಮ್ಮನೆ ಹೋಗುತ್ತೇನೆ ಎಂದು ಹೇಳುತ್ತಾರೆ. ಇವರು ಹೋಗುವವರು. ನೀವು ಏತಕ್ಕೆ ಹೋಗಬೇಕು? ನಾನು ಹೋಗುತ್ತೇನೆ ಹೊರಗೆ ಎಂದರೆ ಏನರ್ಥ?

ಶ್ರೀ ಆರ್.ವಿ. ದೇಶಪಾಂಡೆ : ನಾನು ಅದನ್ನು ನಿರ್ಣಯ ಮಾಡುತ್ತೇವೆ. ನೀವು ಕಾಳಜಿ ಮಾಡಬೇಡಿ, ನಾನು ವಿರೋಧಪಕ್ಷದ ನಾಯಕರಿಗೆ ಮಾತನಾಡುವುದಕ್ಕೆ ಅಡ್ಡ ಬಂದಿಲ್ಲ. ಸಬ್‌ಸ್ಟ್ಯಾನ್‌ಷಿಯೇಟ್ ಮಾಡಿ ಎಂದು ಹೇಳಿದ್ದೇನೆ. ವೇಗ್ ಆಗಿ ಎಲ್ಲಾ ಮಾತನಾಡಬಹುದು. ಹತ್ತು ಗಂಟೆ ಮಾತನಾಡಬಹುದು ನಾಳೆ. ಅದಕ್ಕೆ ಸಬ್‌ಸ್ಟ್ಯಾನ್‌ಷಿಯೇಟ್ ಮಾಡಿ ಎಂದು ಹೇಳುತ್ತಿದ್ದೇನೆ. ಛಾರ್ಜ್ ಮಾಡಬಾರದು ಎಂದು ಹೇಳುತ್ತಿಲ್ಲ. ಪುರಾವೆ ಇದ್ದರೆ ಹೇಳಿ. ವೇಗ್ ಆಗಿ ಹೇಳಬಾರದು.

ಶ್ರೀ ವಾಟಾಳ್ ನಾಗರಾಜ್ : ದೇಶಪಾಂಡೆ ಅವರನ್ನು ಹೊರಗೆ ಹೋಗಿ ಎಂದು ನಾನು ಹೇಳುವುದಿಲ್ಲ. ದೇಶಪಾಂಡೆಯವರನ್ನು ಹೊರಗೆ ಹೋಗಿ ಎಂದು ನಾನು ಹೇಳುವುದಕ್ಕೆ ತಯಾರಾಗಿಲ್ಲ. ಪ್ರಧಾನಮಂತ್ರಿಯವರು ಮುಖ್ಯಮಂತ್ರಿಗಳಿಗೆ ಹೇಳಿ ಹೊರಗೆ ಕಳುಹಿಸಿ ಎಂದು ಹೇಳಿದ್ದಾರೆಂದು ವಿಚಾರ ಕೇಳಿದ್ದೇನೆ ಅಷ್ಟೇ. ನಾನು ಹೇಳುತ್ತಿಲ್ಲ.

ಉಪಾಧ್ಯಕ್ಷರು : ಯಡಿಯೂರಪ್ಪನವರೇ, ತಾವು ಪ್ರಾರಂಭ ಮಾಡಿ.

ಶ್ರೀ ಗುರುಪಾದಪ್ಪ ಎಸ್. ನಾಗಮಾರಪಲ್ಲಿ : ವಿರೋಧಪಕ್ಷದ ನಾಯಕರಿಗೆ ಒಂದು ನಿಮಿಷ .....

ಉಪಾಧ್ಯಕ್ಷರು : ಬೇಡ. ಗುರುಪಾದಪ್ಪನವರೇ, ವಿರೋಧಪಕ್ಷದ ನಾಯಕರು ಮಾತನಾಡುವಾಗ ದಯಮಾಡಿ ಎಲ್ಲರೂ ಕೇಳಿ. ಸಭಾನಾಯಕರು ಮಾತನಾಡುವಾಗ ಉತ್ತರ ಹೇಳುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಅಬ್ಕಾರಿ ಸಚಿವರು ಮುಖ್ಯಮಂತ್ರಿಗಳು ಮತ್ತೆ ಸನ್ಮಾನ್ಯ ಬೈರೇಗೌಡರು, ಹೇಳುವಂಥದ್ದು ಮಾತನಾಡಿದ್ದಕ್ಕೆ ಆಧಾರ ಬೇಕು ಎಂದು ನಾನು ಒಪ್ಪುತ್ತೇನೆ. ತಾವು ಏನು ಹೇಳಿದಿರಿ ಎರಡು ವರ್ಷಗಳಿಂದ ನಮ್ಮ ಪಕ್ಕದಲ್ ಕುಳಿತಾಗ ಪ್ರತಿನಿತ್ಯ ಒಂದು ಕೋಟಿ ರೂಪಾಯಿ ಎಕ್ಸೈಜ್‌ಗೆ ಬರಬೇಕಾಗಿರುವುದು ಸೆಕೆಂಡ್ಸ್ ಮೂಲಕ ಲೂಟಿಯಾಗುತ್ತಿದೆ. ಎಂದು ಹೇಳುತ್ತಿದ್ದಾಗ ನೀವು ಅಂಕಿಅಂಶಗಳನ್ನು ತಂದುಕೊಡುತ್ತಾ ಇದ್ದಿರಿ ಅಲ್ಲವೇ? ಆರೋಪ ಮಾಡಿದಿರಿ. ನಮ್ಮ ಪ್ರಕಾರ ಮಂತ್ರಿಗಳಾಗಿ ನೀವು ಜವಾಬ್ದಾರಿಯಿಂದ ಹೇಳುತ್ತಾ ಇದ್ದೀರಿ. ನಾನು ಒಂದು ಕೋಟಿ ರೂಪಾಯಿ ಸೆಕೆಂಡ್ಸ್ ಮೂಲಕ ಪ್ರತಿನಿತ್ಯ ಆದಾಯ ಬರುವುದು ಲೂಟಿಯಾಗುತ್ತಿದೆ ಎಂದು ಹೇಳಿದೆ. ಅಂಕಿಅಂಶ ಇದೆ. ನಾನು ಪ್ರೂವ್ ಮಾಡಿದ್ದೇನೆ ಎಂದು ಹೇಳಿದ್ದಿರಿ. ಹಾಗಾದರೆ ಒಬ್ಬ ಜವಾಬ್ದಾರಿ ಸಚಿವರಾಗಿ ಇದನ್ನು ಹೇಳಿದ ಮೇಲೆ ಎರಡು ವರ್ಷದಲ್ಲಿ ಅಬ್ಕಾರಿಯಲ್ಲಿ ಒಂದು ದಿವಸಕ್ಕೆ ಒಂದು ಕೋಟಿ ರೂಪಾಯಿಗಳಂತೆ 365 ಕೋಟಿ ರೂಪಾಯಿ ಬೊಕ್ಕಸಕ್ಕೆ ಆದಾಯ ಬರಬೇಕಾಗಿತ್ತು. ಅಂಕಿಅಂಶದಲ್ಲಿ ಅದು ಕಾಣುವುದಿಲ್ಲ. ಎರಡನೆಯದು ಶಿವಮೊಗ್ಗಕ್ಕೆ ಬನ್ನಿ. ಪ್ರಾಣದ ಹಂಗನ್ನೂ ತೊರೆದು ಒಬ್ಬ ಎಕ್ಸೈಜ್ ಆಫೀಸರ್ ಸೆಕೆಂಡ್ಸ್ ಮಾಲನ್ನು ಹಿಡಿದ. ಏನು ಮಾಡಿದಿರಿ? ಹಿಡಿದಂಥ ಅಧಿಕಾರಿಗೆ ರಕ್ಷಣೆ ಕೊಟ್ಟಿರೋ? ಇಲ್ಲ. ಸೆಕೆಂಡ್ಸ್ ಮಾರುವಂಥ ಆ ಹೆಂಡದ ದೊರೆಗಳ ಪರವಾಗಿ ನಿಮ್ಮ ಸರ್ಕಾರ ನಿಲ್ಲಿತು. ಬನ್ನಿ ತೋರಿಸುತ್ತೇನೆ. ಶಾಣಪ್ಪನವರೇ, ಹೇಳಿ ಇದು ಫ್ಯಾಕ್ಟ್ಸ್ ಅಲ್ಲವೆ?

ಶ್ರೀ ಸಿ. ಬೈರೇಗೌಡ : ವಿವರ ಕೊಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ವಿವರಗಳನ್ನು ಕೊಡುತ್ತಿದ್ದೇನೆ. ಒಂದೊಂದಕ್ಕೆ ಪೀಠಿಕೆ ಹಾಕುತ್ತಿದ್ದೇನೆ. ಎರಡು ವರ್ಷ ಟೈಮ್ ಇದೆ. ಏಕೆಂದರೆ ಮಾನ್ಯ ಮುಖ್ಯಮಂತ್ರಿಗಳು ಡಿಮಾಂಡ್ಸ್‌ಗಳಿಗೆ ಉತ್ತರ ಕೊಡುವಾಗ ವೇದಾಂತ ಹೇಳಿದರು. ನಾನು ವಿರೋಧಪಕ್ಷದ ನಾಯಕನಾಗಿ ಇಲ್ಲಿ ಇಲ್ಲ. ಒಂದು ಜವಾಬ್ದಾರಿ ಸ್ಥಾನದಲ್ಲಿ ನಿಂತುಕೊಂಡು ಒಂದು ಅವಿಶ್ವಾಸನಿರ್ಣಯವನ್ನು ಮಂಡನೆ ಮಾಡುವಂತಹ ಕಾಲದಲ್ಲಿ ಅನೇಕ ದಾಖಲೆಗಳನ್ನು ನಾನು ಕೊಡುತ್ತೇನೆ. ಅಂಕಿ ಅಂಶಗಳನ್ನು ಕೊಡುತ್ತೇನೆ. ನಿಮ್ಮ ಅಧಿಕಾರಗಳು, ಮಂತ್ರಿಗಳು, ನಿಮ್ಮ ಶಾಸಕರ ಬಗ್ಗೆ ಕೆಲವು ಉದಾಹರಣೆಗಳನ್ನು ಕೊಡುತ್ತೇನೆ. ಯಾವುದೂ ಮುಚ್ಚುಮರೆ ಮಾಡುವುದಿಲ್ಲ. ನಾನು 1983ರಿಂದ ಶಾಸಕನಾಗಿದ್ದೇನೆ. ನೆಲಗಳ್ಳರ ಬಗ್ಗೆ, ಗ್ರಾನೈಟ್ ಕಲ್ಲಿನ ಅವ್ಯವಹಾರದ ಬಗ್ಗೆ, ಸೈಟಿನ ವ್ಯವಹಾರದ ಬಗ್ಗೆ, ಎಕ್ಸೈಜ್ ಬಗ್ಗೆ, ಯಡಿಯೂರಪ್ಪನವರೇ ಇಂತಿಂಥವರಿಗೆ ನೀವು ರೆಕಮೆಂಡ್ ಮಾಡಿದ್ದೀರಿ ಇಂತಿಂಥ ಕೆಲಸ ನೀವು ಮಾಡಿಸಿಕೊಂಡಿರಿ ಇಂತಿಂಥ ಕೆಲಸ ಆಗಲಿಲ್ಲವೆಂದು ನೀವು ಕೂಗುತ್ತಿದ್ದೀರಿ ಎಂಬ ಬಗ್ಗೆ ಒಂದು ಉದಾಹರಣೆಯನ್ನು ಕೊಡಿ 1983 ರಿಂದ 1996ರ ವರೆಗೆ ಈ ಕೆಲಸ ಮಾಡುತ್ತಿರುವ ನನ್ನ ಬಗ್ಗೆ ನಾನು ಹೇಗೆ ಮಾತನಾಡುತ್ತಿದ್ದೇನೋ ಹಾಗೆಯೇ ನಿಮ್ಮ ಎಲ್ಲಾ ವಿವರವನ್ನು ಬಯಲು ಮಾಡಿ. ಒಂದು ಕ್ಷಣ ನಾನು ಇಲ್ಲಿ ನಿಂತುಕೊಳ್ಳುವುದಿಲ್ಲ.

ಪ್ರಜಾತಂತ್ರ ವ್ಯವಸ್ಥೆಯನ್ನು ಜನತೆಯ ಪ್ರತಿನಿಧಿಗಳಾಗಿ ನಾವು ಇಲ್ಲಿಗೆ ಬಂದಿದ್ದೇವೆ. ಕೇವಲ ಜೆ.ಹೆಚ್. ಪಟೇಲರ ಮೇಲೆ ವೈರತ್ವ ನನಗೇನಿದೇ? ಐದು ವರ್ಷ ನಿಮಗೆ ಜನ ಅಧಿಕಾರ ಕೊಟ್ಟಿದ್ದಾರೆ ನೀವು ನಡೆಸಿಕೊಂಡು ಹೋಗಿ ಎಂದು ಸಂತೋಷದಿಂದ ಹೇಳುವಂತಹ ಜನ ನಾವು. ಗೋಪಾಲಗೌಡರ ಹಿನ್ನೆಲೆಯಲ್ಲಿ ಬಂದವರು ನೀವು ಅಧಿಕಾರಕ್ಕೆ ಬಂದಾಗ, ಆಡಳಿತ ವೈಖರಿಯಲ್ಲಿ ಒಂದು ಬದಲಾವಣೆಯನ್ನು ನಾವು ನಿರೀಕ್ಷೆ ಮಾಡಿದ್ದೆವು. ನೀವು ವೇದಾಂತದ ಬಗ್ಗೆ ಹೇಳಿ. ತುಂಬಾ ಹಗುರವಾಗಿ ಅಧಿಕಾರವನ್ನು ನಡೆಸುತ್ತಿದ್ದೀರಿ. ಸೀರಿಯಸ್ಸಾಗಿ ಯಾವುದನ್ನೂ ತೆಗೆದುಕೊಳ್ಳಲಿಲ್ಲ. ಯಾವುದನ್ನೂ ಸರಿಪಡಿಸುವಂತಹ ಪ್ರಯತ್ನ ಮಾಡಲಿಲ್ಲ. ಹತ್ತು ಹೆಜ್ಜೆ ಮುಂದೆ ಹೋಗುವುದು ಬೇಡ. ಇರುವಂತಹ ವ್ಯವಸ್ಥೆಯನ್ನು ಕುಲಗೆಡಿಸಿ ಹತ್ತು ಹೆಜ್ಜೆ ಹಿಂದೆ ಹೋಗುವಂತಹ ವ್ಯವಸ್ಥೆ ನಡೆಯುತ್ತಿದೆ. ಅಡ್ಮಿನಿಸ್ಟ್ರೇಷನ್ ಕೊಲ್ಯಾಪ್ಸ್ ಆಗಿದೆ. ನಾನು -ಮಾನ್ಯ ಶಾಣಪ್ಪನವರಿಗೆ ಕೇಳುತ್ತೇನೆ. ನಿಮ್ಮ ಆತ್ಮಸಾಕ್ಷಿಯಾಗಿ ಹೇಳಿ. ನಿಮಗೆ ಯಾರು ಅಧಿಕಾರ ಕೊಟ್ಟರು? ಜೂನ್‌ನಲ್ಲಿ ಅಬಕಾರಿ ಹರಾಜು ಆಗುವುದನ್ನು ತಪ್ಪಿಸುವುದಕ್ಕೆ ನಿಮಗೆ ಯಾವನು ಅಧಿಕಾರ ಕೊಟ್ಟ? ಏನು ನೀವು ಸರ್ವಾಧಿಕಾರಿಗಳೇ, ನಾಲ್ಕೇ ತಿಂಗಳು ನೀವು ನಡೆಸುವುದಾದರೆ, ಪಾನನಿಷೇಧವನ್ನು ಜಾರಿಗೆ ತರಬೇಕೆನ್ನುವ ನಿಮ್ಮ ಅಪೇಕ್ಷೆಯಿದ್ದರೆ ಹರಾಜು ಆಗ ಬೇಕಾಗಿತ್ತು. ಬೇಕಾದರೆ ಹರಾಜಿನಲ್ಲಿ 10 ಕೋಟಿ ರೂಪಾಯಿ ಆದಾಯ ನನಗೆ ಕಡಿಮೆಯಾಗಲಿ.

ನೀವ್ಯಾರು ಹೊಂದಾಣಿಕೆಯನ್ನು ಮಾಡಿಕೊಳ್ಳಲಿಕ್ಕೆ? ಹರಾಜು ಹೇಗೆ ನಡೆಯುತ್ತದೆ ಎಂಬುದು ಗೊತ್ತಿದೆ ನಿಮ್ಮ ಎಕ್ಸೈಜ್ ಡೆಪ್ಯೂಟಿ ಕಮೀಷನರ್‌ರವರನ್ನು ಕರೆದುಕೊಂಡು ಬಂದು ಮಂತ್ರಿಗಳ ಮನೆಯಲ್ಲಿ ಕುಳಿತುಕೊಂಡು ಯಾರ್‍ಯಾರು ಎಷ್ಟೆಷ್ಟು ಬಿಡ್ ಕೂಗಬೇಕು ಯಾರಿಗೆ ಅದು ನಿಲ್ಲಬೇಕು ಎಂದು ಹಾಗೆ ಚರ್ಚೆಯಾದಂಥ ಅನೇಕ ಊದಾಹರಣೆಗಳು ನಮ್ಮ ಹತ್ತಿರ ಇವೆ. ನಿಮ್ಮ ಕಾಲದಲ್ಲಿ ಅದು ಆಗಬಾರದೆಂದು ನಾವು ನಿರೀಕ್ಷೆ ಮಾಡಿದ್ದೆವು. ಇದು ನಿಜತಾನೇ. ಇವತ್ತು 8ಪರ್ಸೆಂಟ್ ಹೆಚ್ಚು ಮಾಡಿ ಹಳೆಯ ರೇಟಿಗೆ ಅದೇ ಕಂಟ್ರಾಕ್ಟರುಗಳಿಗೆ ಕೊಟ್ಟಿರಿ. ಯಾರೂ ಮುಂದೆ

ಬರಲಿಲ್ಲ. ಕೆಲವರು ಮುಂದೆ ಬಂದರು, ಕೆಲವರು ಬರಲಿಲ್ಲ. ಸರ್ಕಾರದವರು ನಾವೇ ನಡೆಸುತ್ತೇವೆ ಎನ್ನುವ ನಾಟಕ ಮಾಡಿದಿರಿ. ಬೆಂಗಳೂರು ಜಿಲ್ಲೆಯ ಅಬಕಾರಿ ಹರಾಜು ಕಳೆದ ವರ್ಷ ಒಂದು ತಿಂಗಳಿಗೆ 5ಕೋಟಿ 50 ಲಕ್ಷಕ್ಕೆ ಹೋಗಿತ್ತು. ನೀವೇ ನಡೆಸುತ್ತೇವೆನ್ನುವ ನಾಟಕ ಮಾಡಿದಿರಿ. ದಾಸಪ್ಪ ಅಂಡ್ ಕಂಪನಿಯವರು ಅದನ್ನೆಲ್ಲಾ ಮಾಡಿಕೊಂಡು ಬಂದರು. ಈಗ ಅದೇ ದಾಸಪ್ಪ ಅಂಡ್ ಕಂಪನಿಗೆ ಕೊಡುವ ವ್ಯವಸ್ಥೆಯನ್ನು ಮಾಡಿದ್ದೀರಿ ತಾನೆ? ಇವತ್ತೋ ನಾಳೆ ಸರ್ಕಾರಿ ಆಜ್ಞೆ ಬರುತ್ತದೆ ಕಾಪಿಯನ್ನು ತಂದುಕೊಡಲೇ? ಏಕೆ? ಅವನು ನಿಮ್ಮ ಮಾವನ ಮಗನೇ? ಸ್ವಾಮಿ, ನಾನು ನಿಮ್ಮನ್ನು ಕೇಳುತ್ತೇನೆ, ಏನು ಸ್ವಂತ ವ್ಯವಹಾರ ಮಾಡುತ್ತೀರೇನು? ಏನು ದಾಸಪ್ಪನ ವ್ಯವಹಾರಗಳೇನು? ನಿಮ್ಮ ವ್ಯವಹಾರಗಳೇನು? ಯಾರು ಅವರು? ಎಕ್ಸೈಜನ್ನು ಹರಾಜು ಮಾಡಿ ಇವತ್ತು ಸುಮಾರು 450-500 ಕೋಟಿ ರೂಪಾಯಿ ವ್ಯವಹಾರ ಅದನ್ನು ಸರಿಯಾಗಿ ನಡೆಸುವುದು ಇದ್ದರೆ ಸರಿಯಾಗಿ ನಡೆಸಿ ಇಲ್ಲದಿದ್ದರೆ ಪಾನನಿರೋಧವನ್ನು ಜಾರಿಗೆ ತನ್ನಿ.

ನಾಟಕ ಮಾಡುತ್ತೀರೋ? ಮಾನ್ಯ ಸಿದ್ದರಾಮಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಪಾನನಿಷೇಧ ಜಾರಿಗೆ ಬರಬೇಕೋ ಅಥವಾ ಬೇಡವೊ ಎಂದು ಏನು ಮಾಡುತ್ತೀರಿ? ಕುಡಿಯುವವರನ್ನು ನೋಡುವುದಕ್ಕೆ ಹೋಗುತ್ತೀರೋ? ಕುಡಿಯುವುದು ಬೇಕೋ ಬೇಡವೋ ಎಂದು ಜನಾಭಿಪ್ರಾಯವನ್ನು ತೆಗೆದುಕೊಳ್ಳುವುದಕ್ಕೆ ಹೊರಟಿದ್ದೀರೋ? ಈ ನಾಡಿನ ಜನರ ಆರೋಗ್ಯವನ್ನು ಸುಧಾರಿಸಿ ಸರ್ಕಾರದ ಖಜಾನೆಯ ಹಣ ಲೂಟಿಯಾಗುವುದನ್ನು ಸರ್ಕಾರದ ಬೊಕ್ಕಸಕ್ಕೆ ತಂದು ಸರ್ಕಾರ ನಡೆಸುತ್ತೇವೆನ್ನುವ ತಾಕತ್ತು ಇದ್ದರೆ ಪಾನನಿಷೇಧವನ್ನು ಜಾರಿಗೆ ತನ್ನಿ. ನಾವು ಸಂಪೂರ್ಣ ಸಹಕಾರವನ್ನು ಕೊಡುತ್ತೇವೆ. ಹಂತ ಹಂತವಾಗಿ ತರುತ್ತೇವೆಂದು ಹೇಳುತ್ತೀರಿ. ಅದಕ್ಕಾಗಿ ಹರಾಜು ಮಾಡುವುದಿಲ್ಲ. ಒಳ ವ್ಯವಹಾರ ದಾಖಲೆ ಕೇಳುತ್ತೀರೋ? ಸ್ವಾಮಿ, ಈ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಕೊಟ್ಟವನು ಮತ್ತು ತೆಗೆದುಕೊಂಡವನಿಗೆ ದಾಖಲೆ ಇಲ್ಲ ಸ್ವಾಮಿ. ಸಿಓಡಿ ತನಿಖೆ ಮಾಡಿಸಿದ್ದೀರಿ. ಸಿಬಿಐ ತನಿಖೆಗಳು ಕೆಲವು ಆಯಿತು. ಲೋಕಾಯುಕ್ತರ ತನಿಖೆಯಾಯಿತು. ಅಧಿಕಾರಿಗಳನ್ನು ನೇಮಕ ಮಾಡಿ ತನಿಖೆ ಮಾಡಿಸಿದಿರಿ. ವರದಿಗಳನ್ನು ಕೊಟ್ಟರು. ಅವುಗಳೆಲ್ಲವನ್ನೂ ಮುಚ್ಚಿಟ್ಟಿದ್ದೀರಿ.

ಒಂದು ಉದಾಹರಣೆ ಹಿಂದಿನ ಅವ್ಯವಹಾರಗಳ ಮೇಲೆ ಇಂತಹವರ ಮೇಲೆ ನಾವು ಕ್ರಮವನ್ನು ತೆಗೆದುಕೊಂಡಿದ್ದೇವೆ, ಒನ್, ಟು, ಥ್ರೀ, ಫೋರ್ ಮಾಡಿದ್ದೇವೆ. ಇನ್ನೂ ಮಾಡುವವರಿದ್ದೇವೆ. ಅದಕ್ಕೆ ನೀವು ಸಹಕಾರ ಕೊಡಿಯೆಂದು ಹೇಳುವಂತಹ ತಾಕತ್ತು ಇದೆಯೇ? ಮಾನ್ಯ ದೇಶಪಾಂಡೆಯವರು ಏಕೆ ಎದ್ದು ನಿಂತುಕೊಂಡರೋ ನನಗೆ ಗೊತ್ತಿಲ್ಲ. ನಿಮಗೆ ಏನು ನಡೆಯುತ್ತಿದೆ ಎನ್ನುವುದು ಗೊತ್ತಿಲ್ಲವೇ? ವಿವರ ನಿಮ್ಮ ಹತ್ತಿರ ಇಲ್ಲವೇ? ಮಾನ್ಯ ದೇಶಪಾಂಡೆಯವರೇ ಇನ್ನೊಂದು ವಾರ, ತಿಂಗಳು ಇರಬಹುದು ನೀವು ಅಲ್ಲಿ, ನೀವೇ ಹೇಳುತ್ತೀರಿ, ಮಾನ್ಯ ಯಡಿಯೂರಪ್ಪನವರೇ ನಾನು ಅವೊತ್ತು ಆಡಳಿತ ಪಕ್ಷದಲ್ಲಿದ್ದೆ. ಬಾಯಿ ಬಿಡುವಂತಹ ಸ್ಥಿತಿಯಲ್ಲಿರಲಿಲ್ಲ. ಇವೆಲ್ಲಾ ಅನಾಹುತಗಳು ನಡೆದು ಹೋಯಿತು ಅದಿಕ್ಕಾಗಿ ನಾನು ರಾಜೀನಾಮೆಯನ್ನು ಕೊಟ್ಟಿದ್ದೇನೆ ಎಂದು. ನೀವೇ ರಾಜೀನಾಮೆ ಕೊಡುತ್ತೀರೋ ಅಥವಾ ಅವರೇ ನಿಮ್ಮನ್ನು ಹೊರಗೆ ಕಳುಹಿಸುತ್ತಾರೋ ಅದನ್ನು ನೋಡೋಣ.

ಅದು ನಾಲ್ಕು ದಿನ ಆಗುತ್ತೋ ಎಂಟು ದಿನ ಆಗುತ್ತೋ ಗೊತ್ತಿಲ್ಲ. ನೋಡೋಣ ನಾವು ಕಾಯುತ್ತೇವೆ. ಆತ್ಮ ಸಾಕ್ಷಿ ಇರುವಂತಹ ನೀವು ಕೆಲವರು

ನನಗೆ ವಿಶ್ವಾಸವಿದೆ. ಈಗಲೂ ನಮ್ಮ ಜೊತೆಗೆ ಸಹಕಾರ ಕೊಟ್ಟರೆ ಬಹುಶಃ ನಾಳೆ ಸಾಯಂಕಾಲಕ್ಕೆ ರಸ್ತೆಯಲ್ಲಿ ತಿರುಗಬೇಕಾಗುತ್ತದೆ. ಆ ಪರಿಸ್ಥಿತಿ ಬರುವುದು ಸಾಧ್ಯವಿದೆ.

ಶ್ರೀ ವಾಟಾಳ್ ನಾಗರಾಜ್ : ತಕ್ಷಣ ನೀವು ಹೆಸರುಗಳನ್ನು ಹೇಳುವುದಕ್ಕೆ ಹೋಗಬೇಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ವಾಟಾಳ್ ನಾಗರಾಜರವರೇ, ಮಾನ್ಯ ಜೆ.ಹೆಚ್. ಪಟೇಲರಿಗೂ ಇದಕ್ಕೂ ನಂಟು ಎಷ್ಟಿದೆ ಎನ್ನುವುದನ್ನು ತೆಗೆದು ಓದಿ ನೋಡಿ. ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯನ್ನು ತೆಗೆದು ಓದಿ ನೋಡಿ. ಪಾಪ, ಕುಡುಕರ ಮೇಲೆ ಇವರಿಗೆ ಕಾಳಜಿ. ಇವರು ಚೀಪ್‌ರೇಟ್ ಲಿಕ್ಕರ್ ಮಾಡುವುದಕ್ಕೆ ಈಗ ತುರ್ತು ಕ್ರಮ. ಲಿಬರಲೈಸ್‌ಡ್ ಡ್ರಿಂಕ್ಸ್ ಆ ಪ್ರಯತ್ನ ಮಾಡುತ್ತಿದ್ದಾರೆ. ಬಾಟಲ್‌ನಲ್ಲಿ ಲೈಟ್ ಡ್ರಿಂಕ್ಸ್. ಬಾಟಲ್‌ನಲ್ಲಿ ತಂದು ಆಮೇಲೆ ಅವರವರ ತಾಲ್ಲೂಕಿನಲ್ಲಿ ಒಬ್ಬೊಬ್ಬನನ್ನು ಕರೆದು ಲೂಟಿ ಮಾಡುವುದು. ಒಬ್ಬೊಬ್ಬ ರಾಜನಿಗೆ ಅದನ್ನು ವಹಿಸಿಕೊಟ್ಟು ಒಬ್ಬೊಬ್ಬನನ್ನು ಕರೆದು ಲೂಟಿ ಮಾಡುವುದು. ಒಬ್ಬೊಬ್ಬ ರಾಜನಿಗೆ ಅದನ್ನು ವಹಿಸಿಕೊಟ್ಟು ಒಬ್ಬೊಬ್ಬರಿಗೆ ಜಹಗೀರ್ ಕೊಡುವ ಯೋಚನೆ ನಡೆದಿಲ್ಲವೇ? ಮಾನ್ಯ ನಾಗೇಗೌಡರು ಇವತ್ತಲ್ಲ ನಾಳೆ ಸತ್ಯವನ್ನು ಹೇಳುತ್ತೀರಿ ಎನ್ನುವ ವಿಶ್ವಾಸವಿದೆ ನನಗೆ. ಇದರಲ್ಲಿ ಏನಾಗಿದೆ ಅಂದರೆ, ದ್ರೌಪದಿಯ ವಸ್ತ್ರಾಪಹರಣವಾಗುವ ಕಾಲದಲ್ಲಿ ಭೀಷ್ಮ, ದ್ರೋಣ, ವಿಧುರ, ಎಲ್ಲರೂ ಸಹ ಕೈಕಟ್ಟಿ ಕುಳಿತಿದ್ದರು. ಅವರೆಲ್ಲಾ ಧರ್ಮದ ಪರ ಇರಲಿಲ್ಲವೇನು? ಆದರೂ ಅದನ್ನು ಸಹಿಸಿದರು. ಅವರು ಯಾವುದೋ ಧರ್ಮಸಂಕಟಕ್ಕೆ ಸಿಕ್ಕಿಕೊಂಡು ಅನ್ಯಾಯ ಎಂದು ಕಂಡರೂ ಕೈಕಟ್ಟಿಕೊಂಡು ಕುಳಿತಿದ್ದರು. ನಿಮ್ಮಲ್ಲೂ ಅನೇಕ ಜನ, ನನಗೆ ವಿಶ್ವಾಸವಿದೆ ಸಂಕಟಪಡುತ್ತಿದ್ದೀರಿ. ಬನ್ನಿ ಹೊರಗೆ ಈ ರಾಜ್ಯದ ಜನಹಿತ ದೃಷ್ಟಿಯಿಂದ ನೀವೇ ಅಧಿಕಾರ ನಡೆಸಿರಿ. ನಮಗೆ ಬೇಡ ಅಧಿಕಾರ.

ಶ್ರೀ ಸುಂದರರಾವ್ ಕುಂಬ್ಳೆ : ಮಾನ್ಯ ಉಪಾಧ್ಯಕ್ಷರೇ, ದ್ರೌಪದಿಯ ವಸ್ತ್ರಾಪಹರಣವಾಗುವಾಗ ಕೌರವನ ಸಭೆಯಲ್ಲಿ ಎಲ್ಲರೂ ಕೈಕಟ್ಟಿ ಕುಳಿತಿದ್ದರು. ಒಬ್ಬ ಕೌರವನ ತಮ್ಮ ವಿಕರ್ಣನೆಂಬುವನು ಎದ್ದು ನಿಂತಿದ್ದ. ಮಾನ್ಯ ನಾಗೇಗೌಡರು ವಿಕರ್ಣನಾಗಿ ಎದ್ದು ನಿಲ್ಲುತ್ತಾರೆಂದು ನಾನು ಆಸೆಪಡುತ್ತೇನೆ.

ಶ್ರೀ ವಾಟಾಳ್ - ನಾಗರಾಜ್ : ಮಾನ್ಯ ಯಡಿಯೂರಪ್ಪನವರೇ, ಇಲ್ಲಿ ದುಶ್ಯಾಸನ ಯಾರು?

ಶ್ರೀ ಹೆಚ್.ಎನ್. ನಂಜೇಗೌಡ : ಮಾನ್ಯ ವಾಟಾಳ್ ನಾಗರಾಜ್‌ರವರೇ ದ್ರೌಪದಿ ಯಾರು?

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಯಡಿಯೂರಪ್ಪನವರು ದ್ರೌಪದಿಯನ್ನು ಸರ್ಕಾರ ಎಂದು ಕರೆಯುತ್ತಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸ್ವಾಮಿ ತಮ್ಮದು ರೈತ ಪರ ಸರ್ಕಾರ. ಗ್ರಾಮೀಣ ಜನರ ಹಿತಚಿಂತಕರು. ಸನ್ಮಾನ್ಯ ಜಾಲಪ್ಪನವರು ಇಲ್ಲಿ ಕಂದಾಯ ಸಚಿವರಾಗಿದ್ದಾಗ, ನಾಡಿನ ರೈತರ ಉಳಿವಿಗಾಗಿ ಭೂಸುಧಾರಣಾ ತಿದ್ದುಪಡಿಯನ್ನು ಜಾರಿಗೆ ತಂದಿದ್ದೇವೆಂದು ಹೇಳಿದರು. ಸ್ವಾಮಿ, ನಾನು ನಿಮ್ಮನ್ನು ಕೇಳುತ್ತೇನೆ, ಬೆಂಗಳೂರಿನ ಸುತ್ತಮುತ್ತ ಇದ್ದಂತಹ ಎಲ್ಲಾ ಸರ್ಕಾರಿ ಜಾಗವನ್ನು, ಬೆಂಗಳೂರು ಡೆವಲಪ್ಮೆಂಟ್ ಅಥಾರಿಟಿಯಲ್ಲಿದ್ದಂತಹ ಎಲ್ಲಾ ಸ್ಟೈ ಸೈಟಸ್ಸು ಕರ್ನಾಟಕ ಗೃಹಮಂಡಳಿಯಲ್ಲಿದ್ದಂತಹ

ಮನೆ ನಿವೇಶನಗಳು ನಿಮಗೆ ಬೇಕು ಬೇಕಾದಂತಹ ಸಿರಿವಂತರಿಗೆ ನೀವು ಮಾಡುವಂತಹ ಎಲ್ಲಾ ಅನ್ಯಾಯಕ್ಕೆ ಬೆಂಬಲವನ್ನು ಕೊಟ್ಟು ನಿಮ್ಮ ದಾಖಲೆಗಳನ್ನು ಮನೆಯಲ್ಲಿಟ್ಟುಕೊಂಡಿರುವಂತಹ ಅಧಿಕಾರಿಗಳಿಗೆ ಕೊಟ್ಟಿಲ್ಲವೇ ಸ್ವಾಮಿ? ತನಿಖೆಗಳು ಆಗಲಿಲ್ಲವೇ? ತನಿಖೆಯಾದ ಮೇಲೆ ಬುದ್ಧಿ ಬಂತೇ? ಇವತ್ತು ಬೆಂಗಳೂರು ನಗರವೇ ಈ ನೆಲಗಳ್ಳರಿಗೆ, ಭೂದಾಳಿ ನಡೆಸುವಂತಹವರಿಗೆ ಕೆಐಡಿಬಿ, ಬಿಡಿಎ, ಕೆಹೆಚ್ಬಿ, ಸಂಸ್ಥೆಗಳಿಗೆ ಎಲ್ಲಾ ಅವ್ಯವಹಾರಗಳಿಗೆ ಅವಕಾಶ ಮಾಡಿಕೊಟ್ಟು ಅದೊಂದು ಅರ್ಥಹೀನ ಸಂಸ್ಥೆಗಳನ್ನಾಗಿ ಮಾಡುತ್ತಿಲ್ಲವೇ? ನಾವು ಒಂದು ತರಹ ಸರ್ಕಾರನೇ, ಬ್ರೋಕರ್ನಂತೆ ಏಜೆಂಟರ್ನಂತೆ, ಹಗಲು ದರೋಡೆ ಏನು ಮಾಡುತ್ತಿದ್ದಾರೆನ್ನುವ ದಾಖಲೆಯನ್ನು ಕೊಡುತ್ತೇನೆ.

ಎಲ್ಲಾ ವಿವರಗಳನ್ನು ನಾನು ಕೊಡುತ್ತೇನೆ. ಆ ಅಧಿಕಾರಿಗಳು ಯಾರು? ರಾಜಕಾರಣಿಗಳು ಯಾರು? ಯಾರ್ಯಾರಿಗೆ ಹಂಚಿದ್ದೀರಿ, ತನಿಖೆ ಏನಾಯಿತು, ವರದಿ ಏನು ಬಂತು, ಯಾವುದರ ಮೇಲೆ ಕ್ರಮ ತೆಗೆದುಕೊಂಡಿದ್ದೀರಿ? ಏನಾಗಿದೆ ಗೊತ್ತಾ? ಇವತ್ತು ಸಂಕಟದಿಂದ ಒಂದು ಮಾತನ್ನು ಹೇಳುತ್ತೇನೆ, ಒಂದು ರೀತಿ ಎಲ್ಲರನ್ನೂ ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿ ತಪ್ಪು ಮಾಡಿಸಿ ಯಾರು ಬಣ್ಣವನ್ನು ಯಾರು ಬಯಲು ಮಾಡುತ್ತಾರೋ ಎಂದು ಹೇಳಿ ನೀವು ಅಷ್ಟು ಮಾಡಿದ್ದೀರಿ, ನಾವು ಇಷ್ಟು ಮಾಡಿದ್ದೇವೆ. ಈ ರೀತಿ ಹಗಲು ದರೋಡೆ, ಲೂಟಿ. ಇವತ್ತು ನಿಮ್ಮ ದಾಹಕ್ಕೆ ಬೆಂಗಳೂರು ಸುಂದರ ನಗರವನ್ನು ಭಯಾನಕ ಒಂದು ಕೊಳಚೆ ಪ್ರದೇಶವನ್ನಾಗಿ ನಿರ್ಮಾಣ ಮಾಡುವಂಥ, ಪ್ರಯತ್ನ ಮಾಡುತ್ತಿದ್ದೀರಿ. ಬೆಂಗಳೂರಿನಲ್ಲಿ ಕಳ್ಳರು, ರೌಡಿಗಳು, ಕೊಲೆಗಡುಕರು ಅವರೆಲ್ಲರಿಗೂ ಒಂದು ತಾಣವಾಗಿ ಪರಿವರ್ತನೆ ಮಾಡುವಂಥ ಪ್ರಯತ್ನ ಮಾಡುತ್ತಿದ್ದೀರಿ. ಜೆ.ಎಚ್. ಪಟೇಲರು ಹಣಕಾಸಿನ ಪರಿಸ್ಥಿತಿ ಸರಿಯಿಲ್ಲ, ಪವರ್ ಉತ್ಪಾದನೆಗೆ ದುಡ್ಡಿಲ್ಲ, ಕೆ.ಪಿ.ಸಿ. ಗೆ ಕೊಡುವುದಕ್ಕೆ ದುಡ್ಡು ಇಲ್ಲ ಎಂದು ಹೇಳುತ್ತಾರೆ. ನಾನು ಕೇಳುತ್ತೇನೆ, ಈ ಅಬ್ಕಾರಿ, ಕೆ.ಇ.ಬಿ, ಮಾರಾಟ ತೆರಿಗೆ ಇತರೆ ಬಾಬ್ತುಗಳಲ್ಲಿ ಎಷ್ಟೆಷ್ಟು ವಸೂಲಿ ಮಾಡಿದ್ದೀರಿ ಸ್ವಾಮಿ? ವಸೂಲಿ ಮಾಡುವ ಕಡೆಗೆ ಗಮನ ಕೊಟ್ಟಿರೋ? ಸರ್ಕಾರದ ಖಜಾನೆ ತುಂಬುವ ಕಡೆ ಗಮನ ಕೊಟ್ಟರೇ? ಇಲ್ಲ. ಬಿಡುವಿಲ್ಲ ರೀ ಎನ್ನುತ್ತೀರಿ. 15 ಜನರ ಸಚಿವ ಸಂಪುಟ ಆದಮೇಲೂ ನಾಳೆ ಏನು, ಇವತ್ತು ಏನು ಎನ್ನುವಂಥ ಭಯಾನಕ ಪರಿಸ್ಥಿತಿ, ಸನ್ಮಾನ್ಯ ಜೆ.ಎಚ್. ಪಟೇಲರು ಕುರ್ಚಿಯಲ್ಲಿ ಕುಳಿತುಕೊಳ್ಳುವಂಥ, ಒಂದು ವಿಚಿತ್ರವಾದ ಪರಿಸ್ಥಿತಿ. ಸನ್ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡಬಹುದು. ಒಂದು ಅಂದಾಜಿನ ಪ್ರಕಾರ ಸುಮಾರು ಎರಡೂವರೆ ಸಾವಿರ ಮೂರು ಸಾವಿರ ಫೈಲುಗಳು ಮುಖ್ಯಮಂತ್ರಿಗಳ ಮನೆಯಲ್ಲಿ ಕೊಳೆಯುತ್ತಾ ಬಿದ್ದಿವೆ. ನೋಡುವುದಕ್ಕೆ ಪುರಸೊತ್ತಿಲ್ಲ. ಫೈಲು ನೋಡುವುದಕ್ಕೆ ನೀವು ಅವರನ್ನು ಬಿಡುಗಡೆ ಮಾಡಿಲ್ಲ, ಸಾವಿರಾರು ಫೈಲುಗಳು ಸಚಿವರ ಮನೆಗಳಲ್ಲಿ ಬಿದ್ದಿವೆ. ಅವುಗಳಿನ್ನೂ ವಿಲೇವಾರಿ ಆಗಿಲ್ಲ. ನಾಡಿನ ಜನ ಸಾಯುತ್ತಿದ್ದಾರೆ, ಬರಗಾಲ ಪರಿಸ್ಥಿತಿ ಇದೆ, ಕಬ್ಬನ್ನು ಸುಟ್ಟು ಹಾಕುವ ಪರಿಸ್ಥಿತಿ ಬಂದಿದೆ, ರೈತರಿಗೆ ಕಬ್ಬು ಕೊಟ್ಟರೆ ದುಡ್ಡು ಬಂದಿಲ್ಲ. ಕಾರ್ಖಾನೆಯಲ್ಲಿ ಸಕ್ಕರೆ ಕೊಳೆಯುತ್ತಿದೆ. ಈ ಸಕ್ಕರೆಯನ್ನು ಮಾರುವಂಥ ವ್ಯವಸ್ಥೆ ಮಾಡಿ, ರೈತನಿಗೆ ಹಣವನ್ನು ಕೊಟ್ಟು ಅವನನ್ನು ಉಳಿಸುವ ಕಡೆಗೆ ಒಬ್ಬ ಮಂತ್ರಿಯೂ ಪ್ರಯತ್ನ ಮಾಡಿಲ್ಲ. ಅದನ್ನು ನೋಡುವುದಕ್ಕೆ ನಿಮಗೆ ಪುರಸೊತ್ತು ಇಲ್ಲ.

ಶ್ರೀ ಗುರುಪಾದಪ್ಪ ಎಸ್. ನಾಗಮಾರಪಲ್ಲಿ : ಯಾವ ಸಚಿವರ ಮನೆಯಲ್ಲೂ ಫೈಲು ಇಲ್ಲ. ಸುಮ್ಮನೆ ಸಾವಿರಾರು ಎಂದು ಹೇಳುತ್ತಿದ್ದೀರಿ. ನನ್ನ ಮನೆಯಲ್ಲಿ ಒಂದು ಫೈಲೂ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ಬಂದಮೇಲೆ ವಾಹನಗಳಿಗೆ ಲೈಫ್ ಟ್ಯಾಕ್ಸ್ ಹಾಕಿದಿರಿ. 90 ಕೋಟಿ ಆದಾಯ ಬಂತು. ರಸ್ತೆ ಸರಿಪಡಿಸಿದಿರೋ ಗುಂಡಿ ಮುಚ್ಚಿದಿರೋ? ಬೆಂಗಳೂರಿನ ಸುತ್ತಮುತ್ತ, ರಾಜ್ಯದ ಎಲ್ಲಿಯಾದರೂ ವಾಹನಗಳು ಹೋಗಬಹುದೇ, ಬರಬಹುದೇ? ನೀವು ವಿಮಾನದಲ್ಲಿ ಓಡಾಡುತ್ತೀರಿ, ರಸ್ತೆಯ ಸ್ಥಿತಿ ನಿಮಗೆ ಗೊತ್ತಾಗುವುದು ಹೇಗೆ? ಸ್ವಾಮಿ, ಇವತ್ತು, ಟಾರನ್ನು ಕೊನೆಗಳಿಗೆಯಲ್ಲಿ ಸಪ್ಲೈ ಮಾಡಿದಿರಲ್ಲಾ ಅದರ ಬಗ್ಗೆ ನಾನು ಜವಾಬ್ದಾರಿಯಿಂದ ಹೇಳುತ್ತಿದ್ದೇನೆ. ಇವತ್ತು ಶಿವಮೊಗ್ಗ ಜಿಲ್ಲೆಯಲ್ಲಿ ಟಾರನ್ನು ಕೊನೆಗಳಿಗೆಯಲ್ಲಿ ಉಪಯೋಗ ಮಾಡಿದರು. ಅದರ ಕ್ವಾಲಿಟಿ ಸರಿಯಿಲ್ಲದೇನೇ ನಾಲ್ಕೈದು ತಿಂಗಳಲ್ಲೇ ಟಾರ್ ಹಾಕಿದ್ದೆಲ್ಲಾ ಕಿತ್ತುಕೊಂಡು ಹೋಗುತ್ತಿದೆ. ಹೋಗಿ ನೋಡಿಕೊಂಡು ಬನ್ನಿ ಸ್ವಾಮಿ. ಒಳ್ಳೆಯ ಕ್ವಾಲಿಟಿ ಟಾರನ್ನು ಅವನು ಕಮೀಷನ್ ಜಾಸ್ತಿ ಕೊಡಬೇಕಾದರೆ ಹೇಗೆ ಕೊಡುತ್ತಾನೆ? ಟಾರು ಸಪ್ಲೈ ಮಾಡುವವನು ನೂರಕ್ಕೆ ಐವತ್ತು ಪರ್ಸೆಂಟ್ ಕಮೀಷನ್ ಕೊಡಬೇಕಾದರೆ ಒಳ್ಳೆಯ ಟಾರು ಎಲ್ಲಿ ಕೊಡಲಿ ಎಂದು ಹೇಳಬಹುದೇನೋ. ಇದು ಅಸತ್ಯ ಎನ್ನುವುದಾದರೆ ಕಳಪೆ ಟಾರು ಹೇಗೆ ಬಂತು? ಇವತ್ತು ನಾನಲ್ಲ, ಶಿವಮೊಗ್ಗ ಜಿಲ್ಲೆಯಲ್ಲಿ ಅಧಿಕಾರಿಗಳು ಪತ್ರ ಬರೆದಿದ್ದಾರೆ, ಟಾರ್ ಕ್ವಾಲಿಟಿ ಸರಿಯಿಲ್ಲವೆಂದು.

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) : ನಾನು ಹೇಳುತ್ತೇನೆ, ಕೇಳಿ.

ಶ್ರೀ ಕೆ.ಎಸ್. ಈಶ್ವರಪ್ಪ : ಉತ್ತರ ಕೊಡುವಾಗ ಹೇಳಿ.

(ಗೊಂದಲ)

ಶ್ರೀ ಸಿ.ಎಂ. ಉದಾಸಿ : ನಾನು ಹೇಳುವುದನ್ನು ಕೇಳಿ. ನೀವು ಹೇಳುವುದು ಬೇಡ ಎಂದು ನಾನು ಹೇಳುವುದಿಲ್ಲ. ಒಂದು ನಿಮಿಷ ಕೇಳಿ. ಆಮೇಲೆ ನೀವು ಹೇಳಿ. ಟಾರ್ನು ಪ್ರೈವೇಟ್ನವರಿಂದ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಅದಕ್ಕಾಗಿ ಗವರ್ನಮೆಂಟ್ ಫ್ಯಾಕ್ಟರಿಯಿಂದ ಟಾರ್ ಬರುತ್ತಿರುವುದು. ದಯವಿಟ್ಟು ಇದನ್ನು ತಿಳಿದುಕೊಂಡು ಮಾತನಾಡಿ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಎಂ. ಶ್ರೀನಿವಾಸ್ : ಅಧ್ಯಕ್ಷರೇ....

ಉಪಾಧ್ಯಕ್ಷರು : ಅವರು ಮಾತನಾಡಲಿ ಬಿಡಿ.

ಶ್ರೀ ಎಂ. ಶ್ರೀನಿವಾಸ್ : ಹಾಕಿರುವ ಟಾರು ಎಲ್ಲಾ ಕಡೆ ಕಿತ್ತು ಹೋಗಿದೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಟಾರ್ ಹಾಕಿದರೆ ಮಳೆ ಬಂದಾಗ ಯಾವಾಗಲೂ ಕಿತ್ತು ಹೋಗುತ್ತದೆ. ಕರ್ನಾಟಕ ರಾಜ್ಯದಲ್ಲಿ ಮಾತ್ರ ಅಲ್ಲ, ಇಂಡಿಯಾ ದೇಶದಲ್ಲೇ ಈ ಸಿಸ್ಟಮ್ ಇದೆ. ಯಾವಾಗ ಮಳೆ ಬರುತ್ತದೆ, ಆಗ ಕಿತ್ತುಹೋಗುತ್ತದೆ. ಇದು ಇತ್ತೀಚೆಗೆ ಏನೂ ಕಿತ್ತುಹೋಗಿದ್ದಲ್ಲ.

(ಗೊಂದಲ)

ಉಪಾಧ್ಯಕ್ಷರು : ಯಡಿಯೂರಪ್ಪನವರೇ, ನೀವು ಮಾತನಾಡಿ. ಯಾರೂ ಅವರಿಗೆ ಡಿಸ್ಟರ್ಬ್ ಮಾಡಬಾರದು. ತಾವು ಮಾತನಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇವತ್ತು ನಾನು ಸನ್ಮಾನ್ಯ ಪಿ.ಡಬ್ಲ್ಯೂ.ಡಿ. ಮಂತ್ರಿಗಳಿಗೆ ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ. ನಾನು ಈ ರಾಜ್ಯದಲ್ಲಿ ಪ್ರತಿಪಕ್ಷದ

ನಾಯಕನಾಗಿ ಅಧಿಕಾರಿಗಳು ಏನು ಹೇಳಿದರು, ರಸ್ತೆಗಳನ್ನು ನಾನೂ ನೋಡಿದ್ದೇನೆ, ಅದರ ಆಧಾರದ ಮೇಲೆ ಜವಾಬ್ದಾರಿಯಿಂದ ಮಾತನಾಡುತ್ತಿದ್ದೇನೆ. ನೀವು ಹೀಗೇ ಮುಂದುವರೆಯುವವರು ಎಂದರೆ ಜನ ಬುದ್ಧಿ ಕಲಿಸುತ್ತಾರೆ. ನಿಮಗೆ ಯಾರು ಬೇಡವೆಂದರು? ನಮ್ಮದ್ದೇನೂ ಅಭ್ಯಂತರ ಇಲ್ಲ. ಸುಧಾರಣೆ ಆಗಿಲ್ಲ, ಅದಕ್ಕಾಗಿ ಅಧಿಕಾರದಲ್ಲಿ ಮುಂದುವರೆಯುವುದಕ್ಕೆ ನಿಮಗೆ ಹಕ್ಕು ಇಲ್ಲವೆಂದು ಹೇಳಿ ಇವತ್ತಿನ ದಿವಸ ನಾನು ವಿವರಗಳನ್ನು ಕೊಡುತ್ತಿದ್ದೇನೆ. ನೀವು ಅಲ್ಲಿದ್ದು ಒಬ್ಬ ಲೋಕೋಪಯೋಗಿ ಮಂತ್ರಿಯಾಗಿ ಟಾರ್ ಸರಿಯಿಲ್ಲ ಎಂದು ಹೇಳುವುದಕ್ಕೆ ಸಾಧ್ಯ ಆಗುತ್ತದೆಯೆ? ಹಾಗೆ ಹೇಳಿದರೆ ಜೆ.ಎಚ್. ಪಟೇಲರು ನಿಮ್ಮನ್ನು ಅಧಿಕಾರದಲ್ಲಿ ಮುಂದುವರೆಯುವುದಕ್ಕೆ ಬಿಡುತ್ತಾರಾ? ಇವತ್ತು ಈ ಕೈಗಾರಿಕೆ ಇಲಾಖೆಯ ಕರ್ನಾಟಕ ಭೂಗರ್ಭ ಸಂಪತ್ತನ್ನು ವಿದೇಶಿ ಕಂಪನಿಗಳು ಲಗ್ಗೆ ಹಾಕುತ್ತಿದ್ದಾರೆ. ಅನೇಕ ವಿದೇಶಿ ಬಹುರಾಷ್ಟ್ರೀಯ ಕಂಪನಿಗಳ ವಿಮಾನಯಾನ ಸಮೀಕ್ಷೆ ಪ್ರಾರಂಭವಾಗಿದೆ.

ನಮ್ಮ ರಾಜ್ಯದಲ್ಲಿ ಸುಮಾರು 60 ಲಕ್ಷ ಹೆಕ್ಟೇರ್ ಭೂಮಿ ಖನಿಜ ಸಂಪತ್ತಿನಿಂದ ಕೂಡಿದೆ. ಇದರಲ್ಲಿ ಕಾಲುಭಾಗ ಅರಣ್ಯ ಇದೆ. ಈಗ ಇದನ್ನು ಕೊಡುವುದಕ್ಕೂ ಅರ್ಜಿ ಕರೆದಿದ್ದೀರಿ. ಬಹುಶಃ ನಿಮ್ಮ ಕಾಲದಲ್ಲಿ ಎಲ್ಲವನ್ನೂ, ಭಗವಂತ ಕೊಟ್ಟಂಥ ಅರಣ್ಯ ಸಂಪತ್ತು ಇರಬಹುದು, ಖನಿಜ, ಸಂಪತ್ತು ಇರಬಹುದು, ಬೆಂಗಳೂರು ಸುತ್ತಮುತ್ತ ಇರುವಂಥ ಜಮೀನುಗಳು ಇರಬಹುದು, ಕೆರೆ ಕಟ್ಟೆಗಳು ಇರಬಹುದು ಅಥವಾ ನಿಮಗೆ ಆಕಾಶದಲ್ಲಿ ಬೌಂಡರಿ ಫಿಕ್ಸ್ ಮಾಡುವ ಅಧಿಕಾರ ಇದ್ದರೆ ಅವನ್ನೂ ಸಹ ನಿಮ್ಮ ಕಾಲದಲ್ಲಿ ಹರಾಜು ಮಾಡುವುದಕ್ಕೆ ಸಿದ್ಧರಿರುವಂಥ ರೀತಿಯಲ್ಲಿ ಆಡಳಿತವನ್ನು ನಡೆಸುತ್ತಿದ್ದೀರಿ. ತಾವು ಮುಖ್ಯಮಂತ್ರಿಯಾದ ತಕ್ಷಣ ಏನು ಹೇಳಿದಿರಿ? ಈ ವರ್ಷ ಯಾವುದೇ ಕಾರಣಕ್ಕೆ ವರ್ಗಾವಣೆ ಇಲ್ಲವೆಂದು ಹೇಳಿದಾಗ ನಾವು ಸಹಕಾರ ಕೊಡುತ್ತೇವೆ ಎಂದು ಹೇಳಿದೆವು. ತಾವು ಬಜೆಟ್ಗೆ ಉತ್ತರ ಕೊಟ್ಟಂಥ ಕಾಲದಲ್ಲಿ ಶಾಸಕರು ಸಹಕಾರ ಕೊಡಬೇಕು ಎಂದು ಹೇಳಿದಿರಿ. ನಾನು ಪ್ರತಿಪಕ್ಷದ ಪರವಾಗಿ ಹೇಳುತ್ತಿದ್ದೇನೆ. ಇವತ್ತು ವ್ಯವಸ್ಥೆ ಹದಗೆಡುವುದಕ್ಕೆ ಬಹಳ ಮುಖ್ಯವಾದ ಕಾರಣ ಟ್ರಾನ್ಸ್ಫರ್ನಲ್ಲಿ ಶಾಸಕರ ಹಸ್ತಕ್ಷೇಪ ಪ್ರವೇಶ. ಒಬ್ಬ ಪ್ರಾಮಾಣಿಕ ಅಧಿಕಾರಿ ಎಲ್ಲಿದ್ದರೂ ಒಳ್ಳೆಯ ಕೆಲಸ ಮಾಡುತ್ತಾನೆ.

ಒಬ್ಬ ಅಪ್ರಮಾಣಿಕ ಅಧಿಕಾರಿ ಎಲ್ಲಿದ್ದರೂ ಲೂಟಿ ಮಾಡುತ್ತಾನೆ. ಸಂಪೂರ್ಣ ಅಧಿಕಾರವನ್ನು ನೀವು ತೆಗೆದುಕೊಳ್ಳಿ. -ಅಧಿಕಾರಿಗಳಿಗೆ ಆ ಜವಾಬ್ದಾರಿಯನ್ನು ಕೊಡಿ. ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ್ದೀರಿ, ಕ್ಲಾಸ್ (1) ಮತ್ತು ಕ್ಲಾಸ್ (2) ಬಿಟ್ಟು ಬೇರೆ ಯಾವುದೇ ವರ್ಗಾವಣೆಯನ್ನು ನಾವು ಟಚ್ ಮಾಡುವುದಿಲ್ಲ. ಆಯಾಯ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಸಂಪೂರ್ಣವಾಗಿ ಸ್ವಾತಂತ್ರ್ಯ ಕೊಡುತ್ತೇವೆ ಎಂದು ಹೇಳಿದಿರಿ. ತಮ್ಮ ಕಾಲದಲ್ಲಿ ವರ್ಗಾವಣೆ ಮಾಡುವುದಿಲ್ಲವೆಂದು ಹೇಳಿದಿರಿ. ಕೊನೆಗೆ ಅನಿವಾರ್ಯವಾಗಿ ಈ ರಾಜ್ಯದ ಮುಖ್ಯಮಂತ್ರಿಗಳು ಇದಕ್ಕೆ ತಲೆಬಾಗಿ ತಮ್ಮ ಕುರ್ಚಿಯನ್ನು ಉಳಿಸಿಕೊಳ್ಳುವುದಕ್ಕೋಸ್ಕರ ಈ ವರ್ಗಾವಣೆ ಮಾಡಿಕೊಳ್ಳುವುದಕ್ಕೆ ಅಸ್ತು ಎಂದು ಮಾಡಿದಿರಿ. ನೀವು ಹೇಳಿದ್ದು ಏನು, ಮಾಡಿದ್ದು ಏನು? ತಮ್ಮ ಸರ್ಕಾರದ್ದು. ಜಂಟಿ ಜವಾಬ್ದಾರಿ ಏನು ಕ್ಯಾಬಿನೆಟ್ಗೆ ಇರಬೇಕು ಎಂದು ಹೇಳುವಾಗ.....

ಶ್ರೀ ಸಿ. ಬೈರೇಗೌಡ : ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾ ನಮ್ಮ ಶಾಸಕಾಂಗ ಪಕ್ಷದ ಸಭೆಯಲ್ಲಿ ವರ್ಗಾವಣೆ ಬಗ್ಗೆ ಚರ್ಚೆಯಾಯಿತು. ಆದರೆ ಮೊದಲು ವರ್ಗಾವಣೆ ಮಾಡಬಾರದು ಎಂದು ತೀರ್ಮಾನ ಆಗಿತ್ತು. ವರ್ಗಾವಣೆ ಮಾಡದೇ ಇದ್ದರೆ ನಾವು ಬದುಕುವುದು ಹೇಗೆ ಎನ್ನತಕ್ಕದ್ದು

ಬಂತು ಎಂದು ಹೇಳಿದರು. It is a straight reflection on the members of our party. ಆದ್ದರಿಂದ ದಯವಿಟ್ಟು ತಾವು ಈ ರೀತಿಯಾಗಿ aspersions cast ಮಾಡತಕ್ಕಂಥದ್ದು ಸರಿಯಲ್ಲ. ನೀವು ದಯವಿಟ್ಟು ಆ ಪದವನ್ನು ವಾಪಸ್ಸು ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ ವರ್ಗಾವರ್ಗಿ ಬಗ್ಗೆ ಯಾವ ಶಾಸಕರೂ ಕೂಡ, ವರ್ಗ ಮಾಡದೇ ಇದ್ದರೆ ನಾವು ಬದುಕುವುದು ಹೇಗೆ ಎಂದು ಯಾವತ್ತೂ ಕೂಡ ಚರ್ಚೆಯಾಗಿಲ್ಲ. ಈಗ ವರ್ಗಾವರ್ಗಿಯಲ್ಲಿ ಯಾರು ಏನು ಮಾಡಿದ್ದಾರೆ, ಯಾವ ರೀತಿ ನಡೆದುಕೊಂಡಿದ್ದಾರೆ ಎನ್ನತಕ್ಕಂಥಾದ್ದು ಚರ್ಚೆಯಾಗಬೇಕು ಎಂದರೆ ಇದನ್ನು ಚರ್ಚೆ ಮಾಡೋಣ. ಆದರೆ ಈ ರೀತಿ ಮಾತನಾಡತಕ್ಕಂಥಾದ್ದು, ವರ್ಗಾವಣೆ ಮಾಡದೇ ಇದ್ದರೆ ನಾವು ಬದುಕುವುದಕ್ಕೆ ಆಗುವುದಿಲ್ಲ ಎನ್ನತಕ್ಕಂಥಾದ್ದು, ಚರ್ಚೆಯಾಯಿತು ಬದುಕುವುದು ಹೇಗೆ ಎನ್ನತಕ್ಕಂಥ ಕುಳಿತು ಪ್ರಸ್ತಾಪಕ್ಕೆ ಬಂದಿರತಕ್ಕಂಥಾದ್ದು, ನಮ್ಮ ಸದಸ್ಯರ ನಡವಳಿಕೆ ಬಗ್ಗೆ ತಪ್ಪು ಅಭಿಪ್ರಾಯ ಮೂಡಿಸುವುದಕ್ಕೆ ಪ್ರಯತ್ನ ಪಟ್ಟರೆ, ಮಾನ್ಯ ಅಧ್ಯಕ್ಷರೇ, ಇದನ್ನು ತಾವು ದಯವಿಟ್ಟು ಕಡತದಿಂದ ತೆಗೆಸಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ನಾನು ಒಂದೇ ಮಾತನ್ನು ಹೇಳುತ್ತೇನೆ. ಈ ರಾಜ್ಯದ ಮುಖ್ಯಮಂತ್ರಿಗಳು ಈ ಸದನದಲ್ಲಿ ಉತ್ತರ ಕೊಡುವಂಥ ಕಾಲದಲ್ಲಿ ಏನು ಹೇಳಿದ್ದೀರಿ? ಸಹಕಾರ ಕೊಡುತ್ತೇವೆ ಎಂದು ನಾವೆಲ್ಲರೂ ಹೇಳಿದ್ದೆವು. ನಿಮ್ಮ ಶಾಸಕಾಂಗ ಪಕ್ಷದ ಸಭೆಯಲ್ಲಿ ಇದರ ಬಗ್ಗೆ ಚರ್ಚೆಯಾಯಿತು ಎಂದು ಪತ್ರಿಕೆಯಲ್ಲಿ ಬಂತು. ನಿಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಏನು ಹೇಳಿದ್ದಿರಿ? ವರ್ಗಾವಣೆ ನೀತಿ, ಅಧಿಕಾರಿಗಳ ಮತ್ತು ಸರ್ಕಾರಿ ನೌಕರರ ವರ್ಗಾವರ್ಗಿಯು ಸಕಲ ಭ್ರಷ್ಟಾಚಾರಕ್ಕೆ ಮೂಲ ನೆಲೆಯಾಗಿದೆ... ಇದನ್ನು ಯಾರು ಹೇಳಿದರು? ಯಡಿಯೂರಪ್ಪ ಅಲ್ಲ ಸ್ವಾಮಿ... ಇದರ ಅರ್ಥ ಏನು? ಕಾಂಗ್ರೆಸ್ಸಿನವರು ಮಾಡಿದರು ಎಂದು ನೀವು ಹೇಳುತ್ತೀರೋ ನಿಮ್ಮ ಚುನಾವಣಾ ಪ್ರಣಾಳಿಕೆ ಯಾವುದು? ವಿಧಾನಸಭಾ ಚುನಾವಣೆ 1994. ಈ ನಾಡಿನ ನಾಲ್ಕುಮುಕ್ಕಾಲು ಕೋಟಿ ಜನರಿಗೆ ಪ್ರಿಂಟ್ ಮಾಡಿ ಹಂಚಿದಿರಿ, ಏನೆಂದು?

ಅಧಿಕಾರಿಗಳು ಮತ್ತು ಸರ್ಕಾರಿ ನೌಕರರ ವರ್ಗಾವರ್ಗಿ ಸಕಲ ಭ್ರಷ್ಟಾಚಾರಕ್ಕೆ ಮೂಲ ನೆಲೆಯಾಗಿದೆ...

ಯಾರು ಸ್ವಾಮಿ ಭ್ರಷ್ಟಾಚಾರ ಮಾಡುತ್ತಿದ್ದಾರೆ? ಯಾರು ವರ್ಗಾವಣೆಗೆ ಪತ್ರ ಕೊಡುತ್ತಾರೆ? ಅಧಿಕಾರದಲ್ಲಿ ಇರುವಂಥ ಜನರದ್ದು ತಾನೇ? ಯಾರ ಇನ್ಫ್ಲುಯನ್ಸ್ ನಡೆಯುತ್ತದೆ? ಯಡಿಯೂರಪ್ಪನವರ ಇನ್ಫ್ಲುಯನ್ಸ್ ನಡೆಯುತ್ತದೆಯೇ? ಭ್ರಷ್ಟಾಚಾರ ಎಂದರೆ ಹಿಂದೆ ನಡೆಯುತ್ತಿತ್ತು, ಈಗ ನಡೆಯುತ್ತಿಲ್ಲವೇ? ಮುಂದೇನು ಹೇಳಿದಿರಿ?

> ಇದನ್ನು ನಿಲ್ಲಿಸಲು ಒಂದನೇ ಹಾಗೂ ಎರಡನೇ ದರ್ಜೆಗೆ ಮಾತ್ರ ವಿಧಾನ ಸೌಧದಿಂದ ವರ್ಗಾವಣೆ ಮಾಡುವ ಅಧಿಕಾರವನ್ನು ಇಟ್ಟುಕೊಂಡು ಉಳಿದ ನೌಕರರ ವರ್ಗಾವಣೆಯನ್ನು ಆಯಾಯ ಜಿಲ್ಲಾಮಟ್ಟದಲ್ಲಿ ಆಯಾಯ ಇಲಾಖೆಯ ಮುಖ್ಯಸ್ಥರು ಮಾಡುವಂತೆ ಕಟ್ಟಾಜ್ಞೆ ಹೊರಡಿಸುತ್ತೇವೆ. ಭ್ರಷ್ಟಾಚಾರ ಹಾಗೂ ಅಧ್ಯಕ್ಷತೆ ಆಪಾದನೆಗಳು ನಿರ್ದಿಷ್ಟವಾದಾಗ ಮಾತ್ರ ಅವಧಿ ಪೂರ್ಣ ವರ್ಗಾವಣೆ...

ಇದನ್ನು ಯಾರು ಹೇಳಿದರು?

(ಗೊಂದಲ)

ಶ್ರೀ ಸಿ. ಭೈರೇಗೌಡ : ನೀವು ಬಳಸಿರತಕ್ಕಂಥ ಪದ ನಮ್ಮ ಶಾಸಕರ ಮೇಲೆ ಆಪಾದನೆ ಮಾಡತಕ್ಕಂಥಾದ್ದಾಗಿದೆ. ಇದು ಅಪಮಾನ ಮಾಡತಕ್ಕದ್ದು ಆಗಿದೆ. ಆ ವಿಚಾರದ ಬಗ್ಗೆ ದಯವಿಟ್ಟು ಹೇಳಿ. ನಾನು ಹೇಳಿದ್ದು ಬೇರೆ. ನೀವು ಹೇಳುತ್ತಾ ಇರತಕ್ಕಂಥಾದ್ದು ಬೇರೆ.

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ : ನನಗೂ ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

11.30 ಎ.ಎಂ.

ಮಾನ್ಯ ಭೈರೇಗೌಡರು ಎತ್ತಿರತಕ್ಕ ವಿಷಯದ ಪ್ರಕಾರ, ಮಾನ್ಯ ಯಡಿಯೂರಪ್ಪನವರು ಹೇಳಿದಂಥ ಮಾತನ್ನು ಕಡತದಿಂದ ತೆಗೆಯಬೇಕು.

ಉಪಾಧ್ಯಕ್ಷರು : ತಾವು ಕೂಡಿ. ಎಲ್ಲರೂ ಹೀಗೆ ಒಟ್ಟಿಗೆ ಎದ್ದು ನಿಂತರೆ ಹೇಗೆ ಮಾಡುವುದು? ದಯಮಾಡಿ ಕೇಳಿ. ವಿರೋಧ ಪಕ್ಷದ ನಾಯಕರು ಮಾತನಾಡುವುದೆಲ್ಲವನ್ನೂ ಕೇಳಿ. ಅವರು ಉತ್ತರ ಕೊಡುವಾಗ ಎಲ್ಲಕ್ಕೂ ಉತ್ತರ ಕೊಡುತ್ತಾರೆ. ತಾವು ನಡುವೆ ಎದ್ದು ಏಕೆ ಸಮಯವನ್ನು ಕಳೆಯುತ್ತೀರಿ?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನೇನೂ ನಿಮ್ಮ ಬಗ್ಗೆ ಹೇಳಿಲ್ಲ. ಕೋಟ್ಯಾಂತರ ರೂಪಾಯಿ ಬೆಲೆ ಬಾಳುವಂಥ ಸ್ಟೇ ಸೈಟುಗಳನ್ನು ....

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ : ನಾನು ಹೇಳತಕ್ಕಂಥದ್ದು, ಮಾನ್ಯ ಯಡಿಯೂರಪ್ಪನವರು ಏನು ಪದ ಬಳಸಿದ್ದಾರೆಯೋ, ಅದರ ಬಗ್ಗೆ ಹೇಳುವುದಕ್ಕೆ ನೀವು ಅವಕಾಶ ಕೊಡಬೇಕು. ಇದರಲ್ಲಿ ವಕಾಲತ್ತು ವಹಿಸತಕ್ಕಂತಾದ್ದಲ್ಲ. ನೀವು ನಮ್ಮ ರಕ್ಷಣೆಗೆ ಬರಬೇಕು. ವರ್ಗಾವಣೆ ನಡೆಯದೇ ಇದ್ದರೆ, ಬದುಕುವುದಕ್ಕೆ ಆಗುವುದಿಲ್ಲವೆಂದು ನಾವು ಯಾರೂ ಹೇಳಿಲ್ಲ.

ಉಪಾಧ್ಯಕ್ಷರು : ಈಗ ಅವರು ಮಾತನಾಡಲಿ. ಆಮೇಲೆ, ಸರ್ಕಾರದ ಕಡೆಯಿಂದ ಉತ್ತರ ಕೊಡುತ್ತಾರೆ. ಮೊದಲು ಅವರು ಮಾತನಾಡುವುದು ಮುಗಿಯಲಿ.

ಶ್ರೀ ಜೆ.ಹೆಚ್. ಪಟೇಲ್ : ಈಗ ಅವರು ಏನು ಹೇಳುತ್ತಾರೋ ಕೇಳೋಣ. ಅವರು ಬೇಕಾದದ್ದು ಹೇಳಲಿ. ಇನ್ನೊಂದು, ಅವರು ಎಷ್ಟು ಸಿಟ್ಟಿನಿಂದ, ಆವೇಶದಿಂದ ಮಾತನಾಡುತ್ತಾರೆ, ಏನು ಕಾರಣ, ಇವರಿಗೆ ಏನಾಗಿರಬಹುದು ಎಂದು When reasons fail, emotions prevail. ಸುಮ್ಮನೆ ಕೇಳಿ.

ಉಪಾಧ್ಯಕ್ಷರು : ತಾವು ಮಾತನಾಡಿ. ದಯಮಾಡಿ ಅವರು ಮಾತನಾಡುವಾಗ ಯಾರೂ ನಡುವೆ ಮಾತನಾಡಬೇಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನನಗೆ ಸನ್ಮಾನ್ಯ ಮುಖ್ಯಮಂತ್ರಿಗಳ ಬಗ್ಗೆ ಈ ವಿಷಯದಲ್ಲಿ ತುಂಬಾ ಗೌರವ ಇದೆ.

SRI H.N. NANJEGOWDA : Not because reasons failed, because of the righteous indignation he is becoming angry; not because of reasons.

ಶ್ರೀ ಬಿ.ಎಸ್. ಯಡಿಯೂರಪ್ಪ : ಸ್ವಾಮಿ, ಈ ಸದನದಲ್ಲಿ ಯಾವ ಪರಿಸ್ಥಿತಿ ಬಂತು. ಬಜೆಟ್ ವೋಟಿಂಗ್ ಆಗುವಂಥ ಸಂದರ್ಭದಲ್ಲಿ ಒಂದು ರೀತಿ ವಿರೋಧ ಪಕ್ಷಗಳ ಒಂದು ಕೃಪೆಯಿಂದ ಅವತ್ತು ಬಜೆಟ್ಟು ಪಾಸ್ ಮಾಡಿಕೊಳ್ಳುವಂಥ ಸ್ಥಿತಿ ಬಂತು. ಇವತ್ತು ನಿಮ್ಮ ಸರ್ಕಾರದಲ್ಲಿ ಎಲ್ಲವೂ ಸರಿಯಿಲ್ಲವೆನ್ನುವುದಕ್ಕೆ 45 ಜನ ಸಚಿವ ಸಂಪುಟದ ಸದಸ್ಯರು ಇದ್ದರೂ ಸಹ ಒಂದು ರೀತಿ ವಿಸಿಟಿಂಗ್ ಪ್ರೊಫೆಸರ್ ಎಂದು ಅರ್ಧ ಗಂಟೆ ಬಂದು ಮುಖ ತೋರಿಸಿ ಹೊರಟು ಹೋಗುತ್ತಾರೆ. ಒಟ್ಟಿಗೆ ಯಾವತ್ತಾದರೂ ನೀವು ಎಲ್ಲರೂ ಕುಳಿತಿದ್ದೀರೋ? ಇವತ್ತು ಸ್ವಲ್ಪಮಟ್ಟಿಗೆ ಇರಬಹುದು. ಹಿಂದೆ ಬಜೆಟ್ ಪಾಸಾಗಬೇಕೆನ್ನುವಾಗ, ಅವಿಶ್ವಾಸ ನಿರ್ಣಯ ಬಂದಾಗ ಅದು ಯಾರ ಯಾರ ಮನಸ್ಸಿನಲ್ಲಿ, ನಾಳೆ ಮಧ್ಯಾಹ್ನದೊಳಗೆ ಏನೇನಾಗುತ್ತದೆಯೋ ಗೊತ್ತಿಲ್ಲ. ಸದ್ಯಕ್ಕಂತೂ ಕುಳಿತಿದ್ದೀರಿ ಅಲ್ಲಿ ಕುಳಿತಾಕ್ಷಣ ನಮ್ಮ ಜೊತೆ ಇಲ್ಲವೆಂದು ನಿಮ್ಮ ಮನಸ್ಸು ಒಪ್ಪಬೇಕಲ್ಲಾ. ಸ್ವಾಮಿ, ಅಡ್ಮಿನಿಸ್ಟ್ರೇಷನ್ ಸಂಪೂರ್ಣ ಕೊಲ್ಯಾಪ್ಸ್ ಆಗಿದೆ. ನೀವು ನಿಮ್ಮ ರಾಜಕೀಯ ಗೊಂದಲದಲ್ಲಿ, ನಿಮ್ಮ ಕುರ್ಚಿ ಉಳಿಸಿಕೊಳ್ಳುವುದಕ್ಕೆ ಡೆಲ್ಲಿ, ಇಲ್ಲಿ ಸುತ್ತುವರಿಯುವಂಥ ಕಾಲದಲ್ಲಿ, ವಿಧಾನ ಸೌಧದಲ್ಲಿ ಅಧಿಕಾರಿಗಳೂ ಕುಳಿತುಕೊಳ್ಳುತ್ತಾ ಇಲ್ಲ. ನೀವೂ ಕುಳಿತುಕೊಳ್ಳುವುದಿಲ್ಲ. ಅಧಿಕಾರಿಗಳೂ ಕುಳಿತುಕೊಳ್ಳುತ್ತಿಲ್ಲ. ಬಡವರ ಕಷ್ಟಸುಖ ಕೇಳುವವರಿಲ್ಲ ಫೈಲ್ ವಿಲೇವಾರಿ ಆಗುತ್ತಾ ಇಲ್ಲ. ಶಾಸಕರು ಬರೆದಂಥ ಪತ್ರಕ್ಕೆ, ಒಂದು ಪತ್ರಕ್ಕೂ ಉತ್ತರ ಕೊಡುವಂಥ ಸೌಜನ್ಯ ನೋಡುವುದಕ್ಕೆ ಪುರಸೊತ್ತು ಇಲ್ಲದಂಥ ಉಸಿರುಕಟ್ಟುವಂಥ ಪರಿಸ್ಥಿತಿಯಲ್ಲಿ ತಾವಿದ್ದೀರಿ. ಚುನಾವಣೆಯಾದ ತಕ್ಷಣ ಒಂದು ಬಜೆಟ್ಟು ತಾವು ಇಟ್ಟಿರಿ. ಮಾನ್ಯ ಸಿದ್ಧರಾಮಯ್ಯನವರು ಹಣಕಾಸಿನ ಸಚಿವರು ಬಹಳ ಬುದ್ಧಿವಂತರು. ಆ ಸಮಯದಲ್ಲಿ ತೆರಿಗೆಯನ್ನು ಹಾಕಲಿಲ್ಲ. ನಾನು ಹೇಳಿದ್ದೆ, ಈ ತೆರಿಗೆ ನೀವು ಹಾಕುವುದಿಲ್ಲ, ಲೋಕ ಸಭೆಯ ಚುನಾವಣೆ ಮುಂದಿಟ್ಟುಕೊಂಡಿದ್ದೀರಿ.

ಯಾವುದೇ ತೆರಿಗೆ ಹಾಕುವುದಿಲ್ಲ, ಮುಂದೆ ಏನಾಗುತ್ತದೆಯೋ ನೋಡಿ ಎಂದು ಹೇಳಿದ್ದೆ. ಎಲ್ಲರ ಲೆಕ್ಕಾಚಾರ ತಲೆಕೆಳಗೆ ಮಾಡಿಬಿಟ್ಟಿರಿ. ವಿದ್ಯುತ್ ದರ ಮೊದಲ ಬಾರಿಗೆ, ಸದನ ಸೇರುವುದಕ್ಕೆ ಮುಂಚೆ, 900 ಕೋಟಿಗೂ ಹೆಚ್ಚು ತೆರಿಗೆಯನ್ನು ಹಾಕುವಂಥ ಪ್ರಯತ್ನ ಮಾಡಿದಿರಿ. ಹಾಲಿನ ದರ ಏರಿಕೆ ಮಾಡಿದಿರಿ, ನೀರಿನ ದರ ಏರಿಕೆ ಮಾಡಿದಿರಿ. ಕದ್ದು ಮುಚ್ಚಿ ಕಾವೇರಿ ನೀರು ಬಿಟ್ಟಿರಿ. ಗುಪ್ತವಾಗಿ ತಮಿಳುನಾಡಿನವರ ಜೊತೆ ವ್ಯವಹಾರ ಮಾಡಿದಿರಿ ಸಾರಾಯಿ ಮಾರಾಟ ನಿಷೇಧ ಮಾಡುತ್ತೇವೆಂದು ಹೇಳಿ, ಅದನ್ನು ಮುಂದುವರಿಸುವಂಥ ಪ್ರಯತ್ನ ಮಾಡಿದಿರಿ. ಈ ಗ್ರಾನೈಟ್ ಕಳ್ಳಸಾಗಾಣಿಕೆ ಬಗ್ಗೆ,

21 ಜನ ಕಳ್ಳಸಾಗಾಣಿಕೆದಾರರು ಎಂದು ಪ್ರಮುಖರು ಇದ್ದರಲ್ಲಾ, ಆ ಹೆಸರುಗಳನ್ನು ಬಹಿರಂಗ ಮಾಡಿ ಎಂದು ಒತ್ತಾಯ ಮಾಡಿದೆವು. ಏಕೆ ಸ್ವಾಮಿ, ಬಹಿರಂಗ ಮಾಡಲಿಲ್ಲ? ಈ ರೀತಿ ಅವ್ಯವಹಾರದಲ್ಲಿ ತಾವು ನಡೆದಿರಿ. ತಮ್ಮದು ನುಡಿದಂತೆ ನಡೆಯುವ ಸರ್ಕಾರ. ನಾವು ವಚನ ಬದ್ಧರು, ಕಾಲಬದ್ಧರು ಎಂದು ಹೇಳಿದಿರಿ. ಈ ಬಹುರಾಷ್ಟ್ರೀಯ ಕಂಪನಿಗಳಿಗೆ ಶರಣು ಹೋಗಿ, ನಾನು ಈಗಾಗಲೇ ಹೇಳಿದಂತೆ ಕೋಟ್ಯಾಂತರ ರೂಪಾಯಿಗಳು ಬೆಲೆಬಾಳುವಂಥ ಖನಿಜ ಸಂಪತ್ತಿನ ಲೂಟಿಯಾಗುತ್ತಿದೆ ಎಂದು ಅನೇಕ ಉದಾಹರಣೆಗಳನ್ನು ಕೊಟ್ಟೆವು. ಲಕ್ಷಾಂತರ ಎಕರೆ ಜಮೀನನ್ನು

ಪರಭಾಷೆ ಮಾಡುವಂಥ ಕೆಲಸ ಏನು ನಿಮ್ಮ ಸರ್ಕಾರದಲ್ಲಿ ನಡೆಯುತ್ತಾ ಇದೆ ಆ ವಿವರಗಳನ್ನು ನಿಮಗೆ ಕೊಡುವವನಿದ್ದೇನೆ. ನಾನು ಹಿಂದೆ ಮಾತನಾಡಬೇಕಾದರೆ ಹೇಳಿದ್ದೆ. ಅಕ್ರಮ, ಸಕ್ರಮ ಬಿಲ್ಡಿಂಗ್‌ಗಳ ಬಗ್ಗೆ ನಂಜೇಗೌಡರು ಮಾತನಾಡಬೇಕಾದರೆ ಹೇಳಿದ್ದರು. ಎಷ್ಟು ಕೋಟಿ ಬಂತು ಸ್ವಾಮಿ? ಅಧಿಕೃತವಾಗಿ ಎಷ್ಟು ಬಂತು, ಅನಧಿಕೃತವಾಗಿ ಎಷ್ಟು ಬಂತು, ಆ ದುಡ್ಡು ಎಲ್ಲಿ ಹೋಯಿತು? ಅಭಿವೃದ್ಧಿ ಕಾರ್ಯಕ್ಕೆ ಉಪಯೋಗವಾಯಿತೇ? ಯಾರ ಜೇಬು ಸೇರಿದೆ ಎಂದು ಇವತ್ತು ಜನ ಮಾತನಾಡುವಂಥ ಪರಿಸ್ಥಿತಿ ಬಂದಿಲ್ಲವೇ? ಬೆಂಗಳೂರು ಸುತ್ತಮುತ್ತ ಕನ್ವರ್ಷನ್ ಫೀ ಇವತ್ತು ಒಂದು ಎಕರೆಗೆ ಒಂದು ಲಕ್ಷ ರೂಪಾಯಿ. ಒಂದು ಲಕ್ಷ 70 ಸಾವಿರ ಇಂಡಸ್ಟ್ರೀಸ್ನವರಿಗೆ. ಆದರೆ ಇದರಲ್ಲಿ ಎಷ್ಟು ಕೋಟಿ ಆದಾಯ ಬಂತು ಎಂದು ಯಾವುದೇ ಅಂಕಿಅಂಶಗಳಲ್ಲಿ ನಮಗೆ ಕಾಣುತ್ತಾ ಇಲ್ಲ. ಸ್ವಾಮಿ, ಈ ಕಾವೇರಿ, ಕೃಷ್ಣಾ ನೀರಾವರಿ ಈ ರಾಜ್ಯದ ಜೀವನಾಡಿ. ಕನ್ನಡ ನಾಡಿನ ಜನರಿಗೆ ಎರಡು ಕಣ್ಣು ಇದ್ದ ಹಾಗೆ. ಈ ಎರಡೂ ವಿಚಾರಗಳಲ್ಲಿ ನಿಮ್ಮ ಕುರ್ಚಿ ಹಿತವನ್ನು, ಮಾನ್ಯ ನಾಗೇಗೌಡರಂಥವರು, ಹೋರಾಟ ಮಾಡಿಕೊಂಡು ಬಂದವರು, ನಾನು ವಿಧಾನ ಪರಿಷತ್ತಿನಲ್ಲಿ ಅವರ ಭಾಷಣವನ್ನು ಕೇಳುತ್ತಾ ಇದ್ದೆ. ನೀರಾವರಿ ಇಲಾಖೆ ಅವರಿಗೆ ಸಿಕ್ಕಿತು. ಇನ್ನು ಅನ್ಯಾಯವಾಗುವುದಿಲ್ಲವೆಂದು ತಿಳಿದುಕೊಂಡಿದ್ದೆ. ಆದರೆ, ಏನು ರಕ್ಷಣೆ ಮಾಡಿದರು. ಕನ್ನಡ ನಾಡಿನ ಜನರಿಗೆ, ರಾಜ್ಯದ ಜನರಿಗೆ ಅರ್ಥವಾಗುವುದು. ಟಿ.ಎಂ.ಸಿ. ಎಂದರೆ, Thousand Million Cusecs. ಆದರೆ ಆಡಳಿತ ಪಕ್ಷದವರಿಗೆ ಗೊತ್ತಾಗುವುದು ತಮಿಳು ಮನಿಲಾ ಕಾಂಗ್ರೆಸ್. ಆ ಪಕ್ಷದ ಒಂದು ಸಪೋರ್ಟ್ಗೆ ಎಷ್ಟು ಟಿ.ಎಂ.ಸಿ. ಬೇಕಾದರೂ ಬಿಡುವುದಕ್ಕೂ ಸಿದ್ಧರಿದ್ದಾರೆ. ಇವತ್ತು ಅದೇ ಪರಿಸ್ಥಿತಿ, ಆಂಧ್ರದವರ ಜೊತೆ ಹೊಂದಾಣಿಕೆ ಮಾಡಿಕೊಳ್ಳುವಂಥ ಪ್ರಯತ್ನ ಮಾಡುತ್ತಿದ್ದೀರಿ.

ರಾಜ್ಯದ ಹಿತಕ್ಕೆ, ಸದನಕ್ಕೆ, ವಿರೋಧಪಕ್ಷದ ನಾಯಕರುಗಳ ಸಭೆಯಲ್ಲಿ ಹೇಳುವುದು ಬೇರೆ, ಈ ಬಗ್ಗೆ ತಮಿಳುನಾಡಿಗೆ, ಡೆಲ್ಲಿಗೆ ಹೋದರೆ, ತಾವು ಮಾಡುವುದೇ ಬೇರೆ. ಈ ಕೆ.ಆರ್.ಎಸ್.ನ ವಿಚಾರವಾಗಿ ಮೈಸೂರಿನ ಸದಸ್ಯರು ಹೇಳುತ್ತಾ ಇದ್ದರು. ತಮಿಳುನಾಡಿನ ಇಂಜಿನಿಯರ್ಸ್ ಇದ್ದಾರೆ. ನಮ್ಮ ಸರ್ಕಾರವೇ ಸಂಬಳ ಕೊಡುತ್ತದೆ ಎಂದು ಮತ್ತೆ ನಮಗೆ ಅನುಮಾನ ಬರುತ್ತಾ ಇದೆ. ರಾಜ್ಯದ ನೀರಾವರಿ ಸಚಿವರು ಮತ್ತು ಮುಖ್ಯಮಂತ್ರಿಗಳೂ ಸಹ ಏನಾದರೂ ತಮಿಳುನಾಡು ಮತ್ತು ಆಂಧ್ರದ ವಕ್ತಾರರಾಗಿ ವರ್ತನೆ ಮಾಡುತ್ತಿದ್ದಾರೋ ಏನೋ ಎಂಬ ಭಾವನೆ ಇವತ್ತು ರಾಜ್ಯದ ಜನರಲ್ಲಿ ಮೂಡುತ್ತಾ ಇದೆ.

ಅದಕ್ಕಾಗಿ ಇವತ್ತು ಈ ಒಂದು ಅವಿಶ್ವಾಸ ನಿರ್ಣಯ. ಕರುಣಾನಿಧಿಯವರಿಗೆ ಕಾವೇರಿ ನೀರಿನ ಸಮಸ್ಯೆ ಬಗ್ಗೆ ಚಿಂತೆ. ಇನ್ನೊಬ್ಬ ಮುಖ್ಯಮಂತ್ರಿ ಪ್ರಫುಲ್ಲ ಮಹಾಂತ ಅವರಿಗೆ ಬಾಂಗ್ಲಾದೇಶದಲ್ಲಿ ಅಕ್ರಮ ವಲಸೆಗಾರರು ಬಂದಿದ್ದಾರೆ. ಅವರ ಬಗ್ಗೆ ಚಿಂತೆ. ಜ್ಯೋತಿಬಸು ಅವರಿಗೆ ಡಾರ್ಜಲಿಂಗ್ ಸಮಸ್ಯೆ ಬಗ್ಗೆ ಚಿಂತೆ. ಲಲ್ಲೂ ಪ್ರಸಾದ್ ಯಾದವ್ ಅವರಿಗೆ ಪ್ರತ್ಯೇಕ ವರುಣಾಚಲದ ಸಮಸ್ಯೆ. ಅವುಗಳನ್ನೇ, ಬಗೆಹರಿಸಿಕೊಳ್ಳುವಂಥ ಸ್ಥಿತಿಯಲ್ಲಿ ಅವರಿಲ್ಲ. ಅವರೆಲ್ಲರನ್ನೂ ಕರೆದುಕೊಂಡು ಬಂದು, ನಮ್ಮ ನೀರಾವರಿ ಯೋಜನೆಯನ್ನು ಸರಿಪಡಿಸಿ, ಆಲಮಟ್ಟಿ ಡ್ಯಾಮ್ ಎಷ್ಟು ಎತ್ತರ ಮಾಡಿದ್ದೇವೆ, ಏನೆಲ್ಲ ನೋಡುವುದಕ್ಕೆ ಅವರು ಇಲ್ಲಿಗೆ ಬರುತ್ತಾರೆ. ಪ್ರಧಾನಿಗಳಿಗೆ ನಾನು ಒಂದು ಸಲಹೆ ಕೊಡುತ್ತೇನೆ. ನಮ್ಮ ಮುಖ್ಯಮಂತ್ರಿಗಳು, ನಮ್ಮೆಲ್ಲರ ಹಿತವನ್ನು ಬಿಟ್ಟು, ಸದನ ನಡೆಯುವಂಥ ಕಾಲದಲ್ಲಿ ಡೆಲ್ಲಿಯಲ್ಲಿ ಹೋಗಿ ಕುಳಿತಿದ್ದರಲ್ಲಾ ಈ ನಾಲ್ಕು ರಾಜ್ಯದ

ಮುಖ್ಯಮಂತ್ರಿಗಳು ಏನು ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಅದಕ್ಕೆ ತಮ್ಮನ್ನೇ ಏಕ ಸದಸ್ಯ ಸಮಿತಿ ಎಂದು ಮಾಡಿ, ಆ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ನೀವು ಹೋಗಿ. ಅವರು ಇಲ್ಲಿಗೆ ಬಂದು, ನಮ್ಮ ಸಮಸ್ಯೆಗಳನ್ನೆಲ್ಲಾ ಬಗೆಹರಿಸಲಿ. ಆ ರೀತಿ ಇವತ್ತು ಕೇಂದ್ರದ ಸಚಿವರು, ಅನಗತ್ಯವಾಗಿ ಪ್ರಧಾನಿಯವರು ಇಲ್ಲಿ ಪ್ರವೇಶ ಮಾಡುವಂತಾದ್ದು ಆಗುತ್ತಿರುವುದರಿಂದ ಜನರ ಮುಂದೆ ನಗೆಪಾಟಲಿಗೆ ಈಡು ಮಾಡುವಂಥ ಪರಿಸ್ಥಿತಿ ಇವತ್ತು ಮಾಡುತ್ತಿದ್ದೀರಿ. ಸನ್ಮಾನ್ಯ ದೇವೇಗೌಡರು ಈ ದೇಶದ ಪ್ರಧಾನಿ, ಅವರ ಬಗ್ಗೆ ಗೌರವ ಇದೆ. ಪ್ರಧಾನ ಮಂತ್ರಿಗಳು ಎಂದು ಹೇಳಿದರೆ, ಒಂದು ತರಹ ಚಿನ್ನದ ಕತ್ತಿ ಇದ್ದ ಹಾಗೆ. ನಮ್ಮವರು ಎಂದು, ಕತ್ತು ಕೊಯ್ದಿಕೊಳ್ಳುವುದಕ್ಕಾಗುತ್ತದೆಯೇ? ಆಲಮಟ್ಟಿ ಡ್ಯಾಮ್ಗೂ, ಅವರಿಗೂ ಏನು ಸಂಬಂಧ ಇದೆ ಸ್ವಾಮಿ? ಒಂದು ಸಾರಿ, ಒಂದು ಟ್ರಿಬ್ಯುನಲ್ ಅವಾರ್ಡ್ನಲ್ಲಿ ತೀರ್ಮಾನವಾದ ಮೇಲೆ, ನಮ್ಮ ಆ ಒಂದು ಚೌಕಟ್ಟಿನಲ್ಲಿ ಆಲಮಟ್ಟಿ ಡ್ಯಾಮ್ ಕಟ್ಟುತ್ತಿರಬೇಕಾದರೆ, ನಾವೇನಾದರೂ ತಪ್ಪು ಮಾಡಿದರೆ, ಎಲ್ಲಿಗೆ ಹೋಗಬೇಕು ಅವರು. ಅದೇ ಆಯೋಗದ ಮುಂದೆ ಹೋಗಬೇಕು. ಆಯೋಗ ಇಲ್ಲದಿದ್ದರೆ, ಸುಪ್ರೀಂ ಕೋರ್ಟ್ ಮುಂದೆ ಹೋಗಬೇಕು.

ನಾವು ಏನೂ ತಪ್ಪು ಮಾಡದೇ ಏನೂ ವೆಯಲೇಟ್ ಮಾಡದೇ ಇದ್ದಾಗ ಈ ದೇಶದ ಪ್ರಧಾನ ಮಂತ್ರಿಗಳಾಗಲಿ, ಸುಪ್ರೀಂ ಕೋರ್ಟ್ ಆಗಲಿ ಒಂದು ಆಯೋಗ ಕೊಟ್ಟಿರುವಂತಹ ತೀರ್ಪಿನ ವಿರುದ್ಧ ಮತ್ತೇ ಆಯೋಗ ಮಾಡುವುದಕ್ಕೆ ಬರುವುದಿಲ್ಲ ಎನ್ನುವುದು ಗೊತ್ತಾಗುವುದಿಲ್ಲವೇ? ಆಂಧ್ರಪ್ರದೇಶದ ಮುಖ್ಯಮಂತ್ರಿಗಳು, ನಮ್ಮ ದೇಶದ ಪ್ರಧಾನಿ ಆ ರಾಜ್ಯಕ್ಕೆ ಹೋದರೆ ಅವರನ್ನು ರಿಸೀವ್ ಮಾಡಿಕೊಳ್ಳುವಂತಹ ಸದ್ಭಾವನೆ ಇಲ್ಲ, ದುರಹಂಕಾರ. ಮುಖ್ಯಮಂತ್ರಿಗಳ ಸಭೆಯನ್ನು ಕರೆದಾಗ ನಾನು ಬರಲಿಲ್ಲ, ಏಕೆ? ಪ್ರತಿಪಕ್ಷದವರಿಗೆ ಅಲ್ಲಿ ಗೌರವ ಸಿಗುವುದಿಲ್ಲ, ಅದರ ಅಗತ್ಯ ನಮಗೆ ಇಲ್ಲ, ಆದರೆ ಪ್ರಧಾನ ಮಂತ್ರಿಗಳು ಕರೆದಂತಹ ಸಭೆಗೆ ಹಿಂದೆ ಎಲ್ಲಾ ನಾವು ಹೋಗಲಿಲ್ಲವೇ? ಕಾವೇರಿ ಕೃಷ್ಣಾ ಬಗ್ಗೆ ತಾವು ಸಭೆಯನ್ನು ಕರೆದಾಗ ಎಲ್ಲರಿಗಿಂತ ಮುಂದೆ ಕುಳಿತುಕೊಂಡು ನಾವು ಪ್ರತಿಪಕ್ಷದವರು ಸಹಕಾರ ಕೊಡಲಿಲ್ಲವೇ? ಇಲ್ಲಿಗೆ ಏಕೆ ಬರಲಿಲ್ಲ? ಕಾವೇರಿ ವಿಷಯದಲ್ಲಿ ಈ ದೇಶದ ಜನರ ಮುಂದೆ ಶ್ರೀಮತಿ ಜಯಲಲಿತಾರವರು ವ್ಯವಸ್ಥಿತವಾಗಿ ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವಂತಹ ಪ್ರಯತ್ನ ಮಾಡಿದರು. ಅದೇ ಪರಿಸ್ಥಿತಿ ಮರುಕಳಿಸಬಾರದು.

ಆಂಧ್ರಪ್ರದೇಶದಲ್ಲಿ ಗೊಂದಲದ ವಾತಾವರಣ, ಹಣಕಾಸಿನ ಸಮಸ್ಯೆ, ಪುಕ್ಕಟೆಯಾಗಿ, ಕಡಿಮೆ ಬೆಲೆಗೆ ಅಕ್ಕಿಯನ್ನು ಕೊಡುತ್ತೇನೆ ಪಾನ ನಿಷೇಧ ಜಾರಿಗೆ ತಂದು ಅಲ್ಲಿನ ಹಣಕಾಸಿನ ಪರಿಸ್ಥಿತಿ ಹದಗೆಟ್ಟು ರಸ್ತೆಯಲ್ಲಿ ಓಡಾಡಲಿಕ್ಕೆ ಆಗದಂಥ ಒಂದು ಪರಿಸ್ಥಿತಿಗೆ ಬಂದಿರಬೇಕಾದರೆ ಈ ಗೊಂದಲ ಆಂಧ್ರ ಪ್ರದೇಶದ ಮುಖ್ಯಮಂತ್ರಿ ಮಾಡುತ್ತಿದ್ದಾರೆನ್ನುವುದು ನಿಮಗೆ ಗೊತ್ತಿರಲಿಲ್ಲವೇ? ಪ್ರಧಾನಮಂತ್ರಿಗಳು ಕರೆದಂತಹ ಸಭೆ ಮುಗಿದ ಮೇಲೆ ತನ್ನ ನಿಲುವು ಏನು ಇತ್ತು ಅದನ್ನು ಹೇಳಬೇಕಾಗಿತ್ತಲ್ಲಾ. ಅವತ್ತು ರಾತ್ರಿ ಊಟದ ವ್ಯವಸ್ಥೆ ಮಾಡಿದಾಗ ಬಹಿಷ್ಕಾರ ಮಾಡಿ ಹೋಗಲಿಲ್ಲ? ಇದೇ ಕೆಲಸ ಜಯಲಲಿತಾರವರು ಹಿಂದಿನ ಪ್ರಧಾನ ಮಂತ್ರಿಗಳ ಕಾಲದಲ್ಲಿ ಉದ್ಧಟತನದಿಂದ ವರ್ತನೆ ಮಾಡಲಿಲ್ಲ? ಇವರ ಜೊತೆ ಸಮಾಲೋಚನೆ ಮಾಡುತ್ತೀರಿ? ಇವರ ಜೊತೆ ಮಾತುಕತೆ ನಡೆಸುತ್ತೀರಿ? ಇವರಿಗೆ ಆಮಂತ್ರಣ ಕೊಡುತ್ತೀರಿ. ಅದಕ್ಕೆ ನಾವು ಬರಬೇಕು ನಿಮ್ಮ ಜೊತೆ ಮಾತನಾಡುವುದಕ್ಕೆ ಅದಕ್ಕಾಗಿ ಇವತ್ತು ಈ ಒಂದು ಅವಿಶ್ವಾಸ ನಿರ್ಣಯ. ನಮ್ಮ ವೈ. ರಾಮಕೃಷ್ಣರವರು ಹೇಳುತ್ತಿದ್ದರು. ಗೋಕುಲಾಷ್ಟಮಿಗೂ ಇಮಾಮ್ ಸಾಬಿಗೂ

ಏನು ಸಂಬಂಧ ಎಂದು. ನಾಲ್ಕು ಜನ ಮುಖ್ಯಮಂತ್ರಿಗಳು ಅವರ ತೀಟೆಯನ್ನು ತೀರಿಸಿಕೊಳ್ಳಲಿ. ಅವರ ಸಮಸ್ಯೆಯನ್ನು ಅವರು ಮೊದಲು ಬಗೆಹರಿಸಿಕೊಳ್ಳಲಿ, ಅವರು ಕರ್ನಾಟಕಕ್ಕೆ ಬರಲು ಏನು ಅಧಿಕಾರ ಇದೆ? ಇದರಿಂದ ಏನಾದರೂ ಮುಗಿಯಿತೇನು? ದೇವರ ದಯೆಯಿಂದ ನಿಮಗೆ ಸದ್ಬುದ್ಧಿ ಬಂದು ಈ ಸರ್ಕಾರ ತೊಲಗಿಹೋದರೆ ನಮ್ಮ ರಾಜ್ಯದ ರಕ್ಷಣೆ ಆಗಬಹುದು, ಕೃಷ್ಣಾ ಕಾವೇರಿ ಈ ನದಿ ನೀರು ನಮಗೆ ಉಳಿಯಬಹುದು. ಕನ್ನಡ ನಾಡಿನ ಹಿತ ಆಗಬಹುದು. ಇಲ್ಲದೇ ಇದ್ದರೆ ಅವರೆಲ್ಲರಿಗೂ ಸ್ವಾಗತ ಇದೆ. ಪಶ್ಚಿಮ ಬಂಗಾಲದ ಮುಖ್ಯಮಂತ್ರಿ ಹೇಳಿದ್ದಾರೆ ಅವಿಶ್ವಾಸ ನಿರ್ಣಯ ಇದೆ ಅದು ಆದ ಮೇಲೆ ನಾವೆಲ್ಲಾ ಹೋಗೋಣ. ಎಂದು ಬಂತಲ್ಲ 'ಜೀ' ಟಿ ವಿ ಯಲ್ಲಿ ಏನು ನಡೆಸಿದ್ದೀರಿ ಒಳಗಡೆ?

ಈ ಸದನಕ್ಕೆ ಏಕೆ ಸತ್ಯ ಹೇಳುತ್ತಿಲ್ಲ? ಏಕೆ ಮುಚ್ಚುಮೊರೆ? ಕೃಷ್ಣಾ ಮೇಲ್ದಂಡೆ ಯೋಜನೆಗೆ ಏನು ಹೇಳಿದ್ದೀರಿ ನಾವು ವಚನ ಬದ್ಧರು, ಕಾಲ ಬದ್ಧರು. ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ. ಎಂದೆಲ್ಲಾ ಹೇಳಿದಿರಿ? ಎಲ್ಲಿದೆ ಕಾರ್ಯಕ್ರಮ? ಹೋದವರ್ಷ ಎಷ್ಟು ಖರ್ಚು ಮಾಡಿದಿರಿ? ಇವತ್ತು ಜುಲೈ ಕೊನೆಯವರೆಗೆ ಕೃಷ್ಣಾ ಜಲಭಾಗ್ಯ ನಿಗಮದಿಂದ 104 ಕೋಟಿ, ಸರ್ಕಾರ ಬಿಡುಗಡೆ ಮಾಡಿರುವ ಹಣ 52 ಕೋಟಿ ಒಟ್ಟು ಖರ್ಚು ಮಾಡಿರುವುಗು 156 ಕೋಟಿ. ಈ ಯೋಜನೆ ಪೂರ್ತಿಯಾಗಬೇಕಾದರೆ 4 ವರ್ಷಗಳಲ್ಲಿ ಪ್ರತಿ ವರ್ಷ ಎರಡೂವರೆ ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೂ ಪೂರ್ಣ ಆಗುವುದಿಲ್ಲ. ಈ ಅಂಕಿ ಅಂಶ ತಪ್ಪು ಇದ್ದರೆ ಹೇಳಿ. ಏನು ವಚನ ಬದ್ಧರು ಏನು ಕಾಲ ಬದ್ಧರು? ಕೃಷ್ಣಾ ಜಲಭಾಗ್ಯನಿಗಮದ ಬಾಂಡ್ ಮುಗಿಯಿತು. ಹಣ ತಾವು ಎಲ್ಲಿಂದ ತರುತ್ತೀರಿ? ಪ್ಲಾನ್ ನಿಮ್ಮ ಮುಂದೆ ಏನಿದೆ? ನಿಮ್ಮಿಂದ ರಾಜ್ಯದ ಹಿತ ಆಗುತ್ತದೆಯೇ? ಕೃಷ್ಣಾ ಮತ್ತು ಕಾವೇರಿ ಜಲಾನಯನ ಪ್ರದೇಶದಲ್ಲಿ ನೀರಾವರಿ ಯೋಜನೆಗಳು ಜಾರಿಗೆ ಬರುತ್ತದೆಯೇ? ಹೋದ ವರ್ಷ ಸಾವಿರ ಕೋಟಿ ರೂಗಳನ್ನು ಖರ್ಚು ಮಾಡುತ್ತೇವೆ, ಎಂದು ಹೇಳಿದರೆ ಆಗ ನಾವು ಎಲ್ಲಿಂದ ತರುತ್ತೀರಿ ಎಂದು ಕೇಳಿದಾಗ ಮಾಡಿ ತೋರಿಸುತ್ತೇವೆಂದು ಹಿಂದಿನ ಮುಖ್ಯಮಂತ್ರಿಗಳು ಹೇಳಿದ್ದರು. ಮಾಡಿದ್ದು ಎಷ್ಟು? 500 ಕೋಟಿ ರೂಪಾಯಿಗಳೂ ದಾಟಲಿಲ್ಲ. ಹೇಳುತ್ತೀರಿ ಅಂಕಿಅಂಶ. ಹೇಳುವುದು ಒಂದು ಮಾಡುವುದು ಒಂದು. ಮನ ಬಂದಂತೆ ಅಂಕಿಅಂಶ ಹೇಳಿಕೊಂಡು ಹೋಗುತ್ತಿದ್ದೀರಿ .ರಾಜ್ಯದಲ್ಲಿ ಇವತ್ತು ಕಾನೂನು ಸುವ್ಯವಸ್ಥೆ ಸಂಪೂರ್ಣವಾಗಿ ಹದಗೆಟ್ಟಿದೆ. ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಈ ಇಲಾಖೆಯನ್ನು ನೋಡಿಕೊಳ್ಳುವಷ್ಟು ಪುರಸೊತ್ತು ಇಲ್ಲ.

ಜೂನ್ 96ರಲ್ಲಿ ಒಂದು ತಿಂಗಳ ಅವಧಿಯಲ್ಲಿ ಕೊಲೆಗಳು 128, ಕರ್ನಾಟಕ ರಾಜ್ಯದಲ್ಲಿ ಕೊಲೆ ಪ್ರಯತ್ನ 12, ಒಟ್ಟು ಕ್ರಿಮಿನಲ್ ಮೊಕದ್ದಮೆಗಳು 9494, ನೀವೇ ಕೊಟ್ಟಿರುವ ಅಂಕಿಅಂಶ. ಮಹಿಳೆಯರ ವಿರುದ್ಧ ಕ್ರೈಮ್ ಆಗಿರುವಂತಹದ್ದು 449, ಪರಿಶಿಷ್ಟ ಜಾತಿಯವರ ಮೇಲೆ ಅತ್ಯಾಚಾರ ಆಗಿರುವಂತಹ ಪ್ರಕರಣಗಳು 64. ಪರಿಶಿಷ್ಟ ಪಂಗಡದವರ ವಿರುದ್ಧ ಅತ್ಯಾಚಾರ ಆಗಿರುವಂತಾದ್ದು 13 ಪ್ರಕರಣ ನಂಜನಗೂಡು, ಬಂಗಾರಪೇಟೆ ಪೋಲೀಸ್ ಠಾಣೆಗಳಲ್ಲಿ ಆಗಿರುವ ಲಾಕಪ್ ಡೆತ್ ಬೆಂಗಳೂರು ನಗರದಲ್ಲಿ ದರೋಡೆ ಕೊಲೆ ಅಭರಣ ಲೂಟಿ ಅತ್ಯಾಚಾರ, ಇದು ನಿರಂತರವಾಗಿ ನಡೆಯುತ್ತಿದೆ. ತಾವು ಹೇಳಿದ್ದೀರಿ ತಮ್ಮ ಚುನಾವಣೆ ಪ್ರಣಾಳಿಕೆಯಲ್ಲಿ ಈ ಗೂಂಡಾಗಿರಿ ರಾಜಕಾರಣಕ್ಕೆ ಚರಮಗೀತೆಯನ್ನು ಹಾಡುತ್ತೇವೆ. ಪುಟ (2) ನಮ್ಮ ಚುನಾವಣಾ ಪ್ರಣಾಳಿಕೆ, ಏನಾಯಿತು ಸ್ವಾಮಿ? ಒಂದು ಮಾತು ಹೇಳುತ್ತೇನೆ. ನಮ್ಮ ಕಾಂಗ್ರೆಸ್ಸ್

ಸ್ನೇಹಿತರು ಅಧಿಕಾರದಲ್ಲಿ ಇದ್ದದ್ದನ್ನು ನಾವು ನೋಡಿದ್ದೇವೆ. ಅವರ ಮೇಲೆ ಸಹ ಟೀಕೆ ಮಾಡಿದ್ದೇವೆ. ಎಂದೂ ಸಹ ಪ್ರತಿಪಕ್ಷದವರನ್ನು ಹತ್ತಿಕ್ಕಲು ಪೋಲೀಸ್‌ನವರನ್ನು ಉಪಯೋಗಿಸಿಕೊಂಡಂಥದ್ದು ಶಾಸಕರ ಕೆಲಸಕಾರ್ಯಗಳನ್ನು ತಡೆಯುವುದಕೋಸ್ಕರ ಪೋಲೀಸ್‌ನವರನ್ನು ಉಪಯೋಗ ಮಾಡಿಕೊಂಡಂತಾದ್ದು ಜನಪರ ಕಾರ್ಯಕ್ರಮಕೋಸ್ಕರ ಹೋರಾಟಕ್ಕಾಗಿ ಬೀದಿಗೆ ಇಳಿದಾಗ ಒಂದೆರಡು ಉದಾಹರಣೆಗಳು ಇರಬಹುದು, ಆದರೆ ದ್ವೇಷ ಸುಳ್ಳು ಕೇಸ್‌ಗಳನ್ನು ಹಾಕಿಸುವಂತಾದ್ದು ನಡೆದಿಲ್ಲ. ನಾವು ಹೇಳಿಲ್ಲ ದಾಖಲೆ ತೆಗೆದು ನೋಡಿ. ನಾವು ಅನೇಕ ಸಂದರ್ಭಗಳಲ್ಲಿ ಅವರನ್ನು ಟೀಕೆ ಮಾಡಿದ್ದೇವೆ.

ನಿಮ್ಮ ಕಾಲದಲ್ಲಿ ಯಾರಾದರೂ ಶಾಸಕ ನಿರ್ಭೀತಿಯಿಂದ ನಮ್ಮ ಕೆಲಸ ಕಾರ್ಯಗಳನ್ನು ಮಾಡಬಹುದು ಎನ್ನುವ ವಾತಾವರಣ ಇದೆಯೇ? ಪೋಲೀಸ್ ಸ್ಟೇಷನ್‌ಗಳು ಜನತಾದಳದ ಕಛೇರಿಗಳು ಸಣ್ಣ ಪುಟ್ಟ ವಿಷಯಕ್ಕೂ ಮಂತ್ರಿಗಳಿಂದ ಆದೇಶಗಳು. ಜನತಾದಳದ ಮುಖಂಡರಿಂದ ಆದೇಶಗಳು. ಅವನ ಕಾಲು ಕುಣಿತಕ್ಕೆ ತಕ್ಕಂತೆ ಹೆಜ್ಜೆ ಹಾಕುವಂತಹ ಲಜ್ಜೆಗೆಟ್ಟ ಆಡಳಿತ ವ್ಯವಸ್ಥೆ ಪೋಲೀಸ್ ಸ್ಟೇಷನ್‌ಗಳ ವ್ಯವಸ್ಥೆ ಆಗಿದೆ. ಇದು ಸುಳ್ಳೇನು? ಸ್ವಾಮಿ ಮೊನ್ನೇ ಈ ರಾಜ್ಯದ ಮಾಜಿ ಮುಖ್ಯಮಂತ್ರಿಗಳು ನಿಮ್ಮಲ್ಲಿ ಕೆಲವರನ್ನು ಬೆಳೆಸಿದವರು. ಹಾಸನದಲ್ಲಿ ಸಾರ್ವಜನಿಕ ಸಭೆ ಕಲ್ಲು ತೂರಾಟ. ಕೋಳಿಮೊಟ್ಟೆ ಎಸೆದಿರಿ. ಚಪ್ಪಲಿಗಳ ತೂರಾಟ. ಏನು ಹೇಳಿದರು ಸನ್ಮಾನ್ಯ ಮುಖ್ಯಮಂತ್ರಿಗಳು? ಮುಖ್ಯಮಂತ್ರಿಗಳು ಹೇಳಿದರು ಅವರ ಸಂಸ್ಕೃತಿಯನ್ನು ತೋರಿಸುತ್ತದೆ. ಇದು ಈ ರೀತಿ ಮಾಡಿದಂತಹವರದ್ದು. ನಮ್ಮ ದೇಶಪಾಂಡೆಯವರಂತೂ ಅನೇಕ ವಿಷಯಗಳನ್ನು ಹೇಳಿದ್ದಾರೆ. ಅವರು ಇಲ್ಲ. ಅವರ ಕಡೆಯವರು ಹೇಳಿದರು ಬಿಡಿರಿ ನಾವೇನಾದರೂ ಹೇಳಿದ್ದೇವೆಯೇ ಎಂದು ಹೇಳಬಹುದು ಅದಕ್ಕೋಸ್ಕರ ನಾನು ಹೇಳುವುದಿಲ್ಲ.

ಆದರೆ ನಿಮ್ಮ ಪೋಲೀಸ್ ಅಧಿಕಾರಿಗಳು ಇರಲಿಲ್ಲವೇ. ಮಾಜಿ ಮುಖ್ಯಮಂತ್ರಿಗಳು ಸಾರ್ವಜನಿಕ ಸಭೆ ಮಾಡಬೇಕಾದರೆ? ಒಂದು ಗೃಹ ಇಲಾಖೆಯನ್ನು ನೋಡಿಕೊಳ್ಳುವಂತಹ ರಾಜ್ಯದ ಮುಖ್ಯಮಂತ್ರಿ ಅವರ ಸಂಸ್ಕೃತಿಯನ್ನು ತೋರಿಸುತ್ತ ಎಂದು ಹೇಳಿಬಿಟ್ಟು ಕಲ್ಲು ತೂರುವುದಕ್ಕೆ ಚಪ್ಪಲಿ ತೂರುವುದಕ್ಕೆ ಕೋಳಿಮೊಟ್ಟೆ ಎಸೆಯುವುದಕ್ಕೆ ಬಿಡುತ್ತೀರಿ? ನಾಚಿಕೆಯಾಗುವುದಿಲ್ಲವೇ? ಎಷ್ಟು ಜನರನ್ನು ಬಂಧಿಸಿದ್ದೀರಿ? ಎಷ್ಟು ಜನರ ಮೇಲೆ ಕೇಸ್ ಹಾಕಿದ್ದೀರಿ? ಅವರು ದೂರು ಕೊಟ್ಟಿದ್ದಾರಲ್ಲಾ. ಇದು ನಿಮ್ಮ ಕೆಲಸ ಅಲ್ಲವೇ? ಪ್ರಜಾತಂತ್ರ ವ್ಯವಸ್ಥೆಯಲ್ಲಿ ಯಾವುದೇ ರಾಜಕೀಯ ಪಕ್ಷ ಯಾವುದೇ ಒಂದು ಸಮಾರಂಭ ಮಾಡುವಂತಹ ಕಾಲದಲ್ಲಿ ನಿರ್ಭೀತಿಯಿಂದ ಸಭೆ ಸಮಾರಂಭ ಮಾಡುವಂತಹ ಅಧಿಕಾರ ಇಲ್ಲವೇನು? ನಾನು ಬಹಳನೊಂದು ಒಂದು ಮಾತನ್ನು ಹೇಳುತ್ತೇನೆ ದೇಶದ ಪ್ರಧಾನ ಮಂತ್ರಿಗಳು ಅಲ್ಲಿಗೆ ಹೋದರು. ಆದಾದ ನಾಲ್ಕಾರು ದಿವಸಕ್ಕೆ ಅವರ ಭಾಷಣ ಏನು? "ಅವರಿಗೆ ರಸ್ತೆಯಲ್ಲಿ ಬುದ್ಧಿ ಕಲಿಸಿ". ಎಂದು ಹೇಳಿದರೆ ಇದು ಶೋಭೆ ತರುವಂತಾದ್ದೇ, ಒಂದು ಪಕ್ಷಕ್ಕೆ, ಒಂದು ನಾಯಕತ್ವಕ್ಕೆ. ಬೀದಿಯಲ್ಲಿ ಬುದ್ದಿ ಕಲಿಸಿ ಅಂದರೆ ಕೊಡಲಿ ತೆಗೆದುಕೊಂಡು ಕಡಿಯಿರಿ ಅಂತ ನಿಮ್ಮ ಮನ ಬಂದಂತೆ ಜನ ಬೀದಿಗೆ ಇಳಿದು ಕಾನೂನನ್ನು ಕೈಗೆ ತೆಗೆದುಕೊಳ್ಳಿ ಎನ್ನುವಂತಹ ಅರ್ಥ ಬರುವುದಿಲ್ಲವೇ?

ಆ ಸಭೆಯಲ್ಲಿ ಯಾವುದೋ ಸಿಟ್ಟಿನಲ್ಲಿ ಯಾವುದೋ ಹಿಂದಿನ ವೈಮನಸ್ಸಿನಿಂದ ಆ ಮಾತು ಆಡಿದಾಗ ಯಾರಾದರೂ ಎದ್ದು ಈ ಮಾತು ಆಡಬೇಡಿ, ಎಂದು ಹೇಳಿದಿರೇನು? ಸರಿಪಡಿಸುವಂತಹ ಪ್ರಯತ್ನ ಮಾಡಿದಿರೇನು? ನಿಮ್ಮ ಚುನಾವಣೆ

ಪ್ರಣಾಳಿಕೆಯಲ್ಲಿ ಗೂಂಡಾಗಿರಿರಾಜಕಾರಣಕ್ಕೆ ಚರಮಗೀತೆಯನ್ನು ಹಾಡುತ್ತೇವೆ ಎಂದೆಲ್ಲಾ ನೀವು ಹೇಳಿದ್ದಿರಿ. ಕಾಂಗ್ರೆಸ್ಸ್‌ನವರ ಬಗ್ಗೆ ನೀವು ಹೇಳಿದಿರಿ. ಕೊಟ್ಟ ಮಾತಿಗೆ ತಪ್ಪಲಿಲ್ಲ, ಗೂಂಡಾಗಿರಿರಾಜಕಾರಣಕ್ಕೆ ಚರಮಗೀತೆಯನ್ನು ಹಾಡಲಾಯಿತು. ಜನಪರ ಚಳುವಳಿಯಲ್ಲಿ ಭಾಗವಹಿಸಿದ ರೈತರು, ವಿದ್ಯಾರ್ಥಿಗಳು, ಯುವಕರ ಮೇಲೆ ಹೂಡಲಾಗಿದ್ದ ಮೊಕದ್ದಮೆಗಳನ್ನು ಹಿಂತೆಗೆದುಕೊಳ್ಳಲಾಯಿತು, ಜನರಮೂಲಭೂತ ಅವಶ್ಯಕತೆಗಳಿಗೆ ಆದ್ಯತೆ ನೀಡಲಾಯಿತು ಕೊಟ್ಟಮಾತಿಗೆ ತಪ್ಪಲಿಲ್ಲ. ಈ ಮಾತನ್ನು ಚುನಾವಣೆ ಪ್ರಣಾಳಿಕೆಯಲ್ಲಿ ಹೇಳಿಕೊಂಡು ಬಂದಿರಿ.

ಈಗ ಏನು ಮಾಡುತ್ತಿದ್ದೀರಿ? ಸ್ವಾಮಿ ದೊಡ್ಡ ಬಳ್ಳಾಪುರದಲ್ಲಿ ಆದಾಯ ತೆರಿಗೆ ಸಿಬ್ಬಂದಿ ಮೇಲೆ ದಿನಾಂಕ 8 -8-96ರಲ್ಲಿ ಉದ್ರಿಕ್ತ ಗುಂಪಿನಿಂದ ಹಲ್ಲೆ ಆಯಿತು. ಈ ಘಟನೆಗೆ ಯಾವುದೇ ಸಂಬಂಧ ಇಲ್ಲದಂತಹ ನಿರಪರಾಧಿ ನಮ್ಮ ಸ್ಟೇಟ್ ಸೆಕ್ರೆಟರಿ ಹನುಮಂತರಾಯಪ್ಪನವರನ್ನು ಬಂಧನ ಮಾಡಿದಿರಿ. ನಿಮ್ಮ ಎಫ್ ಐ ಆರ್‌ನಲ್ಲಿ ಯಾರಿಂದ ಗಲಭೆ ಆಗಿದೆ ಗಲಾಟೆ ಆಗಿದೆ ಅವರು ದೂರು ಕೊಟ್ಟಿದ್ದಾರೆ. ಆರೋಪಿಗಳು ಯಾರು ತೇಜ್‌ರಾಜ್ ಜೈನ್, ಹುಕ್ಕುಮ್ ಚಂದ್ ಜೈನ್, ಕಾಂತಿಲಾಲ್ ಜೈನ್, ಹಾಗೂಇತರೇ 200 ಜನ ಪುರ ಟೌನ್ ವಾಸಿಗಳು. ನಾಗೇಗೌಡ್ರೇ, ನಿಮ್ಮ ಬಗ್ಗೆ ನಮಗೆ ಸ್ವಲ್ಪ ವಿಶ್ವಾಸ ಇದೆ ನಮ್ಮ ಜೆ ಎಚ್ ಪಟೇಲರ ಬಗ್ಗೆ ಸ್ವಲ್ಪ ವಿಶ್ವಾಸ ಹೋಗುತ್ತಿದೆ. ನೀವು ಹೋಗಿ ಬರುತ್ತೀರಾ? ಹನುಮಂತರಾಯಪ್ಪ ಯಾವ ಅಧಿಕಾರಿಗಳ ಮೇಲೆ ಹಲ್ಲೆ ಮಾಡುವುದಕ್ಕೆ ಪ್ರಯತ್ನನ ಮಾಡಿದರೋ ಎಲ್ಲೋ ಇದ್ದಂತಹವರಿಗೆ ಸುದ್ಧಿ ಬಂದಾಗ, ಅವರಿಗೆ ರಕ್ಷಣೆ ಕೊಟ್ಟು ವಾಪಸ್ಸ್ ಕಳುಹಿಸಿ ಕೊಟ್ಟಿದ್ದಾರೆ. ಹೆಣ್ಣು ಮಕ್ಕಳನ್ನು ಉಳಿಸಿ ಕಳುಹಿಸಿಕೊಟ್ಟಿದ್ದಾರೆ. ಜನತಾದಳದ ನಾಯಕರು ಅದರ ಜೊತೆಯಲ್ಲಿದ್ದರು. ಪೋಲೀಸ್ ಸ್ಟೇಷನ್‌ನಲ್ಲಿ ಜನ ಬಂದು ಮುತ್ತಿಗೆ ಹಾಕಿದಾಗ ಹನುಮಂತರಾಯಪ್ಪ ಬಂದು ವಿನಂತಿ ಮಾಡಿಕೊಂಡು ಅವರು ಚದುರುವಂತೆ ವಿನಂತಿ ಮಾಡಿಕೊಂಡರು. ಆದರೆ ರಾಜಕೀಯ ದ್ವೇಷ ತೀರಿಸಿಕೊಳ್ಳುವುದಕೋಸ್ಕರ ಸನಾನ್ಯ ಜಾಲಪ್ಪನವರು, ನಾನು ಜವಾಬ್ದಾರಿಯಿಂದ ಹೇಳುತ್ತಿದ್ದೇನೆ ಅವರು ಬಂದ ಮೇಲೆ ಯಾವುದೋ ರಾಜಕೀಯ ಸೇಡಿಗೋಸ್ಕರ 8 ದಿನಗಳ ನಂತರ ಎಫ್.ಐ.ಆರ್‌ನಲ್ಲಿ ಎಂಟ್ರಿ ಇಲ್ಲ ರಕ್ಷಣೆ ಕೊಟ್ಟ ಅಧಿಕಾರಿ ಫೋನ್ ಮಾಡಿ ಹೇಳುತ್ತಾರೆ ನಿಮ್ಮಿಂದ ನಾವು ಬದುಕಿಕೊಂಡೆವು ಎಂದು ಅಂತಹವರನ್ನು ನೀವು ಇವತ್ತು ಸೆಂಟ್ರಲ್ ಜೈಲಿನಲ್ಲಿ ಇರಿಸಿದ್ದೀರಿ. ಇರುತ್ತೇವೆ ನಾವು ಬದುಕಿರುವವರೆಗೂ ನಿಮ್ಮ ವಿರುದ್ಧ ಹೋರಾಟ ಮಾಡುವುದಕ್ಕೆ ಜನರಿಗೆ ಒಳ್ಳೆಯದು ಆಗುವುದಾದರೆ ನಾವು ಜೈಲಿನಲ್ಲಿರುವುದಕ್ಕೆ ಸಿದ್ಧರಿದ್ದೇವೆ. ಇದು ನಿಮಗೆ ಶೋಭೆ ತರುತ್ತದೆಯೇ?

ಇದು ನಿಮಗೆ ಗೌರವ ತರುತ್ತದೆಯೇ? ಅಧಿಕಾರ ಇದೆಯೆಂದು ಮನ ಬಂದಂತೆ ಮಾಡುವುದು ಸರಿಯೇ? ಅವರು ಬೇಲ್ ಪಡೆಯುವುದಕ್ಕೆ ಆಗದ ರೀತಿಯಲ್ಲಿ ಪೋಲೀಸ್ ಅಧಿಕಾರಿಗಳಿಗೆ ಹೇಳಿ ಪಬ್ಲಿಕ್ ಪ್ರಾಸಿಕ್ಯೂಟರ್ ಅಲ್ಲಿಗೆ ಹೋಗದೆ ನಮ್ಮ ಪಕ್ಷದ ಸ್ಟೇಟ್ ಸೆಕ್ರೆಟರಿಯಾದ ಹನುಮಂತರಾಯಪ್ಪ ಮತ್ತು ಇತರೆ ಪ್ರಮುಖರು ಇವತ್ತು ಜೈಲಿನಲ್ಲಿ ಕೊಳೆಯುತ್ತಿದ್ದಾರೆ. ಹುಬ್ಬಳ್ಳಿಗೆ ಪ್ರಧಾನ ಮಂತ್ರಿಗಳು ಬರುವ ಹಿಂದಿನ ದಿನ ನಮ್ಮ ಪಕ್ಷದ ಕಾರ್ಯಕರ್ತರುಗಳು ಗೋಡೆ ಬರಹ ಬರೆಯುತ್ತಿದ್ದಂಥ ಸಂದರ್ಭದಲ್ಲ ಹರಿಜನ ಗಿರಿಜನ ಪಂಗಡಕ್ಕೆ ಸೇರಿರುವ ಆ ನಮ್ಮ ಕಾರ್ಯಕರ್ತರುಗಳನ್ನು ಬಂಧಿಸಿ ಕೇಸ್ ಹಾಕಲಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಶಾಂತ ರೀತಿಯಲ್ಲಿ ಬಂದ್ ಮಾಡಲಿಕ್ಕೆ, ಪ್ರತಿಭಟನೆ ಮಾಡಲಿಕ್ಕೆ, ಗೋಡೆ ಬರಹ ಬರೆಯುವುದಕ್ಕೆ ನಮಗೆ ಅಧಿಕಾರ ಇಲ್ಲವೇನು? ಈ ವಿಷಯಕ್ಕೆ ಸಂಬಂಧಪಟ್ಟಂತೆ ಬಂಧಿಸಿದವರನ್ನು

ಬಿಡಿಸಲು ಹೋದ ನಮ್ಮ ಪಕ್ಷದ ಎಂ.ಎಲ್.ಎ.ಗಳು ಮತ್ತು ಎಂ.ಪಿ. ಅವರನ್ನು ಬಂಧಿಸಿ ಜೈಲಿಗೆ ಹಾಕಲಾಗಿದೆ. ಹುಬ್ಬಳ್ಳಿಯಲ್ಲಿ ರೈಲ್ವೇ ವಲಯ ಆಗಬೇಕೆಂದು ಈಗಿನ ಪ್ರಧಾನ ಮಂತ್ರಿಗಳು ಈ ಹಿಂದೆ ಮುಖ್ಯ ಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ಹಿಂದಿನ ಪ್ರಧಾನಿಯವರಿಗೆ ಅವರೇ ಪತ್ರ ಬರೆದಿದ್ದರಲ್ಲಾ? ಇದರ ಜೊತೆಗೆ ರಾಜ್ಯದ 27 ಜನ ಲೋಕ ಸಭಾ ಸದಸ್ಯರುಗಳೂ ಅಲ್ಲೇ ರೈಲ್ವೇ ವಲಯ ಆಗಬೇಕೆಂದು ಪತ್ರ ಬರೆದಿದ್ದರಲ್ಲಾ. ಉತ್ತರ ಕರ್ನಾಟಕಕ್ಕೆ ಅನ್ಯಾಯವಾಗುತ್ತಿದೆಯೆಂದು ಅಲ್ಲಿನ ಜನರು ತಿರುಗಿ ಬಿದ್ದು, ಪ್ರಧಾನಿಯವರು, ಪ್ರಧಾನಿಯಾದ ಮೇಲೆ ಮೊದಲ ಬಾರಿಗೆ ಅವರದೇ ರಾಜ್ಯಕ್ಕೆ ಬಂದಾಗ ಹುಬ್ಬಳ್ಳಿಯಲ್ಲಿ ಧಾರುಣ ಬಂದ್ ಆಗುವಂಥ ವಾತಾವರಣ ಉಂಟಾಯಿತು. ಇದರ ಬಗ್ಗೆ ಮುಖ್ಯಮಂತ್ರಿಗಳು ಮುಂಚೆ ಹೋಗಿ ಆ ಜನಕ್ಕೆ ಕನ್ವಿನ್ಸ್ ಮಾಡಿ, ಒಪ್ಪಿಸಿ......

(ಗೊಂದಲ)

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ರೈಲ್ವೇ ವಲಯ ಬೇಕೆಂದು ಅವರು ಕೇಳಲಿ. ಆದರೆ, ಬಸ್‌ಗಳಿಗೆ ಬೆಂಕಿ ಏಕೆ ಹಚ್ಚಬೇಕು? ಬ್ಯಾನರ್‌ಗಳನ್ನು ಏಕೆ ಕಿತ್ತು ಒಯ್ಯಬೇಕು?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಸಚಿವರಿಗೆ ಏಕೆ ಇಷ್ಟು ಸಿಟ್ಟು ಬಂದು ಕಳವಳವಾಯಿತೆಂದರೆ, ಹುಬ್ಬಳ್ಳಿಯಲ್ಲಿ 25 ಸಾವಿರ ಜನ ಸೇರಿದ್ದರೂ, ಯಡಿಯೂರಪ್ಪನವರು ಅಲ್ಲಿ ಬಂದ್ ಆಯಿತೆಂದು ಹೇಳುತ್ತಾರಲ್ಲಾ ಎಂದು ಮಾನ್ಯ ಮಂತ್ರಿಯವರು ಕೇಳಿರುವುದರಲ್ಲಿ ನಿಜ ಇದೆ. ಬೆಳಿಗ್ಗೆ 10 ಗಂಟೆಗೆ ಕಾರ್ಯಕ್ರಮ ಆರಂಭವಾಗಬೇಕಾಗಿತ್ತು, ಆದರೆ, ಅಲ್ಲಿ ಆಗ 10 ಜನರೂ ಇರಲಿಲ್ಲ. ಪೋಲೀಸ್ ಅಧಿಕಾರಿಗಳು, ಆರ್.ಟಿ.ಓ. ಅಧಿಕಾರಿಗಳು, ಇತರೇ ಸರ್ಕಾರಿ ಅಧಿಕಾರಿಗಳು ಸೇರಿ ಎಲ್ಲೆಲ್ಲಿಂದಲೋ ಲಾರಿಗಳಲ್ಲಿ ಬಾಡಿಗೆ ಜನರನ್ನು ಕರೆದುಕೊಂಡು ಬಂದು ಸಾಲಾಗಿ ನಿಲ್ಲಿಸಿದ್ದರು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೆ, ನಮಗೆ ಏನೆಂದರೆ, ಈ ಸರ್ಕಾರ ತೊಲಗಿ ಹೋಗಬೇಕು, ಅದಕ್ಕಾಗಿ ಅವಿಶ್ವಾಸ ನಿರ್ಣಯ ತಂದಿದ್ದೇವೆ, ಅದರಲ್ಲಿ ಯಶಸ್ವಿಯಾಗುತ್ತೇವೆಂದು ನನಗೆ ವಿಶ್ವಾಸ ಇದೆ. ಈಗ ನನಗೆ ಏನು ದುಃಖ ಎಂದರೆ,

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಸದಸ್ಯರುಗಳಿಗೆ ಆತ್ಮ ಸಾಕ್ಷಿ ಎಂಬುದು ಇಲ್ಲವೇ? ಅವರ ಪಕ್ಷದ ಮಾಜಿ ಮುಖ್ಯ ಮಂತ್ರಿಗಳೊಬ್ಬರಿಗೆ ಮಾಡಬಾರದ್ದನ್ನೆಲ್ಲಾ ಮಾಡಿದರೆ ಅವರು ಸಹಿಸಿಕೊಳ್ಳುತ್ತಾರೆಯೇ?

(ಗೊಂದಲ)

ಶ್ರೀ ಹೆಚ್.ಎನ್. ನಂಜೇಗೌಡ : ಮಾನ್ಯ ಉಪಾಧ್ಯಕ್ಷರೆ, ಈ ವಿಷಯದ ಬಗ್ಗೆ ಪ್ರತಿರೋಧ, ವಾದ ವಿವಾದ ಬಹಳ ಬಿರುಸಾಗಿ ನಡೆಯುತ್ತಿದೆ. ಎಲ್ಲಾ

ಸದಸ್ಯರುಗಳು ಪ್ರಮಾಣಪೂರ್ವಕವಾಗಿ ಮತ್ತು ಆತ್ಮ ಸಾಕ್ಷಿಯಾಗಿ ವೋಟು ಕೊಡುವುದಾದರೆ ಚರ್ಚೆಯನ್ನು ಇಲ್ಲಿಗೇ ನಿಲ್ಲಿಸೋಣವೆಂದು ನಮ್ಮ ಕಡೆಯ ಸದಸ್ಯರುಗಳಿಗೆ ನಾನು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಸಿ. ಭೈರೇಗೌಡ : ಮಾನ್ಯ ಉಪಾಧ್ಯಕ್ಷರೆ, ಆತ್ಮಸಾಕ್ಷಿ ವಿಚಾರ ಮೊದಲು ಮಾನ್ಯ ನಂಜೇಗೌಡರಿಂದ ಪ್ರಾರಂಭವಾದರೆ ನಾವು ಒಪ್ಪಿಕೊಳ್ಳುತ್ತೇವೆ.

ಶ್ರೀ ಹೆಚ್.ಎನ್. ನಂಜೇಗೌಡ : ನನ್ನ ಆತ್ಮಸಾಕ್ಷಿಯನ್ನು ಯಾರೂ ಪರೀಕ್ಷೆ ಮಾಡುವುದಕ್ಕಾಗುವುದಿಲ್ಲ. ನನ್ನ ಆತ್ಮ ಸಾಕ್ಷಿಗೋಸ್ಕರ ಈ ದೇಶದ ಪ್ರಧಾನಿಯವರನ್ನೂ ವಿರೋಧ ಮಾಡಿದ್ದೇನೆ. ಅದಕ್ಕಾಗಿ ನಾನು ಯಾರ ಕೈಯಿಂದ ಪಾಠ ಹೇಳಿಸಿಕೊಳ್ಳಬೇಕಾಗಿಲ್ಲ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಉಪಾಧ್ಯಕ್ಷರೆ, ವಿರೋಧ ಪಕ್ಷದಲ್ಲಿರತಕ್ಕಂಥ ಮಾನ್ಯ ಹಿರಿಯ ಸದಸ್ಯರು ಒಳ್ಳೆಯ ಸಲಹೆ ಕೊಟ್ಟಿದ್ದಾರೆ. ಚರ್ಚೆ ಇಲ್ಲಿಗೇ ನಿಲ್ಲಿಸಿ ವೋಟ್‌ಗೆ ಹಾಕಬೇಕೆಂದು ಬಹಳ ಉತ್ತಮ ಮತ್ತು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಅದರಿಂದ ಬಹಳಷ್ಟು ಪ್ರಯೋಜನವಾಗುತ್ತದೆ. ರಾಜ್ಯದ ಹಣ ಉಳಿಯುತ್ತದೆ, ನಮಗೂ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ. ಆದುದರಿಂದ ದಯವಿಟ್ಟು ಇದನ್ನು ಈಗಲೇ ವೋಟ್‌ಗೆ ಹಾಕುವುದು ಒಳ್ಳೆಯದು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ನಂಜೇಗೌಡರು ಕೇಳಿದಂಥ ಮಾತನ್ನು ಅವರಲ್ಲಿ ಬಹಳ ಜನ ಸದಸ್ಯರುಗಳು ಅರ್ಥ ಮಾಡಿಕೊಂಡಿಲ್ಲ. ಆತ್ಮ ಸಾಕ್ಷಿ ಇದ್ದರೆ, ನಿಮ್ಮಲ್ಲಿ ಯಾರಿಗಾದರೂ ಆತ್ಮ ಇದ್ದರೆ. ವೋಟ್ ಹಾಕಿ ಎಂದು ಹೇಳಿದ್ದಾರೆ. ನಿಮಗೆ ದೇವರ ಬಗ್ಗೆ ನಂಬಿಕೆ ಇದ್ದರೆ, ತಂದೆ ತಾಯಿಗಳ ಬಗ್ಗೆ ನಂಬಿಕೆ ಇದ್ದರೆ, ಮನೆತನದ ಬಗ್ಗೆ ನಂಬಿಕೆ ಇದ್ದರೆ, ಇವತ್ತು ನಮಗೆ ಆತ್ಮ ಸಾಕ್ಷಿ ಇರುವುದರಿಂದ ಆದರ ಪ್ರಕಾರ ವೋಟು ಮಾಡುತ್ತೇವೆಂದು ಹೇಳಿದರೆ ನಾವು ಒಪ್ಪುತ್ತೇವೆ. ಆತ್ಮ ಸಾಕ್ಷಿ ಪ್ರಕಾರ ವೋಟು ಮಾಡುವುದಾದರೆ 50ಕ್ಕಿಂತ ಹೆಚ್ಚು ಸದಸ್ಯರುಗಳು ಹೊರಗಡೆ ಹೋಗುತ್ತಾರೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಹಿರಿಯ ಸದಸ್ಯರಾಗಿರುವ ನಂಜೇಗೌಡರು ಬಹಳ ಒಳ್ಳೆಯ ಮಾತನ್ನು ಹೇಳಿದ್ದಾರೆ. ಅವರ ನಾಯಕರು ಸುಮ್ಮನೆ ಸರ್ಕಾರದ ವಿರುದ್ಧ ಇಲ್ಲ ಸಲ್ಲದ ಆರೋಪಗಳನ್ನು ಮಾಡುತ್ತಿರುವುದನ್ನು ನೋಡಿ ಅವರು ಹಾಗೆ ಹೇಳಿದ್ದಾರೆ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್‌ರವರು, ನಮಗೆ ಆತ್ಮ ಸಾಕ್ಷಿ ಇದ್ದರೆ, ದೇವರ ಮೇಲೆ ನಂಬಿಕೆ ಇದ್ದರೆ ಎಂದು ಹೇಳಿದ್ದಾರೆ. ಅವುಗಳು ಎಲ್ಲಾ ಇದೆಯೆಂದು ತಿಳಿದುಕೊಂಡು ನಾವು ವೋಟು ಹಾಕುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಇಂಥಾ ಸಂದರ್ಭಗಳಲ್ಲಿ ಅನೇಕ ಪದಗಳನ್ನು ಉಪಯೋಗಿಸಬೇಕಾಗುತ್ತದೆ. ಅದರಲ್ಲಿ 'ಬಡತನ' ಎನ್ನುವುದೂ ಇದೆ. ಆದ್ದರಿಂದ ಆತ್ಮ -ಸಾಕ್ಷಿ ಎಲ್ಲವನ್ನೂ ಬಿಟ್ಟು ನಾವು ಇದಕ್ಕೇ ತಯಾರಾಗಿದ್ದೇವೆ ಎನ್ನತಕ್ಕಂಥ ಜನರೂ ಇದ್ದಾರೆ. ಆದ್ದರಿಂದ ನಾನು ಮಾನ್ಯ ನಾಗೇಗೌಡರನ್ನು ಕುರಿತು ಮಾತನಾಡುತ್ತಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಆತ್ಮ ಸಾಕ್ಷಿ ಇರುವಂಥವರು ಕೆಲವರು ಇಲ್ಲಿ ಇರಬಹುದು. ನಾನು ಒಂದು ಸಲಹೆ ಮಾಡುತ್ತೇನೆ, ನನ್ನ ಭಾಷಣ ಮುಗಿದ ಮೇಲೆ ಇದರ ಬಗ್ಗೆ ಸೀಕ್ರೇಟ್ ಬ್ಯಾಲೆಟ್‌ಗೆ ಅವರು ಒಪ್ಪಿಕೊಳ್ಳಲಿ, ಆಗ ಸರ್ಕಾರ ಉಳಿಯುತ್ತದೆಯೋ ನೋಡೋಣ. ಇದಕ್ಕೆ ಸರ್ಕಾರ ರೆಡಿ ಇದೆಯೇ?

ಶ್ರೀ ಕೆ.ಎನ್. ನಾಗೇಗೌಡ : ಅದಕ್ಕೆ ನಾವು ರೆಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮುಖ್ಯಮಂತ್ರಿಗಳು ಇದಕ್ಕೆ ಒಪ್ಪಿಕೊಳ್ಳುತ್ತಾರೆಯೇ?

12.00 ನೂನ್

ಶ್ರೀ ಸಿದ್ಧರಾಮಯ್ಯ : ಮಾನ್ಯ ಉಪಾಧ್ಯಕ್ಷರೇ, ಅವರು ಹೇಳುವುದನ್ನೆಲ್ಲಾ ಹೇಳಲಿ. ಅವರಿಗೆ ಏನಾಗಿದೆ ಅಂದರೆ, ಅವರು ದೊಡ್ಡಬೆಟ್ಟವನ್ನು ಅಗೆಯುವುದಕ್ಕೆ ಹೋದರು ಅಲ್ಲಿ ಅವರಿಗೆ ಏನೂ ಸಿಗುತ್ತಾ ಇಲ್ಲ, ಇಲಿಯೂ ಸಿಗಲಿಲ್ಲ, ಹೇಳಲು ವಿಷಯಗಳೂ ಕೂಡ ಯಾವುದೂ ಇಲ್ಲ. ಆರೋಪ ಮಾಡಲು ಯಾವುದೂ ಇಲ್ಲವಾದ ಕಾರಣ ಈ ರೀತಿಯಾಗಿ ಹೋಗುತ್ತಾ ಇದ್ದಾರೆ. ಅದನ್ನು ನಂಜೇಗೌಡರ ಹತ್ತಿರ ಹೇಳಿಸಿದ್ದಾರೆ. ಈಗ ನಿಲ್ಲಿಸಿ ಬಿಡೋಣ ಓಟು ಹಾಕಿಸಿನೋಡೋಣ ಎಂದು ಹೇಳಿಸಿದ್ದಾರೆ. ಈಗ ಇವರು ಅವಿಶ್ವಾಸನಿರ್ಣಯ ತಂದು ನಾಡಿನ ಜನರ ಮುಂದೆ ನಾಗೆಪಾಟಲಿಗೆ ಈಡಾಗಿ ಬಿಟ್ಟಿದ್ದಾರೆ. ಅದಕ್ಕೋಸ್ಕರವಾಗಿ ಇದನ್ನೆಲ್ಲಾ ಹೇಳಲು ಪ್ರಾರಂಭ ಮಾಡಿದ್ದಾರೆ. ಆದ್ದರಿಂದ ನಾವು ಅವರು ಹೇಳುವುದನ್ನೆಲ್ಲಾ ಕೇಳಲು ತಯಾರಾಗಿದ್ದು ಅದಕ್ಕೆ ಸರಕಾರವು ಉತ್ತರ ಕೊಡಲು ತಯಾರಾಗಿದೆ. ನಾವು ಯಾವುದೇ ರೀತಿಯ ಓಟನ್ನು ಮಾಡಲು ಕೂಡ ತಯಾರಾಗಿದ್ದೇವೆ.

ಶ್ರೀ ಡಿ.ವಿ. ಸದಾನಂದಗೌಡ : ಸೀಕ್ರೆಟ್ ಓಟಿಂಗ್ ಮಾಡುತ್ತೀರಾ?

ಶ್ರೀ ಸಿದ್ಧರಾಮಯ್ಯ : ನೋ ಸೀಕ್ರೆಟ್ ಈಗ ಅವರು ಅವಿಶ್ವಾಸ ನಿರ್ಣಯದ ಮೇಲೆ ಮಾತನಾಡ ಬೇಕು. ಈ ರಾಜ್ಯದ ಜನತೆಗೆ ಅವರು ಯಾವುದೇ ತಪ್ಪು ಇದ್ದರೂ ತಿಳಿಸಿ ಹೇಳಬೇಕು......

(ಗೊಂದಲ)

ಮಾನ್ಯ ಸಭಾಪತಿಯವರೇ, ನಾವು ಯಾವುದೇ ತರಹದ ಓಟಿಂಗ್‌ಗೆ ತಯಾರಾಗಿದ್ದೇವೆ. ಆದರೆ ನಮಗೆ ಏನಾಗಿದೆ ಅಂದರೆ ವಿಷಯವನ್ನು ರಾಜ್ಯದ ಜನತೆಗೆ ತಿಳಿಸಬೇಕಾಗಿದೆ. ಇವರು ಈ ತರಹ ಅವಿಶ್ವಾಸ ನಿರ್ಣಯವನ್ನು ತೆಗೆದುಕೊಂಡು ಬಂದು ಅದಕ್ಕೆ ಯಾವುದೇ ಬುಡತಳ ಏನೂ ಇಲ್ಲದೆ ಸರಕಾರದ ಮೇಲೆ ಸುಮ್ಮನೆ ಸುಳ್ಳು ಆರೋಪಗಳನ್ನು ಮಾಡಿ ಈಗ ಅವರು ನಗೆಪಾಟಲಿಗೆ ಈಡಾಗುತ್ತಿದ್ದಾರೆ. ಅದನ್ನು ಮುಚ್ಚಿಕೊಳ್ಳಲು ಈಗ ಹೊರಟಿದ್ದಾರೆ. ಅದನ್ನು ನಾವು ಜನರಿಗೆ ಹೇಳಬೇಕಾಗುತ್ತದೆ. ಅದಕ್ಕೋಸ್ಕರ ಯಾವ ತರಹದ ಓಟಿಂಗ್ ಇದ್ದರೂ ಅದು ನಡೆಯಲಿ. ನಾವು ಸರಕಾರದಿಂದ ಉತ್ತರವನ್ನು ಕೊಡುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಈ ಮಾತನ್ನು ಹೇಳಬೇಕೆಂದು ನನ್ನಲ್ಲಿನ ಯಾವುದೇ ಫೈಲ್‌ನ್ನು ಇನ್ನೂ ಬಿಚ್ಚಿಲ್ಲ. ಈಗಾಗಲೇ ಒಂದು ರೀತಿಯಲ್ಲಿ ನಮ್ಮ ಅವಿಶ್ವಾಸನಿರ್ಣಯ ಅಂಗೀಕಾರವಾಗಿದೆ ಎಂಬ ರೀತಿಯಲ್ಲಿ ಆಯಿತು. ಅಂಗೀಕಾರವಲ್ಲ, ನಾವು ಗೆದ್ದಿದ್ದೇವೆ. ಅವರು ಸೋತಿದ್ದಾರೆ ಎನ್ನುವುದು ಆಗುತ್ತದೆ. ಯಾಕೆಂದರೆ ಇವೊತ್ತು ಮುಖ್ಯಮಂತ್ರಿಯವರು ಆತ್ಮಸಾಕ್ಷಿಗೆ ಅನುಗುಣವಾಗಿ ಸೀಕ್ರೆಟ್

ಬ್ಯಾಲೆಟ್‌ಗೆ ನಾಗೇಗೌಡರು ಒಪ್ಪುತ್ತಾರೆ, ಆದರೆ ನಮ್ಮ ಉಪಮುಖ್ಯಮಂತ್ರಿಯವರು ಒಪ್ಪುತ್ತಾ ಇಲ್ಲ. ಮುಖ್ಯಮಂತ್ರಿಯವರು ಮಾತನಾಡದೇ ಕುಳಿತಿದ್ದಾರೆ. ಅವರಿಗೆ ಗೊತ್ತು, ಅದಕ್ಕೆ ನಾನು ಒಪ್ಪಿಕೊಂಡರೆ ನಮ್ಮವರು ಅನೇಕ ಜನರು ಕೈಕೊಡುತ್ತಾರೆ ....

(ಗೊಂದಲ)

ಶ್ರೀ ಜೆ.ಹೆಚ್. ಪಟೇಲ್ : ಇದು ಅವಿಶ್ವಾಸನಿರ್ಣಯದ ತರಹವೇ ಇಲ್ಲ, ಅವರಿಗೇ ಇನ್ನೂ ಇದು ಅವಿಶ್ವಾಸನಿರ್ಣಯ ಹೇಗೆ ಎಂದು ಅರ್ಥವಾಗುತ್ತಾ ಇಲ್ಲವಾದ ಕಾರಣ ನಂಜೇಗೌಡರು ಬೇಗನೆ ಇದನ್ನು ಓಟಿಗೆ ಹಾಕೋಣ ಎಂದು ಹೇಳಿದರು. ಅವರೂ ಕೂಡ ಯಾರಿಗೆ ಓಟು ಕೊಡುತ್ತಾರೆಂಬುದು ನನಗೆ ಗೊತ್ತು. ಮಾನ್ಯ ವಾಟಾಳ್‌ನಾಗರಾಜ್‌ರವರು ಕೂಡ ಅಷ್ಟೇ. ಯಾರಿಗೆ ಕೊಡುತ್ತಾರೆ ಎಂಬುದು ಗೊತ್ತು. The purpose of this debate ಏನು? ನಮ್ಮದ್ದು ತಪ್ಪು ಇದ್ದರೆ ನಾವು ಒಪ್ಪಿಕೊಳ್ಳುತ್ತೇವೆ. ಇಂಥ ಇಷ್ಯೂಸ್ ಮೇಲೆ ಹೀಗೆ ಆಯಿತು, ಅದು ಕಾನೂನಿಗೆ ವಿರುದ್ಧವೋ, ಸಂಪ್ರದಾಯಕ್ಕೆ ವಿರುದ್ಧವೋ, ಪಾರ್ಲಿಮೆಂಟರಿ ಪ್ರ್ಯಾಕ್ಟೀಸಗೆ ವಿರುದ್ಧವೋ ಎಂದು ಹೇಳಿ, ಅದಕ್ಕೆ ನಾವು ಉತ್ತರ ಕೊಡುತ್ತೇವೆ. ನಾನು ಉತ್ತರ ಕೊಟ್ಟಮೇಲೆ ನೀವು ಯಾವ ರೀತಿಯಲ್ಲಿ ಕೇಳುತ್ತೀರೋ ಆ ರೀತಿಯಲ್ಲಿ ಓಟಿಗೆ ಹಾಕೋಣ. ಆದ್ದರಿಂದ ನೀವು ಇಷ್ಯೂಸ್‌ನ್ನು ಪ್ರಸ್ತಾಪ ಮಾಡಿ

ಶ್ರೀ ಕೆ.ಎನ್. ನಾಗೇಗೌಡ : ಹೀಗೆಯೇ ಅವರು ವಾಜಪೇಯಿಯವರಿಗೆ ಸೀಕ್ರೇಟ್ ಬ್ಯಾಲೆಟ್ ಎಂದು ಹೇಳಿ, ಒಳಗಡೆ ಸೀಕ್ರೆಟ್ ಓಟ್ ಇವೆ, ನೀವು ಪ್ರಧಾನಿಯವರಾಗಿ ಎಂದು ಹೇಳಿ ಅವರನ್ನು ಏಳೇ ದಿವಸಕ್ಕೆ ಅವರು ಓಡಿ ಹೋಗುವ ಹಾಗೆ ಮಾಡಿದರು. ಇದೇ ಸ್ಟ್ರಾಟಿಜಿ ಮಾಡಿ ಅವರು ಡೆಲ್ಲಿಯಲ್ಲಿ ಹೋದರು.

ಶ್ರೀ ಬಿ.ಎಸ್. ಯಡಿಯೂರಪ್ಪ : ಬಹುಶಃ ನಾನು ಕೆಲವು ಕಟ್ಟುಗಳನ್ನು ಬಿಚ್ಚಿ ಹೇಳಿದರೆ ಸತ್ಯಸಂಗತಿಗಳನ್ನು ಹೇಳಿದರೆ ನೀವು ಮಧ್ಯಾಹ್ನ ಊಟ ಮಾಡಲು ಆಗುವುದಿಲ್ಲ.

(ನಗು)

ನೀವು ಸಂಕಟಪಡಬೇಕಾಗುತ್ತದೆ. ಹಾಗಾಗಿ ಊಟ ಆದಮೇಲೆ ಹೇಳೋಣವೆಂದಿದ್ದೆ. ತಮ್ಮ ವಿಧಾನಸಭೆ ಚುನಾವಣೆ-1994ರಲ್ಲಿನ ಪ್ರಣಾಳಿಕೆಯಲ್ಲಿ ತಾವು ಪೇಜ್ 5ರಲ್ಲಿ ರೋಗಗ್ರಸ್ತ ಕಾಂಗ್ರೆ ಸರಕಾರ ಎಂದು ಬರೆದಿದ್ದೀರಿ. ಅದರಲ್ಲಿ ಹೀಗೆ ಬರೆದಿದ್ದೀರಿ. 1989ರಿಂದ ಈಚೆಗೆ ಆಡಳಿತ ನಡೆಸಿದ ಕಾಂಗ್ರೆ ಸರಕಾರಕ್ಕೆ ಎರಡು ರೋಗ. ಒಂದು ಆಶ್ವಾಸನೆಗಳ ಅತಿಸಾರ ಇನ್ನೊಂದು ಕಾರ್ಯಸಾಧನೆಯ ಮಲಬದ್ಧತೆ. ಖಾಲಿ ಪಾತ್ರೆಗಳ ಹೆಚ್ಚು ಸಪ್ಪಳ. ಲಕ್ಷ ಅಂದರೆ ಇವರಿಗೆ ನಿರ್ಲಕ್ಷ. ಕೋಟಿಗಟ್ಟಲೆಯಲ್ಲಿಯೇ ಇವರ ಮಾತು ವ್ಯವಹಾರ. ಭ್ರಷ್ಟಾಚಾರ ಮತ್ತು ರಾಜಕೀಯ ವ್ಯಾಪಾರೀಕರಣದ ಬೊಗಳೇ ಜಾಸ್ತಿ." ಇವೆಲ್ಲವೂ ಸಹ ಅವೊತ್ತು ಅವರಿಗೆ ಏನು ಅನ್ವಯವಾಗುತ್ತದೆಂದು ಹೇಳಿದ್ದೀರಿ, ಅದೇ ಸಂಪೂರ್ಣವಾಗಿ ಇವೊತ್ತು ನಿಮಗೆ ಅನ್ವಯವಾಗುತ್ತವೆ. ಈ ಮಾತನ್ನು ಹೇಳಿದವರು ಯಾರು? ಈ ಕಾಡುಗಳ್ಳರಿಗೆ, ನೆಲಗಳ್ಳರಿಗೆ, ಗ್ರಾನೈಟ್ ಲೂಟಿ ಮಾಡುವಂಥವರಿಗೆ ರಕ್ಷಣೆ ಕೊಡುತ್ತಿರುವಂಥವರು ಯಾರು? ಅನೇಕ ಆಶ್ವಾಸನೆಗಳನ್ನು ತಾವು ಕೊಟ್ಟಿದ್ದೀರಿ. ಸೆಪ್ಟೆಂಬರ್ 20, 1995 - ಅಂದಿನ ಮುಖ್ಯಮಂತ್ರಿಗಳು ಸದನದಲ್ಲಿ ಗ್ರಾಮೀಣ ಹಾಗೂ ನಗರಪ್ರದೇಶದ ಹಮಾಲಿ, ದೇವದಾಸಿ, ಸರಕಾರ 4ನೇ ದರ್ಜೆ ನೌಕರರನ್ನು ಸೇರಿದಂತೆ ವಿವಿಧ ವರ್ಗಗಳಿಗೆ 483 ಕೋಟಿ ರೂ.ಗಳ

ವಸತಿ ಯೋಜನೆ. ಇದು ಏನಾಯಿತು? ಗ್ರಾಮಕ್ಕೊಂದು ಶಾಲೆ....... ಒಂದೂವರೆ ವರ್ಷವಾಯಿತು ಏನು ಮಾಡಿದ್ದೀರಿ? ಆಟೋರಿಕ್ಷಾ ಖಾಸಗಿ ವಾಹನಚಾಲಕರಿಗೆ ವಿಮೆ. ಅಂಗವಿಕಲರಿಗೆ ತ್ರಿಚಕ್ರವಾಹನ, ಇದನ್ನು ಎಷ್ಟು ಜನಕ್ಕೆ ಕೊಟ್ಟಿದ್ದೀರಿ? ನಾಲ್ಕು ಜನರಿಗೆ? ಜಿಲ್ಲೆಗೆ ಒಬ್ಬಿಬ್ಬರಿಗೋ? ಕಿವುಡರಿಗೆ ಉಚಿತ ಶ್ರವಣಸಾಧನ. ಕಾನೂನು ಪಧವೀಧರರಿಗೆ ಆರ್ಥಿಕ ನೆರವು. ಗುಂಪುವಸತಿಯಡಿಯಲ್ಲಿ ಮೈಸೂರು, ಹುಬ್ಬಳ್ಳಿ, ಧಾರವಾಡ ಮತ್ತು ಕಂದಾಯ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಮನೆಗಳನ್ನು ಕಟ್ಟಿಸಿಕೊಡುವವರೆಗೆ ಹಕ್ಕುಪತ್ರಗಳನ್ನು ಯುದ್ಧೋಪಾಡಿಯಲ್ಲಿ ಈ ವರ್ಷವೇ ಮಾಡಲು ನಿರ್ಧರಿಸಲಾಗಿದೆ.

ಅರಣ್ಯ ಭೂಮಿಯಲ್ಲಿನ ಸಾಗುವಳಿಯನ್ನು ಸಕ್ರಮಗೊಳಿಸಲು ಕೇಂದ್ರ ಸರಕಾರದ ಮಂಜೂರಾತಿ ಪಡೆಯುವಲ್ಲಿ ರಾಜ್ಯ ಸರಕಾರವು ಯಶಸ್ಸನ್ನು ಸಾಧಿಸಿದೆ. 30 ಸಾವಿರ ಎಕರೆಯು ಈ ಸಕ್ರಮವ್ಯಾಪ್ತಿಯಲ್ಲಿ ಬರಲಿದ್ದು ಪಟ್ಟಾ ಕೊಡಲಾಗುವುದು. ಲಂಬಾಣಿ, ಬೋವಿ, ತಾಂಡಾಗಳನ್ನು ಗೊಲ್ಲರ ಹಟ್ಟಿಗಳನ್ನು ಸಕ್ರಮಗೊಳಿಸಿ ಆಯಾಯ ಸ್ಥಳಗಳಲ್ಲಿ ಸೌಲಭ್ಯಗಳನ್ನು ಕೊಡುವುದಕ್ಕೆ ಕಂದಾಯ ಸಚಿವರು ಕ್ರಮವನ್ನು ತೆಗೆದುಕೊಳ್ಳುವರು. ರಾಜ್ಯದ ಉದ್ಯೋಗವಿನಿಮಯ ಕೇಂದ್ರಗಳಲ್ಲಿ ಹೆಸರು ನೊಂದಾಯಿಸಿಕೊಂಡಿರುವ 130 ಲಕ್ಷ ವಿದ್ಯಾವಂತ ನಿರುದ್ಯೋಗಿಗಳಿದ್ದು ಮಾರ್ಚ್ 31ಕ್ಕೆ ಮುನ್ನಾ 50 ಸಾವಿರ ಮಂದಿಗೆ ಉದ್ಯೋಗವನ್ನು ಒದಗಿಸಲಾಗುವುದು ಎಂದೆಲ್ಲಾ ಹೇಳಿದ್ದೀರಿ. ಯಾರಿಗೆ ಉದ್ಯೋಗವನ್ನು ಕೊಟ್ಟಿದ್ದೀರಿ? ಖಾಲಿ ಇರುವ ಒಂದು ಲಕ್ಷ ಸರಕಾರಿ ಉದ್ಯೋಗಗಳನ್ನು ಒಂದೇ ವರ್ಷದಲ್ಲಿ ತುಂಬಿ ಗ್ರಾಮೀಣ ನಿರುದ್ಯೋಗಿಗಳಿಗೆ ಶೇಕಡ 70ರಷ್ಟು ಮಿಸಲಾತಿ ಎಂದು ಹೇಳಿದ್ದು ಏನಾಯಿತು? ಈ ವರ್ಷದಲ್ಲಿ ಲಕ್ಷ ಹುದ್ದೆಗಳನ್ನು ತುಂಬುವ ಕಾರಣಕ್ಕೆ ನಿಮ್ಮ ಪ್ರಣಾಳಿಕೆಯಲ್ಲಿ ನವೆಂಬರ್ 25ರ 1995ರಲ್ಲಿ ಹೊರಡಿಸಿದ್ದೀರಿ. ಜಾಹೀರಾತುಗಳಲ್ಲಿ ಒಂದು ಕಡೆ ಹೆಗಡೆಯವರು, ಇನ್ನೊಂದು ಕಡೆ ಬೊಮ್ಮಾಯಿಯವರು, ಮತ್ತೊಂದು ಕಡೆಯಲ್ಲಿ ದೇವೇಗೌಡರು. ಇನ್ನೊಂದು ಕಡೆ ಪಾಟೀಲರು ಮತ್ತೊಂದು ಕಡೆ ಸಿದ್ದರಾಮಯ್ಯನವರು. ಚುನಾವಣೆಗಾಗಿ ಒಂದು ಹೆಚ್ಚುವರಿ ಪ್ರಣಾಳಿಕೆಯನ್ನು ಮಾಡಿದ್ದೀರಿ. ಇವರೆಲ್ಲಾ ಎಲ್ಲಿದ್ದಾರೆ? ನಿಮ್ಮ ಕಾರ್ಯಕ್ರಮಗಳು ಇರಲಿ, ಮೊದಲು ನಿಮ್ಮ ಜಾಹೀರಾತಿನ ಫೋಟೋ ಇತ್ತಲ್ಲಾ? ನಿಮ್ಮ ಮಾಜಿ ಮುಖ್ಯಮಂತ್ರಿ ನಿಮ್ಮ ನಾಯಕರು ಇದ್ದರಲ್ಲಾ? ಅವರು ಈಗ ನಿಮ್ಮ ಪಾರ್ಟಿಯಲ್ಲಿಯೇ ಇಲ್ಲ. ಜನತಾದರ್ಶನದ ಯಾತ್ರೆ. ಇದು ಇವೊತ್ತು ನಿಮ್ಮ ಸುಳ್ಳು ಭರವಸೆಗಳ ಯಾತ್ರೆಯಾಗಿದೆ. ನಿಮ್ಮ ಮಾಜಿ ಮುಖ್ಯಮಂತ್ರಿ ಹಾಲಿ ಪ್ರಧಾನಿಯವರು ಲೋಕಸಭೆಯಲ್ಲಿ ಅವರ ಕರ್ನಾಟಕದ ಸಾಧನೆಗಳ ಬಗ್ಗೆ ಹೇಳಿದರು. ಆದರೆ ಇವೊತ್ತು ನಿಮ್ಮ ಜನತಾದರ್ಶನದ ಯಾತ್ರೆಯ ಬಗ್ಗೆ ವಿಶ್ವಾಸ ನಿಮಗಿಲ್ಲ, ಅದು ಸುಳ್ಳು ಭರವಸೆ ಎಂದು ನಿಮಗೆ ಗೊತ್ತಾಯಿತು. ಜನರು ಅಂದು ಯಾವುದೋ ಒಂದು ವ್ಯಾಮೋಹಕ್ಕೊಳಗಾಗಿ ಸೇರಿದರು. ಇದು ನಡೆಯುವುದಿಲ್ಲವೆಂದು ನೀವೇ ಹೇಳಿದ್ದೀರಿ. ನನಗೆ ಅದರ ಬಗ್ಗೆ ವಿಶ್ವಾಸವಿಲ್ಲ, ಅಗತ್ಯವಿಲ್ಲ ಎಂದು ಮುಖ್ಯಮಂತ್ರಿಗಳಾಗಿ ತಾವೇ ಹೇಳಿದ್ದೀರಿ. ನೀವುಗಳು ನಮ್ಮ ಕೃಷ್ಣಾ ಮತ್ತು ಕಾವೇರಿ ಬಗ್ಗ ಅಣಿ ಮಾಡಿ ಅಧಿಕಾರಕ್ಕೆ ಬಂದಿದ್ದೀರಿ.

ಇದು ಇವೊತ್ತು ಬಹಳ ಪ್ರಮುಖವಾದಂಥ ಅಂಶ. ಆದರೆ ಆ ಕುರಿತು ಸಾಧನೆಗಳು ಏನಾಯಿತು? ನಮ್ಮವರೇ ಇವೊತ್ತು ರಾಷ್ಟ್ರದ ಪ್ರಧಾನಿಗಳಾಗಿದ್ದಾರೆ. ಅವರಿಗೆ ಕೃಷ್ಣಾ ಕಾವೇರಿ ಸಮಸ್ಯೆಗಳು ಗೊತ್ತಿವೆ. ಅದು ಬಗೆಹರಿಯುತ್ತದೆಂದು ನಾವು ತಿಳಿದುಕೊಂಡಿದ್ದೇವೆ. ಆದರೆ ಇವೊತ್ತು ನಮ್ಮವರೇ ಪ್ರಧಾನಿಯಾದ ಮೇಲೆ, ನಾನು ಹೇಳುತ್ತಾ ಇಲ್ಲ ನಮ್ಮ ಜನರು ಮಾತನಾಡಿಕೊಳ್ಳುತ್ತಾ ಇದ್ದಾರೆ ಪ್ರಧಾನಿಯವರ

ಕುರ್ಚಿಯ ಉಳಿವಿಗೋಸ್ಕರ, ನಿಮ್ಮ ಕುರ್ಚಿ ಉಳಿವಿಗೋಸ್ಕರ ಕಾವೇರಿ ಮತ್ತು ಕೃಷ್ಣಾ ಜಲಾನಯನದ ಜನರಿಗೆ ಅನ್ಯಾಯವಾಗುವುದು ನಿಶ್ಚಿತ ಎಂಬ ರೀತಿಯಲ್ಲಿನ ವಾತಾವರಣವು ಇವೊತ್ತು ರಾಜ್ಯದಲ್ಲಿ ಕಾಣುತ್ತಾ ಇದೆ.

ಸದನ ನಡೆಯುವ ಕಾಲದಲ್ಲಿ ಕದ್ದುಮುಚ್ಚಿ 5 ಟಿಎಂಸಿ ನೀರು ಬಿಟ್ಟಿರಿ, ತಮಿಳುನಾಡಿನ ಮುಖ್ಯಮಂತ್ರಿ ಕರುಣಾನಿಧಿಯವರಿಗೆ ಅಲ್ಲಿನ ಶಾಸಕಾಂಗದಲ್ಲಿ ಅಭಿನಂದನೆ ಸಲ್ಲಿಸುತ್ತಾರೆ. ಬೇರೆಯವರ ಹಿತ ಕಾಯುವುದಕ್ಕಾಗಿ ರಾಜ್ಯದ ಹಿತ ಬಲಿಕೊಡುವಂತಹ ಪ್ರಯತ್ನ ಮಾಡಿದಿರಿ. ಮನೆಗೆ ಮಾರಿ ಪರರಿಗೆ ಉಪಕಾರಿ ಎಂಬಂತೆ ರಾಜ್ಯದ ಹಿತವನ್ನು ಹಾಳುಮಾಡಿದಿರಿ. ಅಂದಿನ ಪ್ರಧಾನಿ ನರಸಿಂಹರಾಯರ ಆದೇಶದಂತೆ ಕಾವೇರಿ ವಿವಾದ ತನಿಖೆ ಮಾಡಲು ಬಂದಿದ್ದ ಅಲಘ ನೇತೃತ್ವದ ಪರಿಣಿತ ಸಮಿತಿಯನ್ನು ವಿಂಡ್ಸರ್‌ಮ್ಯಾನರ್‌ನಲ್ಲಿ ಇಟ್ಟಿದ್ದಿರಿ, ಅದರ ಬಿಲ್ಸ್‌ಗೆ ಸಂಬಂಧಿಸಿದಂತೆ ಡಿಪಿಎಆರ್5: ಎಚ್‌ಪಿಪಿ : 96 ಈ ಕಡತವನ್ನು ವಿಧಾನಸಭೆ ಮುಂದಿಡಿ ಸ್ವಾಮಿ. ಆ ಟೀಮಿನಲ್ಲಿ ಬಂದವರು 3 ಜನ. ಮೂವರಿಗೆ ವಿಂಡ್ಸರ್‌ಮ್ಯಾನರ್‌ನಲ್ಲಿ ಬಿಲ್ಲೆಷ್ಟು ಗೊತ್ತ? 60,000 ರೂ. ಇವತ್ತಿಗೂ ಆ ಬಿಲ್ ಪಾವತಿಯಾಗಿಲ್ಲ ನಂಜೇಗೌಡರೇ ಹಿಂದೆ ಮುಂದೆ ಓಡಾಡುತ್ತಿದೆ. ಸ್ವಾಮಿ, ಈ ಆಲಮಟ್ಟಿ ಬಗ್ಗೆ ನಾವ್ಯಾಕೆ ಇಷ್ಟು ಒದ್ದಾಡುತ್ತಿದ್ದೇವೆ? ಅಕಸ್ಮಾತ್ ಆಂಧ್ರದ ಒತ್ತಡಕ್ಕೆ ಮಣಿದು ಆಲಮಟ್ಟಿ ಎತ್ತರವನ್ನು 520 ಮೀಟರ್‌ಗೆ ನೀವು ಸೀಮಿತಗೊಳಿಸಿದರೆ.

ಶ್ರೀ ಹೆಚ್.ಎನ್. ನಂಜೇಗೌಡ : ಶಿಷ್ಟಾಚಾರದ ಪದ್ಧತಿ, ಏಕೆಂದರೆ ಅದು ರೆಕಾರ್ಡ್‌ಗೆ ಹೋಗುತ್ತದೆ, ಪತ್ರಿಕೆಯವರೂ ಬರೆದು ಬಿಡುತ್ತಾರೆ. ಅವರು ಹೇಳುವುದು ಏನೆಂದರೆ ಅತಿಥಿಗಳ ಹೆಸರಿನಲ್ಲಿ ಇಲ್ಲಿಯವರೇ ತಿಂದುಹಾಕಿದ್ದಾರೆ ಎಂದು.

ಶ್ರೀ ಬಿ.ಎಸ್. ಯಡಿಯೂರಕಪ್ಪ : ಆ ಬಿಲ್ ಲೆಕ್ಕದಲ್ಲಿ ಯಾರ್‍ಯಾರು ಕುಡಿದು ತಿಂದರು, ಯಾರ ಲೆಕ್ಕ, ರಾಜ್ಯದ ಬೊಕ್ಕಸದ ಹಣ ಖರ್ಚುಮಾಡಲು ಲೆಕ್ಕ ಬುಕ್ ಬೇಕಲ್ಲಾ ಯಾವ ರೀತಿ ಯಾರ್‍ಯಾರದೋ ಹೆಸರಿನಲ್ಲಿ ತೊಘಲಕ್ ದರ್ಬಾರು ನಡೆಯುತ್ತಿದೆ ಎಂಬುದಕ್ಕೆ ಈ ಈ ಒಂದು ಉದಾಹರಣೆಯನ್ನು ಕೊಟ್ಟೆ. ಆಲಮಟ್ಟಿ ಬಗ್ಗೆ ನಿಮಗೆ ಏತಕ್ಕೆ ಇಷ್ಟೊಂದು ಆಕ್ರೋಶ. ಏತಕ್ಕೆ ನಾವು ಸದನದಲ್ಲಿ ಇದರ ಬಗ್ಗೆ ಚರ್ಚೆ ಮಾಡಿದೆವು? ಆಂಧ್ರದ ಮುಖ್ಯಮಂತ್ರಿ ತಾಳಕ್ಕೆ ಕುಣಿದು ತಾವು ಆಲಮಟ್ಟಿ ಎತ್ತರವನ್ನು 520 ಅಡಿಗೆ ಸೀಮಿತಗೊಳಿಸಿದರೆ ಸಂಗ್ರಹಣೆ 132 ಟಿಎಂಸಿಗೆ ಮಾತ್ರ ಸೀಮಿತಗೊಳ್ಳುತ್ತದೆ. ಗರಿಷ್ಠ ಮಟ್ಟ 524.25 ಮೀಟರ್‌ಗೆ ಏರಿಸಿದಾಗ ಸಂಗ್ರಹಣಾ ಸಾಮರ್ಥ್ಯ 224.68 ಟಿಎಂಸಿ ಆಗುತ್ತದೆ. ಆದರೆ 520 ಮೀಟರ್‌ಗೆ ಇಳಿಸಿದರೆ 75 ಟಿಎಂಸಿ ನೀರು ಕಡಿಮೆಯಾಗುತ್ತದೆ. ಆಂಧ್ರದ ಮುಖ್ಯಮಂತ್ರಿಯವರ ಉದ್ದೇಶ ಇದೇನೆ? ಆಲಮಟ್ಟಿ ಎತ್ತರ ಕಟ್ಟಬಾರದು. ಈಗ ಸರಾಗವಾಗಿ ನೀರು ಹರಿದುಹೋಗುತ್ತಿದೆ. ಅವರು ಏನು ಹೇಳಿದ್ದಾರೆ 2000 ಇಸವಿವರೆಗೆ ಇದನ್ನು ಏರಿಸಬೇಡಿ ಎಂದು ಏಕೆ? ಅವರ ಮುಖ್ಯಮಂತ್ರಿಗಿರಿ ಉಳಿಸಬೇಕು. ನೀರು ಸರಾಗವಾಗಿ ಹೋಗಬೇಕು. ನಮ್ಮ ರೈತರಿಗೆ ನೀರು ಸಿಗಬಾರದು.

ಈ ಕುತಂತ್ರಕ್ಕೆ ನೀವು ಬಲಿಯಾಗುತ್ತಿದ್ದೀರಿ. ಈ ಸದನದ ಕಾರ್ಯಕಲಾಪ ಮುಂದೂಡುವುದನ್ನು ಕಾಯುತ್ತಿದ್ದೀರಿ. ಅಕಸ್ಮಾತ್ ಅಧಿಕಾರದಲ್ಲಿ ಮುಂದುವರೆಗರೆ ಆಲಮಟ್ಟಿ ಅಣೆಕಟ್ಟು ಎತ್ತರಿಸದೆ ನಿಮ್ಮ ಕುರ್ಚಿ ಡೆಲ್ಲಿಕುರ್ಚಿ ಉಳಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದೀರಿ. ಎಂಬುದು ನಮ್ಮ ನೇರವಾದ ಆರೋಪ. ಅಣೆಕಟ್ಟಿನ ಎತ್ತರ ಕಮ್ಮಿಮಾಡಿದರೆ 'ಬಿ' ಸ್ಕೀಮಿನಲ್ಲಿ ನೀರನ್ನು ಪಡೆಯುವ ಅಧಿಕಾರ ರಾಜ್ಯ

ಕಳೆದುಕೊಳ್ಳುತ್ತದೆ. "ಬಿ" ಸ್ಕೀಮಿನಡಿಯಲ್ಲಿ ರಾಜ್ಯಕ್ಕೆ ಕನಿಷ್ಠ 300 ಟಿಎಂಸಿ ನೀರು ಬಳಸಲು ಅನುಮತಿ ದೊರೆಯಬಹುದೆಂದು ನಾವು ನಿರೀಕ್ಷೆ ಮಾಡುತ್ತಿದ್ದೇವೆ. ಆದ್ದರಿಂದ ಅದಕ್ಕಾಗಿ ನಾವು ಸದನದಲ್ಲಿ ಹೋರಾಟ ಮಾಡಿದೆವು, ನೀವು ಬಿಲ್ ಪಾಸುಮಾಡಿಕೊಂಡಿರಿ. ಬಜೆಟನ್ನು ಪಾಸ್ ಮಾಡಿಕೊಂಡಿರಿ, ತಾಳ್ಮೆ ನಿಮಗಿರಲಿಲ್ಲ. ಕಾವೇರಿ ಕೃಷ್ಣ ಬಗ್ಗೆ ಎಲ್ಲಾ ಸಂದರ್ಭದಲ್ಲಿ ನಿಮಗೆ ಸಹಕಾರ ಕೊಟ್ಟುಕೊಂಡು ಬಂದರೂ ಯಾರನ್ನೋ ತೃಪ್ತಿಪಡಿಸುವುದಕ್ಕಾಗಿ ಆಲಮಟ್ಟಿ ಡ್ಯಾಮಿನ ಎತ್ತರ ಇಳಿಸಲು ತಾವು ಸಿದ್ಧರಾಗುತ್ತಿದ್ದೀರಿ. ಎರಡು ಸಾವಿರ ಇಸವಿಯೊಳಗೆ ಕೃಷ್ಣ ಕಣಿವೆ ಎಲ್ಲಾ ಯೋಜನೆಗಳನ್ನು ವಿಶ್ವಬ್ಯಾಂಕಿನ ನೆರವಿಲ್ಲದೆ ಪೂರೈಸಲು ಇನ್ನು ಮೂರುವರೆ ವರ್ಷಗಳಲ್ಲಿ ನಿಮ್ಮ ಅಂದಾಜಿನಂತೆ 6500 ಕೋಟಿ ಬೇಕು. ಆದರೆ ಬಜೆಟ್‌ನಲ್ಲಿ ನೀವು 300 ರಿಂದ 400 ಕೋಟಿಗಿಂತ ಹೆಚ್ಚು ನೀಡುತ್ತಿಲ್ಲ.

1994ರ ಆಗಸ್ಟ್ 19ರಂದು ಜನ್ಮತಾಳಿದಂತಹ ಕೃಷ್ಣ ಜಲಭಾಗ್ಯನಿಗಮ ಇದುವರೆಗೆ ಸಂಗ್ರಹ ಮಾಡಿರುವುದು 480 ಕೋಟಿ ಮಾತ್ರ. ಉಳಿದ ಹಣವನ್ನು ಎಲ್ಲಿಂದ ತರುತ್ತೀರಿ? ಹೇಗೆ ಮಾಡುತ್ತೀರಿ? ಅದರ ಬಗ್ಗೆ ಪ್ರಸ್ತಾಪ ಇಲ್ಲ. ಕೃಷ್ಣ ಕಾವೇರಿ ಮೇಲೆ ಆಣೆ ಮಾಡಿ ಅಧಿಕಾರಕ್ಕೆ ಬಂದಿರಿ. ಆಂಧ್ರದ ಸರ್ಕಾರ ತನ್ನ ಆರ್ಥಿಕ ದಿವಾಳಿತನದಿಂದ ಅದನ್ನು ಮುಚ್ಚಿಕೊಳ್ಳುವುದಕ್ಕೋಸ್ಕರ ಬೊಬ್ಬೆ ಹೊಡೆದರು. ಯಾವನೋ ಹಿಂದುಳಿದ ವರ್ಗದ ಆಯೋಗದ ಅಧ್ಯಕ್ಷನಿಂದ ಹೈಕೋರ್ಟಿಗೆ ರಿಟ್ ಹಾಕಿಸಿದರು, ಹೊಸ ಸಮಸ್ಯೆ ಸೃಷ್ಟಿ ಮಾಡಿದರು. ನಮ್ಮ ರಾಜ್ಯ ಸರ್ಕಾರದ ಬೇಜವಾಬ್ದಾರಿತನ ಯಾವ ತರಹ ಇತ್ತು ಆಂಧ್ರದ ಹೈಕೋರ್ಟ್ ನಿರ್ದೇಶನ ನೀಡಿದ ತಕ್ಷಣ ಸುಪ್ರೀಂ ಕೋರ್ಟಿಗೆ ಹೋಗುವ ಬದಲು ಇವರು ದಿಲ್ಲಿಗೆ ಹೋದರು. ಅಲ್ಲಿ ದಿಲ್ಲಿದೊರೆಯನ್ನು ಕಂಡು ಆಗಸ್ಟ್ 10ನೇ ತಾರೀಖು ಸಭೆಯಲ್ಲಿ ತೀರ್ಮಾನವಾದಂತೆ ಅದಕ್ಕೆ ಅಂಟಿಕೊಳ್ಳುವ ಧೈರ್ಯ ಪ್ರಧಾನಮಂತ್ರಿಗಳಿಗಿರಲಿಲ್ಲ. ಸಂಯುಕ್ತರಂಗದ 4 ಮುಖ್ಯಮಂತ್ರಿಗಳ ಕೈಗೆ ರಾಜ್ಯದ ಜುಟ್ಟು ಕೊಟ್ಟಿರಿ, ತಜ್ಞರ ಸಮಿತಿಯೊಂದು ರಚನೆಯಾಯಿತು. ಆ ಸಮಿತಿ ಇಲ್ಲಿಗೆ ಬರಲು ಯಾವುದೇ ನೈತಿಕ ಹಕ್ಕಿಲ್ಲ ಅದು ಕಾನೂನು ಬದ್ಧವಾಗಿಲ್ಲವೆಂದು ಗೊತ್ತಿದ್ದರೂ ಸಹ ನಮ್ಮ ಮುಖ್ಯಮಂತ್ರಿಗಳು ಬೇಜವಾಬ್ದಾರಿಯಿಂದ ಸ್ವಾಗತಿಸಿಯೂ ಬಿಟ್ಟರು. ಆಮೇಲೆ ಕೇಂದ್ರ ಸರ್ಕಾರದ ಕಾನೂನು ಸಚಿವಾಲಯ ಆಕ್ಷೇಪಣೆ ಮಾಡಿದ ಮೇಲೆ ನಮ್ಮ ಮುಖ್ಯಮಂತ್ರಿಗಳು ಉತ್ತರಕುಮಾರನಂತೆ ವೀರಾವೇಶದ ಮಾತುಗಳಾಡುತ್ತಾ ಈ ಸಮಿತಿ ನಮಗೆ ಒಪ್ಪಿಗೆ ಇಲ್ಲ ಎಂದರು.

ಈ ರೀತಿ ಕರ್ನಾಟಕದ ಹಿತ ಕೆಡಿಸುವ ಪ್ರಯತ್ನ ಮಾಡಿದಿರಿ. ಮಾನ್ಯ ನಾಗೇಗೌಡರು ಇಲ್ಲ, ಎಂವಿಸಿ ಕಾಲುವೆ ಮಾಡುವುದಕ್ಕಾಗಿ ಟೆಂಡರ್ ಕೆಲಸವನ್ನು 3 ವರ್ಷಗಳ ಹಿಂದೆ ಆಂಧ್ರದ ಮಲ್ವಾನಿ, ಸುಧಾಕರರೆಡ್ಡಿ ಜಿ.ಎಚ್. ರೆಡ್ಡಿಯವರಿಗೆ ಕೊಟ್ಟಿರಿ, ಮೂರು ವರ್ಷ ಕಳೆಯುತ್ತಾ ಬಂತು ಪ್ರತಿವರ್ಷ ಹೆಚ್ಚು ಕ್ಲೈಂ ಕೊಡುತ್ತಿದ್ದೀರಿ, ಒಂದು ಅಂದಾಜಿನಂತೆ ಇದೊಂದಕ್ಕೇ ಸುಮಾರು 70-80 ಕೋಟಿ ಜಾಸ್ತಿ ಕೊಟ್ಟಿದ್ದೀರಿ. ಅವರಿಗೆ ಕೊಟ್ಟಿದ್ದ ಟೈಂಲಿಮಿಟ್ ಮುಗಿದಿದೆ. ಅದನ್ನು ಪೂರ್ತಿ ಮಾಡುವುದಕ್ಕೆ ನೀವು ರೆಡಿ ಇಲ್ಲ. ಇಂಡಿ ಬ್ರಾಂಚ್ ಕೆನಾಲ್‌ನಲ್ಲಿ ಜೆಬಿಸಿ ಕ್ಯಾನಲ್‌ನಲ್ಲಿ ಎನ್‌ಆರ್‌ಪಿಸಿ ಕೆನಾಲ್‌ನಲ್ಲಿ ಶೇಕಡ 60ಕ್ಕಿಂತ ಹೆಚ್ಚು ಆಂಧ್ರದ ಕಂಟ್ರಾಕ್ಟರುಗಳು ಕೆಲಸ ಮಾಡುತ್ತಿದ್ದಾರೆ. ಸ್ವಾಮಿ, ನಾನು ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ ಎಂವಿಸಿಯಲ್ಲಿ ಒಂದು ಕ್ಯೂಬಿಕ್‌ಮೀಟರ್‌ಗೆ ರಾಕ್ ಬಂದಿದೆಯೆಂದು 350 ರೂ ಕೊಟ್ಟಿದ್ದಾರೆ ಸುಳ್ಳು ದಾಖಲೆ, ರಾಕ್‌ಇಲ್ಲ ಅಲ್ಲಿ, ಆಂಧ್ರದ ಕಂಟ್ರಾಕ್ಟರ್‌ದಾರರು ಅಧಿಕಾರಿಗಳು ಶಾಮೀಲಾಗಿ ಸರ್ಕಾರಿ ಖಜಾನೆ ಲೂಟಿ ಮಾಡುತ್ತಿದ್ದಾರೆ. ಆಲಮಟ್ಟಿ ಡ್ಯಾಮನ್ನು ನೋಡುವುದಕ್ಕೆ ಆಂಧ್ರಪ್ರದೇಶದ

ಎಂಪಿಗಳು ಬರುತ್ತಾರೆ, ಅವರು ಬರುವುದು ಅಂಧ್ರದ ಕಂಟ್ರಾಕ್ಟರುಗಳ ಕಾರಿನಲ್ಲಿ ಒಂದು ಡ್ಯಾಮಿನ ಎಲ್ಲಾ ಫೋಟೊ ತೆಗೆದುಕೊಳ್ಳುತ್ತಾರೆ ಎಲ್ಲಾ ವಿವರ ಬಹಿರಂಗ ಮಾಡುತ್ತಾರೆ. ಪ್ರತಿನಿತ್ಯ ಸುದ್ದಿ ಮುಟ್ಟಿಸುತ್ತಾರೆ. ಕಳೆದ ಮೂರು ವರ್ಷಗಳಿಂದಲೂ ಕೆಲಸ ಪೂರ್ಣಮಾಡದಿರುವ ಆಂಧ್ರದ ಕಂಟ್ರಾಕ್ಟರುಗಳು ನಿಮಗ್ಯಾಕೆ ಬೇಕು? ಕರ್ನಾಟಕ ರಾಜ್ಯದಲ್ಲಿ ಪ್ರಾಮಾಣಿಕ ಕಂಟ್ರಾಕ್ಟರಿಲ್ಲವೇ? ಮೂರು ವರ್ಷ ಟೈಂ ಕೊಟ್ಟರೂ ಹೆಚ್ಚು ಕ್ಲೈಮ್ ಮಾಡಿಕೊಂಡು ಕೋಟ್ಯಾಂತರ ಲೂಟಿ ಮಾಡಲು ಏಕೆ ಅವಕಾಶ ಮಾಡಿಕೊಡುತ್ತೀರಿ? ಎಂವಿಸಿಯಲ್ಲಿ ತಲಾ ಕ್ಯೂಬಿಕ್ ಮೀಟರ್‌ಗೆ ರಾಕ್‌ಬಂದಿದೆ ಎಂದು 350ರೂ ಕೊಟ್ಟಿದ್ದೀರಿ. ಎಲ್ಲಿದೆ ರಾಕ್? ಬನ್ನಿ ನಾವೂ ನೀವೂ ಜೊತೆಯಲ್ಲಿ ಹೋಗೋಣ. ಕರ್ನಾಟಕದ ಕಂಟ್ರಾಕ್ಟರುಗಳು ಒಳ್ಳೆಯ ಕೆಲಸ ಮಾಡಿಲ್ಲವೇನು? 8 ತಿಂಗಳ ಹಿಂದೆ ಕೊಟ್ಟ ಚಾನಲ್‌ಗಳ ಕೆಲಸಗಳನ್ನು ಪೂರ್ತಿ ಮಾಡಿಲ್ಲವೇನು?

ಲೂಟಿ ಮಾಡುವುದಕ್ಕೆ ಅಧಿಕಾರಿಗಳ ಜೊತೆ ಪುಡಾರಿಗಳ ಜೊತೆ ಸೇರಿಕೊಂಡು ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಎರಡು ಸಾವಿರ ವರ್ಷದ ಒಳಗೆ ಕೆಲಸ ಮುಗಿಸದೇ ಆಂಧ್ರದ ಜೊತೆಯಲ್ಲಿ ಕೈ ಜೋಡಿಸಿಕೊಳ್ಳಲು ಆಂಧ್ರದ ಕಂಟ್ರಾಕ್ಟರುಗಳು ಬೇಕು. ಕರ್ನಾಟಕದ ಕಂಟ್ರಾಕ್ಟರರುಗಳು ಪ್ರಾಮಾಣಿಕರಾಗಿ ಕೆಲಸ ಮಾಡುವುದಕ್ಕೆ ಸಿದ್ಧರಿದ್ದರೂ ಅವರಿಗೆ ಅವಕಾಶಗಳನ್ನು ಕೊಡಲಿಕ್ಕೆ ನೀವು ಸಿದ್ಧರಿಲ್ಲ. ಗೋದಾವರಿ ಕಣಿವೆ ಯೋಜನೆ, ಕಾರಂಜಿ ನೀರಾವರಿ ಯೋಜನೆ, ಬೀದರ್ ಜಿಲ್ಲೆಯ ದೊಡ್ಡ ಯೋಜನೆ ಇದು. ಯೋಜನೆಯಿಂದ 35614 ಹೆಕ್ಟೇರ್ ಪ್ರದೇಶವನ್ನು ನೀರಾವರಿಗೆ ಅಳವಡಿಸಬಹುದು. 1998ರ ಮಾರ್ಚ್ ಒಳಗೆ ಪೂರ್ಣ ಮಾಡುತ್ತೇವೆಂದು ಹೇಳಿದಿರಿ. 1990ರಲ್ಲಿ ಅಣೆಕಟ್ಟು ಪೂರ್ಣವಾಗಿದೆ. ನೀರನ್ನು ಸಂಗ್ರಹಿಸಿದ್ದೇವೆ ಆದರೆ ಕಾಲುವೆಗಳ ಕಾಮಗಾರಿಯಾಗದೇ ಈ ನೀರನ್ನು ಅವರಿಗೆ ತಲುಪಿಸುವುದಕ್ಕೆ ತಾವು ಸಿದ್ಧವಿಲ್ಲ. 1993-94ರಲ್ಲಿನ ಆಯವ್ಯಯದಲ್ಲಿ 30 ಕೋಟಿ ಒದಗಿಸಿದ್ದೀರಿ. ಖರ್ಚಾದದ್ದು 12 ಕೋಟಿ. ಇದಕ್ಕೆ ಯಾರು ಕಾರಣ ಆಂಧ್ರದ ಕಂಟ್ರಾಕ್ಟರುಗಳೇ? ಹಣ ಬಿಡುಗಡೆ ಮಾಡಲಿಲ್ಲವೇ? ಏಕೆ ಮಾಡುತ್ತಿಲ್ಲ?

ಈ ಯೋಜನೆ ಮುಗಿಯುವುದಕ್ಕೆ ಇನ್ನು 180 ಕೋಟಿ ರೂಪಾಯಿ ಬೇಕೆಂದು ಹೇಳುತ್ತಾರೆ, 1995-96 ರಲ್ಲಿ 17 ಕೋಟಿ ಅನುದಾನ ಕೊಟ್ಟಿದ್ದು 1996-97ರಲ್ಲಿ 12 ಕೋಟಿ ಅನುದಾನವನ್ನು ಕೊಟ್ಟಿದ್ದೀರಿ. ಕೃಷ್ಣಾ ಜಲಾನಯನ ಪ್ರದೇಶದಲ್ಲಿರುವಂತಹ ನೀರನ್ನು 2000 ಇಸವಿಯೊಳಗೆ ಉಪಯೋಗಿಸಬೇಕಾಗುತ್ತದೆ. ಇದರ ಬಗ್ಗೆ ಯಾವುದೇ ಪ್ರಾಮಾಣಿಕ ಪ್ರಯತ್ನ ಇಲ್ಲ. 2000 ವರ್ಷದೊಳಗಾಗಿ ರಾಜ್ಯ 729 ಟಿ ಎಂ ಸಿ ನೀರನ್ನು ಬಳಸಿಕೊಳ್ಳಬೇಕಾಗಿದೆ. 2000 ವರ್ಷದೊಳಗಾಗಿ ಕೃಷ್ಣಾ ನದಿಯ ನೀರನ್ನು ಉಪಯೋಗ ಮಾಡಿಕೊಳ್ಳಲಿಕ್ಕೆ ಯಾವುದೇ ಪ್ರಾಮಾಣಿಕ ಪ್ರಯತ್ನ ಇಲ್ಲ. ರಾಜ್ಯ ನಮ್ಮ ಪಾಲಿನ 729 ಟಿ ಎಂ ಸಿ ನೀರನ್ನು 2000 ವರ್ಷದೊಳಗಾಗಿ ಉಪಯೋಗಿಸಿಕೊಳ್ಳಬೇಕಾಗಿದೆ. ಆದರೆ ನಮ್ಮ ಸರಕಾರ 1996ರ ಮಾರ್ಚಿಯೊಳಗೆ ಉಪಯೋಗಿಸಿಕೊಂಡಿರುವಂತಹ ನೀರು ಕೇವಲ 450 ಟಿ ಎಂ ಸಿ ನೀರು ಮಾತ್ರ. ಇನ್ನು ಮೂರೂವರೆ ವರ್ಷದಲ್ಲಿ 270 ಟಿ ಎಂ ಸಿ ನೀರನ್ನು ಉಪಯೋಗ ಮಾಡಿಕೊಳ್ಳೇಕಾಗುತ್ತದೆ.

ನಿಮ್ಮ ಹತ್ತಿರ ಇದಕ್ಕೆ ಹಣ ಇಲ್ಲ, ಒಂದು ಪ್ಲಾನಿಂಗ್ ಇಲ್ಲ, ಪೂರ್ಣ ಮಾಡುವಂತಹ ರಾಜಕೀಯ ಇಚ್ಛಾಶಕ್ತಿ ಇಲ್ಲ. ಮಾನ್ಯ ನಾಗೇಗೌಡರು ನೀರಾವರಿ ಸಚಿವರಾಗಿದ್ದಾರೆ. ಸದನದಲ್ಲಿ ಚರ್ಚೆಯಾಯಿತು. ತುಂಗಭದ್ರಾ ಒಳಮೈಯನ್ನು ಶಕ್ತಿಯುತ

ಮಾಡುವಂತಹ ಸಂದರ್ಭದಲ್ಲಿ ಅವ್ಯವಹಾರವಾಗಿದೆ ಎಂದು ನಾವು ಆರೋಪ ಮಾಡಿದೆವು. ಒಂದು ವರದಿಯನ್ನು ಕೊಡಿ ಎಂದು ಒಂದು ಸಮಿತಿಯನ್ನು ತಾವು ಕಳುಹಿಸಿ ಕೊಟ್ಟಿರಿ. ಇದರ ಬಗ್ಗೆ ನಿಮಗೆ 22 ವರದಿ ಸಿಕ್ಕಿದೆ. 22 ಕೋಟಿ ರೂಪಾಯಿಗಳ ಗುತ್ತಿಗೆ ನಿಮ್ಮದು ಸರಿಯಾದಂತಹ ಗುತ್ತಿಗೆದಾರರಿಗೆ ಕೊಡದೇ ನಿಗದಿತ ಸಮಯ 2 ತಿಂಗಳಲ್ಲಿ ನೀವು ಮುಗಿಸಲಿಲ್ಲ.

22 ಕೋಟಿಯ ಅನುದಾನವನ್ನು ಸರಕಾರ ಅನುಮೋದನೆ ಮಾಡಿರಲಿಲ್ಲ. ಕೆಲಸದ ಗುಣಮಟ್ಟ ಸರಿ ಇಲ್ಲವೆಂದು ನಿಮಗೆ ವರದಿ ಬಂದಿದೆ. ಇಬ್ಬರು ಗುತ್ತಿಗೆದಾರರಿಗೆ ಎಸ್.ಆರ್. ದರಕ್ಕಿಂತ ಹೆಚ್ಚಿಗೆ 5 ಪರ್ಸೆಂಟ್ ಕೊಟ್ಟಿರಿ. ಉಳಿದ 70 ಗುತ್ತಿಗೆದಾರರಿಗೆ ತಾವೇ ನೆಗೋಷಿಯೇಷನ್ ಮಾಡಿ ಎಸ್.ಆರ್.ದರದ ಮೇಲೆ 19 ಪರ್ಸೆಂಟ್ ಜಾಸ್ತಿ ಕೊಟ್ಟಿರಿ. ತಜ್ಞರ ಸಮಿತಿ ಎಲ್ಲಿ ಒಳಮೈಯನ್ನು ಶಕ್ತಿಯುತ ಮಾಡಬೇಕೆಂದು ಯಾವ್ಯಾವ ಕಿಲೋ ಮೀಟರಿನಲ್ಲಿ ಆಗಬೇಕೆಂದು ಹೇಳಿದ್ದರೋ ಅಲ್ಲಿ ಕಂಟ್ರಾಕ್ಟರ್ ಕೆಲಸ ಮಾಡಲಿಲ್ಲ. ಕೋಟಿಗಟ್ಟಲೆ ಬಿಲ್ ಮಾಡಿ ಬಿಲ್ ಪಾವತಿಯಾಯಿತು. ನೀವು ಹೋಗಿ ಬರುತ್ತೀರಿ ಆಗ ಗೊತ್ತಾಗುತ್ತದೆ. ಎಲ್ಲಿ ಅಗತ್ಯ ಇದೆಯೋ, ಎಲ್ಲಿ ತಜ್ಞರ ಸಮಿತಿ ಒಳಮೈ ಅನ್ನು ರಿಪೇರಿ ಮಾಡಬೇಕೆಂದು ವರದಿ ಬಂದಿತ್ತೋ ಅಲ್ಲಿ ರಿಪೇರಿಯಾಗಲಿಲ್ಲ. 77 ನೇ ಕಿಲೋ ಮೀಟರ್ ಬಳಿ ಒಡೆದ ನಂತರ ಮತ್ತೆ 66ನೇ ಕಿಲೋ ಮೀಟರ್ ಮತ್ತು 67 ನೇ ಕಿಲೋ ಮೀಟರ್ ಹತ್ತಿರ ಒಡೆದಿದೆ. ಡ್ರೈಲ್ಯಾಂಡ್‌ಗೆ ಇವತ್ತಿನವರೆಗೂ ನೀರನ್ನು ಕೊಟ್ಟಿಲ್ಲ ನಾಳೆ ನೀವು ಹೋಗಿ ಬರುತ್ತಿದ್ದೀರಿ. ಮಂತ್ರಿಗಳು ವರದಿಯನ್ನು ತರಿಸಿಕೊಂಡು ಈ ಸದನದಲ್ಲಿ ಹೇಳಲಿ.

ಯಾರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ಅದನ್ನು ಹೇಳಿ. ಒಂದು ಅಂದಾಜಿನ ಪ್ರಕಾರ 300 ರಿಂದ 350 ಕೋಟಿ ರೂಪಾಯಿಯ ಬೆಳೆ ಇವತ್ತು ಸರ್ವ ನಾಶವಾಗುತ್ತದೆ. ನೀವು ಅಧಿಕಾರದಲ್ಲಿ ಮುಂದುವರಿಯಬೇಕೇ? 2000ರ ವರ್ಷದೊಳಗೆ ನೀರನ್ನು ಉಪಯೋಗಿಸಬೇಕು. ಸಾವಿರಾರು ಕೋಟಿ ರೂಪಾಯಿ ಖರ್ಚು ಮಾಡಿರುವಂತಹ ನಾರಾಯಣಪುರ ಅಣೆಕಟ್ಟು ಕಳಪೆ ಕಾಮಗಾರಿಯಾಗಿದೆ. ನಾರಾಯಣಪುರ ಅಣೆಕಟ್ಟು ಸೋರುತ್ತಿದೆ ನಾನು ಅಲ್ಲಿಗೆ ಹೋಗಿ ಬಂದಿದ್ದೇನೆ. ಸದನದಲ್ಲಿ ಕೂಡ ಹೇಳಿದೆ. ಇದೇ ಅಣೆಕಟ್ಟಿನ ಎಡದಂಡೆ ಕಾಲುವೆ 1990 ರಿಂದ ಇಲ್ಲಿಯವರೆಗೆ ನೀರನ್ನು ಹಾಯಿಸುತ್ತಿರುವಂತಹ ಸಂದರ್ಭದಲ್ಲಿ ಆಗಾಗ್ಗೆ ಬಿರುಕು ಬಿಡುತ್ತಿದೆ. ಬಿಜಾಪುರ, ಗುಲ್ಬರ್ಗ, ಈ ಭಾಗದ ಜನರಿಗೆ ನಾರಾಯಣಪುರ ಎಡದಂಡೆ ನಾಲೆ ಒಂದು ಜೀವನಾಡಿಯಂತೆ ಇದೆ. ಈ ವೈಫಲ್ಯಕ್ಕೆ ಕಾರಣರ್‍ಯಾರು? ಈ ನಾರಾಯಣಪುರ ಎಡದಂಡೆ ಕಾಲುವೆ ಪದೇ ಪದೇ ಒಡೆಯುವುದಕ್ಕೆ ಕಾರಣವೇನು ಎಂಬುದನ್ನು ಪತ್ತೆ ಹಚ್ಚಲು ಕೆ.ಸಿ.ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಸಮಿತಿ ಮಾಡಿದ್ದೀರಿ. ನಾರಾಯಣಪುರ ಅಣೆಕಟ್ಟನ್ನು ನಿರ್ಮಿಸುವಾಗ ಗುಣಮಟ್ಟದ ಕಡೆಗೆ ಗಮನ ನೀಡದೇ ಅಣೆಕಟ್ಟು ನಿರ್ಮಾಣವಾದ ನಂತರ ಸುಭದ್ರದ ಬಗ್ಗೆ ತನಿಖೆ ಮಾಡುವುದಕ್ಕೆ ಈಗ ಆದೇಶ ನೀಡಿದ್ದೀರಿ.

1990 ರಿಂದ 96 ರವರೆಗೆ ನಾಲೆಯ ಹೂಳು ತೆಗೆಯುವುದಕ್ಕೆ 39 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಅದರಲ್ಲೂ ಅವ್ಯವಹಾರವಾಗಿದೆ. ಒಡೆದಿರುವಂತಹ ಕಾಲುವೆ ದುರಸ್ತಿಗೆ 15.9 ಕೋಟಿ ರೂಪಾಯಿ ಹಣ ಖರ್ಚು ಮಾಡಿದ್ದೀರಿ. 31 ನೇ ಜುಲೈ 96ರಲ್ಲಿ ಹೆಚ್ಚುವರಿ ದರದಲ್ಲಿ ಬಿಲ್ ಮಾಡಿ 18 ಕೋಟಿ ರೂಪಾಯಿ ಕೊಟ್ಟಿದ್ದೀರಿ ಇದು ಅವ್ಯವಹಾರವಲ್ಲವೇನು? ನಮ್ಮ ಶಾಸಕರಿಗೆ ಗೊತ್ತಿರಬಹುದು

ಕೆ.ಆರ್. ಆಸ್ಪತ್ರೆ ಮೈಸೂರು 6 ಅಂತಸ್ತಿನ ಕಟ್ಟಡ ಕಟ್ಟಿದ ಮೇಲೆ ಫೌಂಡೇಷನ್ ಸರಿ ಇಲ್ಲ ಎಂದ ಮೇಲೆ ಫೌಂಡೇಷನ್ ಬಿಗಿ ಮಾಡುವುದಕ್ಕೆ ಕೋಟ್ಯಾಂತರ ರೂಪಾಯಿ ಖರ್ಚು ಮಾಡಿದ್ದೇವೆ. ಬಿಲ್ಡಿಂಗ್ ಆಗಬಹುದು. ಆದರೆ ನಾರಾಯಣಪುರ ಒಂದು ಡ್ಯಾಂ ಇವತ್ತು ಬಿರುಕು ಬಿಡುತ್ತಿದೆ ಏನಾಗಬಹುದೆಂಬ ಭಯ ಸರಕಾರಕ್ಕೆ ಕಾಡುತ್ತಿದೆ ತನಿಖೆ ಮಾಡುವುದಕ್ಕೆ ನೀವು ಆದೇಶ ನೀಡುತ್ತೀರೆನ್ನುವುದಾದರೆ, ಅವನ್ಯಾರು ಇದರ ಡಿಸೈನ್ ಮಾಡಿದವನು? ಕ್ವಾಲಿಟಿ ಕಂಟ್ರೋಲ್ ಆಗ ಇರಲಿಲ್ಲವೇ? ಹಿಂದಿನ ಸರಕಾರಗಳು ಇರಲಿಲ್ಲವೇ? ನಾರಾಯಣಪುರ ಡ್ಯಾಂ ಬಿರುಕು ಬಿಡುವಂತಹ ಒಂದು ಆಘಾತ ಪರಿಸ್ಥಿತಿ ಬರಬೇಕಾದರೆ ಅವನನ್ನು ಹ್ಯಾಂಗ್ ಮಾಡಬೇಕಾಗಿತ್ತು ಜೈಲಿಗೆ ಕಳುಹಿಸಬೇಕಾಗಿತ್ತು. ಅದು ಆವತ್ತು ಆಯಿತು.

ಇವತ್ತು ನಿನ್ನೆ ಮೊನ್ನೆ ಏನು ನಡೆಯುತ್ತಿದೆ. ಚಾನಲ್‌ನ ಒಳಮೈ ದುರಸ್ತಿ ಮಾಡುತ್ತೇವೆ ಬಿಗಿ ಮಾಡುತ್ತೇವೆಂದು ಹೇಳುತ್ತಿದ್ದೀರಿ ಈಗಲೂ ಅದೇ ಹಗರಣ ಅದೇ ಲೂಟಿ ಈಗಲೂ ಆಗುತ್ತಿದೆ ಈ ಕೆಲಸ ಮಾಡುವುದಕ್ಕೆ ನಾಗೇಗೌಡರು ಬರಬೇಕಾಗಿತ್ತೇ? ನೀವು ಬಂದ ಮೇಲೇನು ಬದಲಾವಣೆ ಆಯಿತು? ತುಂಗಭದ್ರಾ ಎಡದಂಡೆ ಕಾಲುವೆ ಬಗ್ಗೆ ನಾನು ಹೇಳುತ್ತಿದ್ದೇನೆ. ನೀವು ಬಂದ ಮೇಲೆ ಕಳೆದ ಎರಡು ತಿಂಗಳಲ್ಲಿ ಆದಂತಹ ಅನ್ಯಾಯಕ್ಕಾಗಿ ಯಾವ ಅಧಿಕಾರಿ ಜೈಲಿಗೆ ಹೋಗಲಿಲ್ಲ ಯಾವ ಕಂಟ್ರಾಕ್ಟರ್ ಕೂಡ ಕೆಲಸ ಕಳೆದುಕೊಳ್ಳಲಿಲ್ಲ. ನಾನು ಅಲ್ಲಿಗೆ ಹೋಗಿ ಬಂದಾಗ ಜನ ಮಾತನಾಡಿಕೊಳ್ಳುತ್ತಾರೆ. ಸ್ವಾಮಿ, ಈ ಊರಿನ ಮುಖಂಡರು, ಕಂಟ್ರಾಕ್ಟರ್ ಸೇರಿ ಎಲ್ಲಿ ಕಾಲುವೆ ಬಿಗಿ ಮಾಡಬೇಕು ಒಳತೋಳು ಬಿಗಿ ಮಾಡಬೇಕು ಅಲ್ಲಿ ಮಾಡದೇ ಎಲ್ಲಿಬೇಕೋ ಅಲ್ಲಿ ಮಾಡಿಕೊಂಡು ಕಂಟ್ರಾಕ್ಟರ್ ಹೆದರಿಸಿ ಬಿಲ್ ತೆಗೆದುಕೊಳ್ಳುವ ಪರಿಸ್ಥಿತಿ ಬಂದಿದೆ ಎಂದು ನಾನು ಇಲ್ಲಿ ಹೇಳಿದಾಗ ನಗೆಪಾಟಲಾಯಿತು. ಮಾನ್ಯ ದೇವೇಗೌಡರು ಮುಖ್ಯ ಮಂತ್ರಿಯಾಗಿದ್ದಾಗ ವಿರೋಧ ಪಕ್ಷದ ನಾಯಕನಾಗಿ 4 ದಿವಸದಲ್ಲೇ, ನನಗೇನೂ ಅವರ ಮೇಲೆ ವೈಯಕ್ತಿಕ ದ್ವೇಷ ಇರಲಿಲ್ಲ. ಸರಕಾರಕ್ಕೆ ಎಚ್ಚರ ವಹಿಸಬೇಕೆಂಬ ದೃಷ್ಟಿಯಿಂದ ಕೋರಮಂಗಲದ ರಾಷ್ಟ್ರೀಯ ಕ್ರೀಡೆ ನಡೆಸುವ ಸಂದರ್ಭದಲ್ಲಿ ಕೋರಮಂಗಲದಲ್ಲಿ ಆದಂತಹ ಅವ್ಯವಹಾರದ ಬಗ್ಗೆ ನಾನು ಪ್ರಸ್ತಾಪ ಮಾಡುವಂತಹ ಪ್ರಯತ್ನ ಮಾಡಿದೆ. ಕೆಲಸ ಕೊಟ್ಟಿರಲಿಲ್ಲ.

ಆವತ್ತು 90ರ ಜನವರಿ ಫೆಬ್ರವರಿ ತಿಂಗಳಲ್ಲಿ 11 ದಿನಗಳ ರಾಷ್ಟ್ರೀಯ ಕ್ರೀಡೆ ನಡೆಯಬೇಕಾಗಿತ್ತು ಎಂದು ಅವತ್ತು ಹೇಳಿದಿರಿ. ಈಗ ನಡೆಯುವ ಸ್ಥಿತಿ ಇದೆಯೇನು? ಅಲ್ಲಿ 6000 ಜನ ಕ್ರೀಡಾಪಟುಗಳು ಹಾಗೂ 700 ಅಧಿಕಾರಿಗಳನ್ನು ಉಳಿಸಿಕೊಳ್ಳಲು ಅಲ್ಲಿ ವಸತಿ ಕಲ್ಪನೆ ಮಾಡುವಂತಹ ಸಂದರ್ಭದಲ್ಲಿ ಆ ನೆಪದಲ್ಲಿ ಕೋರಮಂಗಲದ ಕೆರೆ ಅಂಗಳದಲ್ಲಿ 56 ಎಕರೆ 25 ಗುಂಟೆಯಲ್ಲಿ 2820 ಫ್ಲಾಟುಗಳನ್ನು ತಯಾರು ಮಾಡಿದಿರಿ. 367 ಕೋಟಿ ರೂಪಾಯಿ ವೆಚ್ಚ ಮಾಡಿದ್ದೀರಿ. ಕೃಷ್ಣಾ ಕಾವೇರಿಗೆ ಹಣ ಇಲ್ಲದಿರುವಂತಹ ಕಾಲದಲ್ಲಿ ಕೋರಮಂಗಲದಲ್ಲಿ ಕ್ರೀಡಾ ಗ್ರಾಮದ ಅಗತ್ಯ ಇತ್ತೇ? ಕೃಷ್ಣಾ ಜಲಾನಯನ ಪ್ರದೇಶಕ್ಕೆ ಖರ್ಚು ಮಾಡಿ. ಹುಡ್ಕೋದಿಂದ ಸಾಲ ಪಡೆದು ಬಡ್ಡಿ ಕೊಟ್ಟು ಸರಕಾರವನ್ನು ದಿವಾಳಿ ಮಾಡುವುದರ ಬದಲಾಗಿ ಅದನ್ನು ಬಡಬಗ್ಗರಿಗೆ ಮನೆ ಕಟ್ಟಲು ಉಪಯೋಗ ಮಾಡಿ ಎಂದು ನಾನು ಹೇಳಿದೆ. ಅವತ್ತು ನನ್ನ ಬಗ್ಗೆ ಹಗುರವಾಗಿ ಮಾತನಾಡಿದಿರಿ ಛೇಡಿಸಿದಿರಿ. ತಮಾಷೆ ಮಾಡಿದಿರಿ. ಬಡ್ಡಿ ರಹಿತವಾಗಿ ಶೇಕಡ 10 ಆದರೆ 24 ಕೋಟಿ ಕೊಟ್ಟಿರಿ. ಕಂಟ್ರಾಕ್ಟರ್ ಅವರಿಗೆ ಅಡ್ವಾನ್ಸ್ ಆಗಿ. ಶೇಕಡ 16 ಬಡ್ಡಿಯಂತೆ 12 ಕೋಟಿ ರೂಪಾಯಿ ಅಡ್ವಾನ್ಸ್ ಕೊಟ್ಟಿರಿ ಒಟ್ಟು 36 ಕೋಟಿಯನ್ನು ಈ ಕೆಲಸ ಪ್ರಾರಂಭ ಮಾಡುವುದಕ್ಕೆ ಮುಂಚೆ ಕೊಟ್ಟಿರಿ. ಡಿಸೆಂಬರ್

31ಕ್ಕೆ 1606 ಮನೆಗಳು ಮುಗಿಯಬೇಕಾಗಿತ್ತು. ಜೂನ್ 96ರ ವೇಳೆಗೂ ಸಹ ಕೆಲಸ ಮುಗಿಯಲಿಲ್ಲ ಈ ನಿಮಿಷಕ್ಕೂ ಕೂಡ ಮುಗಿಯಲಿಲ್ಲ. ಕರ್ನಾಟಕ ಗೃಹ ಮಂಡಳಿಗೆ ಶೇಕಡ 16 ಬಡ್ಡಿಯಂತೆ ಹುಡ್ಕೋ ಸಂಸ್ಥೆಯಿಂದ ಸಾಲ ಪಡೆದಿರುವುದಕ್ಕೆ 27 ಕೋಟಿ ರೂ.ಗಳ ಬಡ್ಡಿಯನ್ನು ಬಾಕಿ ಕಟ್ಟಬೇಕಾಗಿದೆ. ಒಂದು ದಿವಸ ವಿಳಂಬ ಮಾಡುವುದಾದರೆ 50,000 ಫೈನ್ ಹಾಕುತ್ತೇವೆಂದು ಹೇಳಿದರು' ಎಷ್ಟು ವಸೂಲಾಯಿತು, ಅದು ಅಗತ್ಯ ಇತ್ತೇ? ಇವತ್ತು ಈ ಮನೆಗಳನ್ನು ಮಾರಾಟ ಮಾಡುವುದಕ್ಕೆ ಕರ್ನಾಟಕ ಗೃಹ ಮಂಡಲಿಯವರು ಅರ್ಜಿ ಕರೆದಿದ್ದಾರೆ, ಕೇವಲ 309 ಅರ್ಜಿಗಳು ಮಾರಾಟವಾಗಿವೆ. 253 ಜನ ಠೇವಣಿ ಕೊಟ್ಟಿದ್ದಾರೆ. 2200 ಮನೆಗಳು ಮಾರಾಟಕ್ಕೆ ಇಟ್ಟಿದ್ದು ಉಳಿದ ಮನೆಗಳನ್ನೇನು ಮಾಡುತ್ತೀರೋ ಗೊತ್ತಿಲ್ಲ. ಸುಮಾರು 350 ಕೋಟಿ ರೂಪಾಯಿಗಳನ್ನು ಅನಗತ್ಯವಾಗಿ ಕೋರಮಂಗಲದಲ್ಲಿ ಮುಂಗಡ ಕೊಟ್ಟು ನಿಮಗೇನೋ ಲಾಭದ ಆಸೆಗೋಸ್ಕರ ಸರಕಾರದ ಖಜಾನೆಯನ್ನು ಲೂಟಿ ಮಾಡಿ ಹುಡ್ಕೋದಿಂದ ಸಾಲ ಪಡೆದು ಒಂದು ರೀತಿಯ ತುಘಲಕ್ ದರ್ಬಾರ್ ನಡೆಸಿದಿರಿ.

12.30 ಪಿ.ಎಂ.

ಸ್ಟಾರ್ಟ್ ಕೂಡ ಆಗಲಿಲ್ಲ. ಬಡಬಗ್ಗರಿಗೆ ಮನೆಯೂ ಇಲ್ಲ. ಎಲೆಕ್ಷನ್ ಎಲ್ಲಾ ಮುಗಿಸಿಕೊಂಡು ಇವತ್ತು ತಣ್ಣಗೆ ಸಮಾಧಾನವಾಗಿ ತಾವು ಕೆರೆ ಅಂಗಳದಲ್ಲಿ ಕಟ್ಟಿಕೊಂಡು ಇವತ್ತು ಕುಳಿತಿದ್ದೀರಿ. ಇನ್ನು ಕೆಲವು ಆರೋಪಗಳನ್ನು ಮಾಡಿದಾಗ ವಿವರಗಳು ಬೇಕು ಎಂದು ಕೇಳಿದಿರಿ. ಸ್ವಾಮಿ, ಈಗ ಹೇಳುತ್ತಾ ಹೋಗುತ್ತೇನೆ. ಯಾವ ಯಾವ ಇಲಾಖೆಯವರು ಯಾವುದು ಬೇಕೋ ಅದನ್ನು ಬರೆದುಕೊಳ್ಳಿ. ಸ್ವಾಮಿ, ರಾಜ್ಯದ ಇತಿಹಾಸದಲ್ಲಿ ಮೊದಲಬಾರಿಗೆ ಈ ಡೀನೋಟೀಫೈ ಮಾಡುವುದಕ್ಕೆ ಮೂರು ಜನರ ರೆವಿನ್ಯೂ ಕಮಿಷನರ್, ಲಾ ಸೆಕ್ರೆಟರಿ, ಹೆಚ್‌ಯುಡಿ ಸೆಕ್ರೆಟರಿಯವರನ್ನೊಳಗೊಂಡಂತೆ ಒಂದು ಸಮಿತಿಯನ್ನು ತಾವು ಮಾಡಿದ್ದೀರಿ. ಈ ಸಮಿತಿ ಈವರೆಗೆ ಎಷ್ಟು ಬಾರಿ ಸಭೆ ಸೇರಿದೆ? ಎಷ್ಟು ಜಮೀನುಗಳನ್ನು ಡೀನೋಟೀಫೈ ಮಾಡಿದೆ? ಇದರ ವಿವರವನ್ನು ಇವತ್ತು ನೀವು ಕೊಡುತ್ತೀರಾ? ಈ ಡೀನೋಟೀಫೈ ಮಾಡುವುದಕ್ಕೆ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ 12-6-95 ರಲ್ಲಿ ಒಂದು ಸಭೆ ಮಾಡಿದ್ದೀರಿ. ಇವರ ಅಧ್ಯಕ್ಷತೆಯಲ್ಲಿ ಎಷ್ಟು ಡೀನೋಟೀಫೈ ಮಾಡಿದ್ದೀರಾ? ಅದರ ವಿವರವೇನು? ಬೆಂಗಳೂರು ಉತ್ತರ ತಾಲ್ಲೂಕು ಯಲಹಂಕ ಹೋಬಳಿ, ಕೊಡಿಗೇಹಳ್ಳಿ, ಇದರ ಗೆಜೆಟ್ ಕಾಪೀಸ್ ಇದೆ. ನಾನು 15-20 ಸ್ಯಾಂಪಲ್ ಕೊಡುತ್ತೇನೆ. ಇನ್ನು ಹೆಚ್ಚಿಗೆ ಬೇಕು ಎಂದು ಹೇಳಿದರೆ ಮಾನ್ಯ ಮುಖ್ಯಮಂತ್ರಿಗಳಿಗೆ ಅದನ್ನೂ ನಾನು ಕಳುಹಿಸಿಕೊಡುತ್ತೇನೆ. ಯಾವ ಬಡವರನ್ನು ಉದ್ಧಾರ ಮಾಡುವುದಕ್ಕೋಸ್ಕರ ಇವನ್ನು ಡೀನೋಟೀಫೈ ಮಾಡಿದಿರಿ? ಸುಪ್ರೀಂ ಕೋರ್ಟಿನ ಒಂದು ತೀರ್ಮಾನದ ಪ್ರಕಾರ ಡೀನೋಟೀಫೈ ಮಾಡುವುದಕ್ಕೆ ಕಾನೂನಿನಲ್ಲಿ ಅವಕಾಶ ಎಲ್ಲಿದೆ? ಯಾವ ಸದುದ್ದೇಶದಿಂದ ಈ ಡೀನೋಟೀಫೈಯನ್ನು ಮಾಡಿದಿರಿ? ಬೆಂಗಳೂರು ಉತ್ತರ ತಾಲ್ಲೂಕು, ಯಲಹಂಕ ಹೋಬಳಿ, ಕೊಡಿಗೆಹಳ್ಳಿ 2 ಎಕರೆ 23 ಗುಂಟೆ ನಂ.ಕಂ: 197: ಭೂಸ್ವಾಬೆ: 82 ದಿನಾಂಕ : 13-5-96 ನಾನು ಹಳೆಯದನ್ನು ಹೇಳುತ್ತಿಲ್ಲ.

ಇತ್ತೀಚಿನದ್ದು ಮಾತ್ರ ಹೇಳುತ್ತಿದ್ದೇನೆ. ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ ಕ್ಯಾತನೂರು ಗ್ರಾಮ 2 ಎಕರೆ 30 ಗುಂಟೆ ನಂ. ಯು ಡಿ ಡಿ 178 : ಎಂಎನ್‌ಎಕ್ಸ್ : 96 ದಿನಾಂಕ : 11-6-96, ಬೆಂಗಳೂರು ದಕ್ಷಿಣ ತಾಲ್ಲೂಕು, ಮಾರೇನಹಳ್ಳಿ ಗ್ರಾಮ 1 ಎಕರೆ 34 ಗುಂಟೆ ನಂ. ಯುಡಿಡಿ : 1059 : ಎಂಎನ್‌ಎಕ್ಸ್

: 95, ದಿನಾಂಕ : 7-6-96 ಬೆಂಗಳೂರು ದಕ್ಷಿಣ ತಾಲ್ಲೂಕು ಉತ್ತರ ಹಳ್ಳಿ ಹೋಬಳಿ, ಬಿಳೇಕನಹಳ್ಳಿ ಗ್ರಾಮದಲ್ಲಿ 1 ಎಕರೆ 51 ಗುಂಟೆ, ನಂ. ಯುಡಿಡಿ : 377: ಎಂಎನ್‌ಎಕ್ಸ್ : 94 : ದಿನಾಂಕ : 11-6-96 ಬೆಂಗಳೂರು ದಕ್ಷಿಣ, ಬೇಗೂರು 7 ಎಕರೆ 39 ಗುಂಟೆ, ನಂ.ಹೆಚ್‌ಯುಡಿ : 134: ಎಂಎನ್‌ಎಕ್ಸ್ : 94: ದಿ: 31-5-96, ಬೆಂಗಳೂರು ದಕ್ಷಿಣ ಬೇಗೂರು 2 ಎಕರೆ 15 ಗುಂಟೆ, ನಂ. ಯುಡಿಡಿ : 279 : ಎಂಎನ್‌ಎಕ್ಸ್ : 94 : ದಿ: 3-6-96, ಬೆಂಗಳೂರು ದಕ್ಷಿಣ ಬಿಕಿಪುರ 1 ಎಕರೆ, ನಂ. ಯುಡಿಡಿ : 116 : ಎಂಎನ್‌ಎಕ್ಸ್ : 96 : ದಿ : 29-5-96 ಬೆಂಗಳೂರು ಉತ್ತರ, ನಾಗಶೆಟ್ಟಿಹಳ್ಳಿ, ಭೂಪಸಂದ್ರ : 23 ಎಕರೆ, ನಂ . ವಸವಿ : 87: ಎಂಎನ್‌ಎಕ್ಸ್ : 94: 16-1-96, ಇದಕ್ಕೂ ಮುಂಚೆ 7-8 ಉದಾಹರಣೆಗಳನ್ನು ಹೇಳಿದ್ದೇನೆ. ಇದು ಉಳಿದಿರುವುದು 15-20, ಇದರ ಬಗ್ಗೆ ಗೆಜೆಟ್ ಕಾಪೀಸ್ ಕೂಡ ಇದೆ, ಕಳುಹಿಸಿಕೊಡುತ್ತೇನೆ. ಇದು ಯಾರಿಗೋಸ್ಕರ ಆಯಿತು? ಯಾರನ್ನು ಉದ್ಧಾರ ಮಾಡಲಿಕ್ಕೆ ಮಾಡಿದಿರಿ?

ಡೀನೋಟೀಫೈ ಮಾಡುವುದಕ್ಕೆ ಮುಂಚಿತವಾಗಿಯೇ ಮಾತನಾಡಿ ಇಷ್ಟೊಂದು ಜಮೀನುಗಳನ್ನು ಡೀನೋಟೀಫೈ ಮಾಡುವ ಉದ್ದೇಶವೇನು? ಜಮೀನುಗಳನ್ನು ಅಕ್ವೈರ್ ಮಾಡಿಕೊಳ್ಳುವ ಅಗತ್ಯವೇನು? ಬಹಳ ವರ್ಷಗಳ ನಂತರ ಡೀನೋಟೀಫೈ ಮಾಡುವುದಕ್ಕೆ ಹೊರಟಿದ್ದೀರಿ, ಈಗ ರೈತರ ಬಗ್ಗೆ ಕಳಕಳಿ ಬಂತೇ? ನನ್ನ ಹತ್ತಿರ ನೂರು ಉದಾಹರಣೆಗಳು ಇವೆ. ಅವತ್ತೇ ಮಾಡನಾಡಿದ್ದೆ. ತಾವು ವಿವರಗಳನ್ನು ಕೇಳಿದಿರಲ್ಲಾ, ಬರೆದುಕೊಳ್ಳಿ ಸ್ವಾಮಿ. ತಮಗೆ ಬೇಕಾದ ಫೋಟೋಗಳನ್ನು ಸಹಿತ ಕಳುಹಿಸಿಕೊಡುತ್ತೇನೆ. ಒಬ್ಬರು ಕಾನೂನುಬಾಹಿರವಾಗಿ ಮೂರು ಅಂತಸ್ತಿನ ಮನೆಯನ್ನು ಕಟ್ಟುತ್ತಿದ್ದಾರೆ, ನೋಡಿ ಕಳುಹಿಸಿಕೊಡುತ್ತೇನೆ. ಯಾರೋ ಒಬ್ಬ ಪ್ರಮುಖರಿಗೆ ಒಂದು ಫ್ಲೋರನ್ನು ಕೊಡುತ್ತೇನೆ ಎಂದು ಹೇಳಿದ್ದರಿಂದ ಅವನಿಗೆ ಮೂರು ಅಂತಸ್ತು ಕಟ್ಟುವುದಕ್ಕೆ ಅನುಕೂಲ ಮಾಡಿಕೊಟ್ಟಿದ್ದೀರಿ. ಅದೂ ಕಾನೂನುಬಾಹಿರವಾಗಿ ಕಟ್ಟುತ್ತಿದ್ದಾನೆ. ಅವನಿಗೆ ಕಟ್ಟಡವನ್ನು ಕಟ್ಟುವುದಕ್ಕೇ ಹೇಗೆ ಬಿಟ್ಟುಕೊಟ್ಟಿರಿ? ಇದೆಲ್ಲಾ ಹೇಗೆ ಆಯಿತು? ಸಿಐಟಿಬಿ ಯವರು ಸೈಟುಗಳನ್ನು ಕೊಡುತ್ತಾರೆ ಎಂದು ಕೇಳಿದ್ದೆ.

ಅದೂ ಸಮಾಜಸಂಸ್ಥೆಗಳಿಗೆ ಮತ್ತು ಸಾರ್ವಜನಿಕರಿಗೆ ಅನುಕೂಲವಾಗುವ ದೃಷ್ಟಿಯಿಂದ ಕೊಡುತ್ತಾರೆಂದು ಕೇಳಿದ್ದೆ. ಸ್ಪ್ರೇ ಸೈಟ್ಸ್ ಅಥವಾ ಖಾಲಿಇರುವಂಥದ್ದು ಸಿಎ ಸೈಟುಗಳು. ಅವುಗಳನ್ನು ಬರೀ ಸಂಘಸಂಸ್ಥೆಯವರಿಗೆ ಕೊಟ್ಟಿದ್ದರೆ ನಮ್ಮದೇನೂ ಅಭ್ಯಂತರವಿರಲಿಲ್ಲ. ನಾನು ನಿಮ್ಮನ್ನು ಕೇಳುತ್ತಿದ್ದೇನೆ, ನಮಾಜದಲ್ಲಿ ಬಡವರಿಗೆ ಆ ರೀತಿ ಕೊಟ್ಟಂಥ ಸಂದರ್ಭದಲ್ಲ 18-20 ಜನರಿಗೆ ಕೊಟ್ಟಂಥ ಸಂದರ್ಭದಲ್ಲಿ ಪಾಪ್ಯೂಲರ್ ಆಟೋ ಗ್ಯಾರೇಜ್ ವಸಂತನಗರ ಅಲ್ಲಿ ಬಹು ದೊಡ್ಡ ಜಾಗವನ್ನು 30 ವರ್ಷಗಳ ಕಾಲ ಲೀಸ್‌ಗೆಂದು ಕೊಟ್ಟಿದ್ದರು. ಆ ಲೀಸ್ ಪೀರಿಯಡ್ 28-2-89 ಕ್ಕೆ ಮುಗಿಯುತ್ತದೆ. ಲೀಸ್ ಮುಗಿದನಂತರ ಅದನ್ನು ವಾಪಸ್ ಪಡೆಯಬೇಕು. ಅದನ್ನು ಸಿಐಟಿಬಿಯವರು 30 ವರ್ಷಗಳ ಕಾಲ ಗುತ್ತಿಗೆಗೆ 1959ರಲ್ಲಿ ಕೊಟ್ಟಿದ್ದಾರೆ.

30ವರ್ಷಗಳ ಎಂದರೆ ಅದು 1989ಕ್ಕೆ ಮುಗಿಯುತ್ತದೆ. ಲೀಸ್ ಮುಗಿಯುವಷ್ಟರಲ್ಲಿಯೇ ಮುಖ್ಯಮಂತ್ರಿಗಳಿಗೆ ಅದನ್ನು ಖಾಯಂ ಮಾಡಿ ಎಂದು ಅರ್ಜಿ ಕೊಡುತ್ತಾರೆ. ಅಂದಿನ ಮುಖ್ಯಮಂತ್ರಿಗಳು ಈ ಬಗ್ಗೆ ಪರಿಶೀಲಿಸಿ ಎಂದು ಬಿಡಿಎ ಗೆ ರೆಕಮಂಡ್ ಮಾಡಿ ಕಳುಹಿಸಿದರು. 20-10-76 ಕ್ಕೆ ಅರ್ಜಿ ಬಂದ ನಂತರ ಬಿಡಿಎ ಅಧ್ಯಕ್ಷರು ಸೈಟನ್ನು ಮಂಜೂರು ಮಾಡುತ್ತಾರೆ. ಬಿಡಿಎ ಕಾರ್ಯದರ್ಶಿಗಳು ಸಿಎ ನಿವೇಶನವನ್ನು ಸಾರ್ವಜನಿಕ

ಉದ್ದೇಶಕ್ಕಾಗಿ ಮತ್ತು ಸಮಾಜದ ಸಂಘಸಂಸ್ಥೆಗಳಿಗೆ ಮಾತ್ರ ಕೊಡುವುದಕ್ಕೆ ಬರುತ್ತದೆ, ಖಾಸಗೀಯವರಿಗೆ ಕೊಡುವುದಕ್ಕೆ ಬರುವುದಿಲ್ಲ ಎಂದು ಹೇಳುತ್ತಾರೆ. ಅದನ್ನು ಮಂಜೂರು ಮಾಡುವುದಕ್ಕೆ ಕಾನೂನಿನಲ್ಲಿ ಅವಕಾಶ ಕೂಡ ಇಲ್ಲ ಎಂದು ಹೇಳುತ್ತಾರೆ. ಅಕ್ಟೋಬರ್ 95ರಲ್ಲಿ ಈ ವ್ಯವಹಾರದ ಬಗ್ಗೆ ಪತ್ರಿಕೆಯಲ್ಲಿ ಪ್ರಕಟವಾಯಿತು. ಸಿಎ ಸೈಟನ್ನು ಪ್ರೈವೇಟ್‌ನವರಿಗೆ ಕೊಡುವುದಕ್ಕೆ ಬರುವುದಿಲ್ಲ, ಅವರಿಗೆ ಕೊಟ್ಟಿರುವ ಲೀಸ್ ಪೀರಿಯಡ್ ಮುಗಿದಿರುವುದರಿಂದ ಬಿಡಿಎ ಅದನ್ನು ವಾಪಸ್ ಪಡೆಯಬೇಕು. ಇವತ್ತೇನಾಗಿದೆ, ಅಧು ಮಂಜೂರಾತಿಯಾಗಿ ಮಹಡಿ ಮನೆಗಳಾಗುತ್ತಿವೆ. ನಾಲ್ಕು ಫ್ಲೋರ್ ಬಿಲ್ಡಿಂಗ್ ಅಲ್ಲಿ ಬರುತ್ತಿದೆ. ಅದೂ ಮುಖ್ಯರಸ್ತೆಯಲ್ಲಿ ಬರುತ್ತದೆ. ಅದರಿಂದ ಏಳೆಂಟು ಕೋಟಿ ರೂಪಾಯಿಗಳು ಬೆಲೆ ಬಾಳಬಹುದು.

ಈ ಗುರುತರವಾದ ಆರೋಪವನ್ನು ನಾನು ಮಾಡುತ್ತಿದ್ದೇನೆ. ಒಬ್ಬರು ಪ್ರಮುಖರಿಗೆ ಒಂದು ಫ್ಲೋರನ್ನು ಕೊಡುತ್ತಾರೆ ಎಂದು ಹೇಳಿ ಅವರ ಇನ್‌ಫ್ಲೂಯೆನ್ಸ್ ಮೇಲೆ ಕೊಟ್ಟು ಕಣ್ಣುಮುಚ್ಚಿಕೊಂಡು ಕುಳಿತುಕೊಂಡಿದ್ದೀರಿ? ಅದನ್ನು ಡೆಮಾಲಿಷ್ ಮಾಡಿ, ಹರಾಜು ಮಾಡಿ. ಅದರಿಂದ 15-20 ಕೋಟಿ ರೂಪಾಯಿಗಳು ನಿಮಗೆ ಸಿಗುತ್ತದೆ. ಅದನ್ನು ಕೃಷ್ಣ ಜಲಭಾಗ್ಯ ನಿಗಮದ ಯೋಜನೆಗೆ ಖರ್ಚು ಮಾಡಿ. ಇದನ್ನು ನಾನು ಕಳೆದ ಬಾರಿಯೂ ಕೂಡ ಪ್ರಸ್ತಾಪಮಾಡಿದ್ದೆ. ಅದನ್ನು ತಾವು ಸೀರಿಯಸ್ ಆಗಿ ತೆಗೆದುಕೊಂಡರೋ ಇಲ್ಲವೋ ಗೊತ್ತಿಲ್ಲ. ಬೆಂಗಳೂರು ಸುತ್ತಮುತ್ತ ಬಿಡಿಎ ನವರು ಸ್ವಾಧೀನ ಪಡಿಸಿಕೊಂಡಿರುವ ಜಮೀನುಗಳನ್ನು ಡೀನೋಟೀಫೈ ಮಾಡುವುದಕ್ಕೆ ಮುಖ್ಯಮಂತ್ರಿಗಳ ಸಚಿವಾಲಯದಿಂದ ಪದೇ ಪದೇ ಒತ್ತಾಯವನ್ನು ತರುತ್ತಿದ್ದಾರೆ. ಈ ಅಧಿಕಾರಿಗಳು ಏನು ಮಾಡಬೇಕು? "ಸಿದ್ಧರಾಮಯ್ಯ, ಸರ್ಕಾರದ ಅಧೀನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, ಅ.ಸ.ಪತ್ರ ನಂ.ವನಇ: 9 07 : ಎಂಎನ್‌ಎಕ್ಸ್ 94 ದಿ: 5-6-96 ಮಾನ್ಯರೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ ಯಡಿಯೂರು ನಾಗಸಂದ್ರ ಗ್ರಾಮದ ಸರ್ವೆ ನಂ. 24 : 1ಎ, 23, 24 : 1ಬಿ, 24 : 2ಬಿ, 24 : 2ಬಿ, 24: 3 ಮತ್ತು 21 ರಲ್ಲಿನ ಖಾಲಿ ಇರುವ ಎರಡು ಎಕರೆ ಜಮೀನನ್ನು ಭೂಸ್ವಾಧೀನದಿಂದ ಕೈಬಿಡುವ ಬಗ್ಗೆ ಸರ್ಕಾರದ ಮುಖ್ಯಕಾರ್ಯದರ್ಶಿಗಳವರ ಅಧ್ಯಕ್ಷತೆಯಲ್ಲಿ ನಡೆದ ದಿನಾಂಕ 12-6-95ರ ಸಭೆಯ ನಡವಳಿಕೆಗಳಂತೆ ಪರಿಶೀಲಿಸಿ ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಸ.ಪ. ದಿನಾಂಕ : 14-8-95 ರಲ್ಲಿ ತಮ್ಮನ್ನು ಕೋರಿ ಅನೇಕ ನೆನಪೋಲೆಗಳ ಮೂಲಕ ನೆನಪಿಸಲಾಗಿತ್ತಾದರೂ - ಈವರೆಗೆ ತಮ್ಮಿಂದ ವರದಿಯೂ ಬಂದಿರುವುದಿಲ್ಲ. ಮಾನ್ಯ ಮುಖ್ಯಮಂತ್ರಿಯವರು ಸಚಿವಾಲಯದ ಕಡತವನ್ನು ಸಲ್ಲಿಸುವಂತೆ ನೆನಪೋಲೆಗಳು ಬರುತ್ತಿರುವುದರಿಂದ ತಮ್ಮ ವೈಯಕ್ತಿಕ ಗಮನಹರಿಸಿ ಸಂಬಂಧಿಸಿದ ವರದಿಯನ್ನು ಈ ಕೂಡಲೇ ಸರ್ಕಾರಕ್ಕೆ ಕಳುಹಿಸಿಕೊಡಬೇಕೆಂದು ಕೋರುತ್ತೇನೆ.

ಶ್ರೀ ಎಂ. ಶ್ರೀನಿವಾಸ್ : ಹಿಂದೆ ಸರ್ಕಾರದವರು ನರ್ಸರಿ ಮಾಡುವುದಕೋಸ್ಕರ ಜಾಗಗಳನ್ನು ಬಿಟ್ಟಿದ್ದರು. ಇವತ್ತು ಅದೇ ಜಾಗವನ್ನು ಮತ್ತೆ ಪರವಾನಗಿ ಮಾಡಿ ಅಲ್ಲಿ ಫ್ಲಾಟ್‌ಗಳನ್ನು ಕಟ್ಟುವುದಕ್ಕೆ ಉಪಯೋಗಿಸುತ್ತಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಬಿಡಿಎದಲ್ಲಿ ಸರ್ಕಾರದ ವರದಿ ಪ್ರಕಾರ ನಾಗರಬಾವಿ ಸರ್ವೆ ಮಂ. 47 ಈ ಜಮೀನನ್ನು ಬಿಡಿಎಯವರು ಸ್ವಾಧೀನ ಪಡೆಯುವಲ್ಲಿ ಕೆ.ಎಂ. ಲಿಂಗಯ್ಯ ಹಾಗೂ ಇತರೆ 7 ಜನರು ಸುಳ್ಳು ದಾಖಲೆ, ಮೋಸ ವಂಚನೆಯಿಂದ 17 ಲಕ್ಷ ರೂಪಾಯಿಗಳನ್ನು ಈಗಗಾಲೇ ಪಡೆದಿರುತ್ತಾರೆ.

ಅದು ಪರಿಹಾರವೆಂದು ಪಡೆಯುತ್ತಿದ್ದಾರೆ. ಮತ್ತೆ ಒಂದು ಕೋಟಿ ರೂಪಾಯಿಗಳಿಗೆ ಕ್ಲೈಮ್ ಮಾಡುತ್ತಿದ್ದಾರೆ. ನಮ್ಮ ಅಧಿಕಾರಿಗಳು ವರದಿಯನ್ನು ಕೊಡುತ್ತಾರೆ, ಈ ಎಂಟು ಜನ ವ್ಯಕ್ತಿಗಳಿಗೆ ಈ ಜಮೀನು ತಮಗೆ ಸೇರದೇ ಇದ್ದರೂ ಬಿಡಿಣಗೆ ಹಾಗೂ ನ್ಯಾಯಾಲಯಕ್ಕೆ ಜಮೀನು ತಮ್ಮದಲ್ಲದಿದ್ದರೂ ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿ ಹಾಗೂ ಬಿಡಿಎಗೆ ಹಾಜರುಪಡಿಸಿ ಮೋಸದಿಂದ 17 ಲಕ್ಷ ರೂಪಾಯಿಗಳ ಪರಿಹಾರವನ್ನು ನೀಡಿರುತ್ತಾರೆ.

ಮೊದಲನೇ ಯತ್ನದಲ್ಲಿ ಯಶಸ್ವಿಯಾದ ನಂತರ ಇನ್ನೂ ಒಂದು ಕೋಟಿ ರೂಪಾಯಿ ಹೆಚ್ಚು ಪರಿಹಾರ ಪಡೆಯುವ ದೃಷ್ಟಿಯಿಂದ ಮತ್ತೆ ನ್ಯಾಯಾಲಯದಲ್ಲಿ ಮೊಕದ್ದಮೆ ದಾಖಲು ಮಾಡಿರುತ್ತಾರೆ. ನ್ಯಾಯಾಲಯದಲ್ಲಿ ಈ ವ್ಯಕ್ತಿಗಳು ಹಿಂದೆ ಮಾಡಿರುವ ಮೋಸವನ್ನು ಸಾಬೀತುಗೊಳಿಸಿ ಹಿಂದೆ ನೀಡಿರುವ 17ಲಕ್ಷ ರೂಪಾಯಿಗಳನ್ನು ವಸೂಲಿ ಮಾಡುವುದರ ಜೊತೆಗೆ ಮುಂದೆ ನೀಡಬೇಕೆಂದು ಕೇಳಿರುವ ಒಂದು ಕೋಟಿ ರೂಪಾಯಿಗಳನ್ನು ಪ್ರಾಧಿಕಾರಕ್ಕೆ ಉಳಿಸುವ ದೃಷ್ಟಿಯಿಂದ 28.03.96 ರಂದು ಬಿಡಿಎ ಆಯುಕ್ತರು ಪತ್ರ ಬರೆದಿರುತ್ತಾರೆ. ಇಂತಹ ಕೋಟ್ಯಾಂತರ ರೂಪಾಯಿಗಳ ವ್ಯವಹಾರದಲ್ಲಿ ನಿಮಿಷಗಳಲ್ಲಿ ವರದಿ ನೀಡಬಹುದಾದ ಪೋಲೀಸರು 5 ತಿಂಗಳಾದರೂ ವರದಿ ನೀಡದೆ ಕೆ ಎಂ ಲಿಂಗಯ್ಯ ಮತ್ತು ಇತರ 7ಜನರ ಹಿತ ರಕ್ಷಿಸುತ್ತಿರುವುದಲ್ಲದೆ ಇದುವರೆಗೂ ವರದಿಯನ್ನು ಕಳುಹಿಸಿಲ್ಲ. ಬಿಡಿಎ ಮತ್ತು ಪೋಲೀಸ್‌ನವರು ವಿಳಂಬ ಮಾಡಿ ನಾಳೆ ಒಂದು ಕೋಟಿ ಕೊಡಿಸಿ ಹಂಚಿಕೊಳ್ಳುವ ಸಂಚು. ಅಧಿಕಾರಿಗಳು ಶಾಮೀಲಾಗಿ, 28.3.96 ರಂದು ಪತರ್ ಬರೆದಿರುವುದಕ್ಕೆ ಉತ್ತರ ಇಲ್ಲ. ಬಿಡಿಎ ನಲ್ಲಿ 200 ಜನ ಪೋಲೀಸರು, ಒಬ್ಬ ಎಸ್‌ಪಿ ಇದ್ದಾರೆ, ಒಬ್ಬ ಸರ್ಕಲ್ ಇನ್ಸ್‌ಪೆಕ್ಟರ್ ಇದ್ದಾರೆ. 24 ಗಂಟೆಯೊಳಗೆ ವರದಿ ತರಿಸಿ ಕೊಡಬಹುದಾಗಿತ್ತು. ಬೆಂಗಳೂರು ದಿನಾಂಕ 28.3.96ರಂದು ಪತ್ರ ಬರೆಯುತ್ತಾರೆ ಆಯುಕ್ತರವರು. ಪತ್ರದಲ್ಲಿ ತಿಳಿಸುತ್ತಾರೆ.

ಪ್ರಾಧಿಕಾರದಲ್ಲಿ ದಾಖಲೆಗಳ ರೀತ್ಯಾ ಮತ್ತು ಎಲ್.ಎ.ಸಿ 322: 87 ರ ಪ್ರಕರಣದಲ್ಲಿ ನ್ಯಾಯಾಲಯ ನೀಡಿರುವ ತೀರ್ಪಿನ ಪ್ರತಿಗಳನ್ನು ಅವಲೋಕಿಸಿದಾಗ್ಗೆ, ಈ ಮೇಲೆ ತಿಳಿಸಿದ 8 ಜನ ವ್ಯಕ್ತಿಗಳು, ಪ್ರಾಧಿಕಾರದಿಂದ ಮೋಸ, ವಂಚನೆಗಳಿಂದ ಮತ್ತು ಜಮೀನು ತಮ್ಮದಲ್ಲದಿದ್ದರೂ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ, ಪ್ರಾಧಿಕಾರಕ್ಕೆ ಮತ್ತು ಘನ ನ್ಯಾಯಾಲಯಕ್ಕೆ ಮೋಸ ಮಾಡ ತಮ್ಮ ಕುಕೃತ್ಯದಲ್ಲಿ ಸಫಲರಾಗಿದ್ದು, ಪುನಃ ಈ ಸಂಬಂಧ ಮತ್ತೆ ಪ್ರಾಧಿಕಾರದಿಂದ ಹೆಚ್ಚು ಪರಿಹಾರದ ಹಣವನ್ನು ಪಡೆಯುವ ಏಕೈಕ ದೃಷ್ಟಿಯಿಂದ ಮತ್ತೆ ಎಲ್.ಎ.ಸಿ. 110/95ನ್ನು ದಾಖಲಿಸಿರುವುದು ಕಂಡು ಬಂದು ಈ ಹಂತದಲ್ಲಿ ಈ ವ್ಯಕ್ತಿಗಳು, ಹಿಂದೆ ಮಾಡಿರಬಹುದಾದ ಮೋಸ, ವಂಚನೆ ಹಾಗೂ ಸುಳ್ಳು ದಾಖಲೆಗಳ ಸಹಾಯದಿಂದ ಹಣ ಪಡೆದಿರುವುದನ್ನು ಇಲ್ಲಿ ಗಮನಿಸಬಹುದಾಗಿದೆ. ಈ ಕಾರಣದಿಂದ ಇವರುಗಳಿಗೆ ಸರ್ಕಾರದಿಂದ 1961ನೇ ಇಸವಿಯಲ್ಲಿ ಲ್ಯಾಂಡ್ ಗ್ರಾಂಟ್ ಆಯಿತು. ಈ ಪತ್ರ 28.3.96 ರಂದು ಬರೆಯಲಾಗಿದೆ. ಇಷ್ಟು ಜನ ಅಧಿಕಾರಿಗಳು ಇದ್ದರೂ ಇದುವರೆಗೆ ವರದಿ ಕಳುಹಿಸಿಲ್ಲ. ಒಂದು ಕೋಟಿ ರೂಪಾಯಿ ಹಂಚಿಕೊಳ್ಳುವ ಕುತಂತ್ರ ನಡೆಯುತ್ತಿದೆ.

ನಿಮ್ಮ ಬಿಡಿಎ ಅಧಿಕಾರಿಗಳಿಗೆ ಏನು ಕೆಲಸ ಇದೆ? ಸೈಟ್ ಹಂಚುವುದು. ಆದರೆ ಏನು ನಡೆದಿದೆ? 17 ಲಕ್ಷ ರೂಪಾಯಿಗಳನ್ನು ವಸೂಲಿ ಮಾಡುವುದು ಒಂದು ಕಡೆ ಇದ್ದು ವರದಿ ಇನ್ನೂ ಕಳುಹಿಸಿಲ್ಲ. ಇದು ಏನನ್ನು ತೋರಿಸುತ್ತದೆ? ಆಡಳಿತ ಸರಿಯಾಗಿದೆಯೇ?

ಸ್ವಾಮಿ, 1987ನೇ ಇಸವಿಯಿಂದ ಬಿಡಿಎನಲ್ಲಿ ಫೋರ್ಜರಿ ದಾಖಲೆಗಳ ಮೂಲಕ ಸೈಟ್‌ಗಳನ್ನು ಮಾರಾಟ ಮಾಡಿರುವಂತಹ ವಿಷಯ ಎಲ್ಲರಿಗೂ ತಿಳಿದಿದೆ, ಜಗಜ್ಜಾಹೀರಾಗಿದೆ. ಮೂರು ಸಾವಿರ ನಿವೇಶನವನ್ನು ಅಮಾಯಕರಿಗೆ ಮಾರಾಟ ಮಾಡಲಾಗಿದೆ. ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೋಲೀಸ್‌ರವರ ಕಾರ್ಯಾಲಯ, ಸಿ ಓ ಡಿ ಬೆಂಗಳೂರು ಇವರು ಆಯುಕ್ತರವರಿಗೆ ದಿನಾಂಕ 10.10.85ರಂದು ಪತ್ರ ಬರೆಯುತ್ತಾರೆ. ವಿಷಯವೇನೆಂದರೆ ಫೋರ್ಜರಿ ದಾಖಲಾತಿಗಳ ಮುಖಾಂತರ ಬಿ ಡಿ ಎ ನಿವೇಶನಗಳನ್ನು ಮಾರಾಟ ಮಾಡಿರುವ ಬಗ್ಗೆ. ಅವರು ಉಲ್ಲೇಖ ಮಾಡುತ್ತಾರೆ. ಮಾಗಡಿ ಪೋಲೀಸ್ ಠಾಣೆ ಮೊಕದ್ದಮೆ ನಂಬರ್ 377 :95 ಕಲಂ 468-472-475ರ ರೀತ್ಯಾ ಮೊಕದ್ದಮೆ ದಾಖಲಾತಿ ಆಗಿದ್ದು, ನಿವೇಶನಗಳ ಮಾಹಿತಿ ಮತ್ತು ದಾಖಲಾತಿಗಳನ್ನು ಅತಿ ಶೀಘ್ರ್ರವಾಗಿ ಕಳುಹಿಸಿ ಕೊಡಲು ಕೋರಿದ್ದಾರೆ.

ಸೈಟ್ ನಂಬರ್ 14 8, 217, 4ನೇ ಹಂತ, 4ನೇ ಬ್ಲಾಕ್, ವೆಸ್ಟ್ ಆಫ್ ಕಾರ್ಡ್ ರೋಡ್, ಬೆಂಗಳೂರು - 5 ಸೈಟ್. ಎಚ್ ಎ ಎಲ್ 2ನೇ ಹಂತ - 31 ಸೈಟ್‌ಗಳು, ಎಚ್ ಎ ಎಲ್ ಮೂರನೇ ಹಂತ 25 ಸೈಟ್‌ಗಳು ದೊಮ್ಮಲೂರು ಎರಡನೇ ಹಂತ -25 ಸೈಟ್‌ಗಳು, ಜೆ.ಪಿ.ನಗರ 1ನೇ ಫೇಸ್ 36 ಮತ್ತು 17 ಒಟ್ಟು 53 ಸೈಟ್‌ಗಳು. ಜೆಪಿ. ನಗರ ಎರಡನೇ ಹಂತ-4 ಸೈಟ್. ಜೆಪಿ.ನಗರ ಮೂರನೇ ಫೇಸ್ 13 ಸೈಟ್‌ಗಳು. ಜೆಪಿ. ನಗರ ನಾಲ್ಕನೇ ಫೇಸ್ -5 ಸೈಟ್. ಜೆಪಿ ನಗರ ಐದನೇ ಫೇಸ್ -15 ಸೈಟ್‌ಗಳು ಜೆಪಿ ನಗರ ಆರನೇ ಫೇಸ್ -50 ಸೈಟ್‌ಗಳು. ಕೋರಮಂಗಲ ಎರಡನೇ ಫೇಸ್-179 ಸೈಟ್‌ಗಳು ಜಕ್ಕಸಂದ್ರ ಬ್ಲಾಕ್ 7 ಸೈಟ್‌ಗಳು. ಕೋರಮಂಗಲ ಒಂದನೇ ಬ್ಲಾಕ್-12 ಸೈಟ್‌ಗಳು. ಕೋರ ಮಂಗಲ 3ನೇ ಬ್ಲಾಕ್-3 ಸೈಟ್‌ಗಳು. ಕೋರಮಂಗಲ 4ನೇ ಬ್ಲಾಕ್-3 ಸೈಟ್‌ಗಳು. ಕೋರಮಂಗಲ 4ನೇ (ಎ) ಬ್ಲಾಕ್ 4 ಸೈಟ್‌ಗಳು. ಕೋರಮಂಗಲ 4ನೇ ಬಿ ಬ್ಲಾಕ್ 2 ಸೈಟ್‌ಗಳು. ಕೋರಮಂಗಲ 4ನೇ ಸಿ ಬ್ಲಾಕ್ 1 ಸೈಟ್. ಕೋರಮಂಗಲ 6ನೇ ಬ್ಲಾಕ್ 3 ಸೈಟ್‌ಗಳು. ಕೋರಮಂಗಲ 7ನೇ ಬ್ಲಾಕ್. ಆರು ಸೈಟ್‌ಗಳು. ಕೋರಮಂಗಲ 8ನೇ ಬ್ಲಾಕ್-17 ಸೈಟ್‌ಗಳು. ಎಸ್‌ಟಿ ಬೆಡ್-1 ಸೈಟ್, ಜಕ್ಕಸಂದ್ರ ಬ್ಲಾಕ್-5 ಸೈಟ್. ಎಚ್‌ಎಎಲ್ ಸೆಕೆಂಡ್ ಸ್ಟೇಜ್ - 17 ಸೈಟ್‌ಗಳು ಹೀಗೆ ಒಟ್ಟು ಸುಮಾರು 500 ಕ್ಕೂ ಹೆಚ್ಚಿಗೆ ಬೇನಾಮಿ ದಾಖಲಾತಿಗಳನ್ನು ಸೃಷ್ಟಿ ಮಾಡಿ ಈ ಬಗ್ಗೆ ಸಿಓಡಿ ಅವರು ನಿವೇಶನಗಳ ವಿವರವನ್ನು ದಿನಾಂಕ 10.10.95ರಂದು ಕೇಳಿರುತ್ತಾರೆ. ಇಲ್ಲಿ ಬಿಡಿಎ ನಿಮ್ಮ ಕೈಯಿಲ್ಲಿದೆ.

ಮಾನ್ಯ ಮುಖ್ಯ ಮಂತ್ರಿಗಳೇ ತಾವ ಹೇಳಿ. 2 ಜನ ಐಎಎಸ್ ಅಧಿಕಾರಿಗಳು, 10 ಜನ ಕೆಎಎಸ್ ಅಧಿಕಾರಿಗಳು ಇದ್ದಾರೆ. ಒಂದು ಅಧಿಕಾರಿಗಳ ಘಟಕ ಇದೆ. ಒಂದು ಇಂಜಿನಿಯರಿಂಗ್ ವಿಭಾಗ, ಒಂದು ಉಪ ವಿಭಾಗ ಇದೆ. ಇವರೆಲ್ಲಾ ಏನು ಕೆಲಸ ಮಾಡುತ್ತಿದ್ದಾರೆ? ಪೋಲೀಸ್‌ನವರು ಫೋರ್ಜರಿ ದಾಖಲೆಗಳ ಬಗ್ಗೆ ಕಳುಹಿಸಿದ್ದರೂ ಸಹ ಯಾರದ್ದಾದರೂ ಸೈಟ್‌ಗಳನ್ನು ವಜಾ ಮಾಡಿದ್ದೀರಾ? ಹರಾಜು ಮಾಡಿದ್ದಾರಾ? ಎಲ್ಲಾ ಸೈಟ್‌ಗಳೂ ಸಹ ಬೆಂಗಳೂರಿನ ಅತಿ ಪ್ರಮುಖವಾದಂತಹ ಸ್ಥಳದಲ್ಲಿವೆ. ಈ ಒಂದು ಸೈಟನ್ನು ಬಹುಶಃ ಬಹಿರಂಗವಾಗಿ ಹರಾಜು ಮಾಡಿದ್ದರೆ ಸುಮಾರು 30 ರಿಂದ 50 ಲಕ್ಷದವರೆಗೆ ದುಡ್ಡು ಬಿಡಿಎಗೆ ಬರುತ್ತಿತ್ತು. ಸಿಓಡಿ ತನಿಖೆಗೆ ಬರೆಯುತ್ತಾರೆ. ಫೋರ್ಜರಿ ಪ್ರಕರಣ ಆಗಿದೆ. ಎಂದು ಪತ್ರ ಬರೆದರೆ ಅಧಿಕಾರಿಗಳು ತಕ್ಷಣ ಏಕೆ ಕ್ರಮ ತೆಗೆದುಕೊಳ್ಳಲಿಲ್ಲ. ವಿವರಗಳು ಬೇಕು ಒಂದು ಕೇಳಿದ್ದಕ್ಕೆ ವಿವರ ಕೊಟ್ಟಿದ್ದೇನೆ. ಈ ನಿಮಿಷದವರೆಗೆ ನೀವು ಕ್ರಮ ತೆಗೆದುಕೊಳ್ಳಲಿಲ್ಲ, ಉದ್ದೇಶ ಏನು?

ಉದ್ದೇಶ ಏನೆಂದರೆ ಬಿಡಿಎ ಅಧಿಕಾರಿಗಳನ್ನು ಮೈಮೇಲೆ ಹಾಕಿಕೊಂಡರೆ ಅನೇಕ ಸಂದರ್ಭದಲ್ಲಿ ದುರುಪಯೋಗ ಆಗಿರುವಂತಹ ವಿಷಯದಲ್ಲಿ ದೊಡ್ಡವರ ಬಣ್ಣ ಬಯಲಾಗುತ್ತದೆ ಎಂದು ಕ್ರಮ ತೆಗೆದುಕೊಡಿಲ್ಲ. ಕ್ರಮ ತೆಗೆದುಕೊಳ್ಳಲು ಇಚ್ಛೆ ಇಲ್ಲ. ಸುಮಾರು 40-45 ಲಕ್ಷ ಜನ ಅರ್ಜಿದಾರರು ಸೈಟ್‌ಗಳಿಗೆ ಅರ್ಜಿ ಹಾಕಿಕೊಂಡಿದ್ದಾರೆ. ಅವರಿಗೆ ಸೈಟ್‌ಗಳನ್ನು ಕೊಡುವಂತಹ ಯೋಗ್ಯತೆ ನಿಮ್ಮ ಸರ್ಕಾರಕ್ಕೆ ಇಲ್ಲ. ಯಾವುದೇ ಬಿಡಿಎನ ತಪ್ಪಿತಸ್ಥ ಅಧಿಕಾರಿಯನ್ನು ನೀವು ಮನೆಗೆ ಕಳುಹಿಸಿಲ್ಲ. ಸಾವಿರಾರು ರೂಪಾಯಿಗಳ, ಸೈಟ್‌ಗಳ ದುರುಪಯೋಗ ನಡೆದಿದೆ. ಅವರ ಮೇಲೆ ಕ್ರಮ ತೆಗೆದುಕೊಳ್ಳದೇ ಇರುವಂತಹವರ ಮೇಲೆ ನೀವು ಅಧಿಕಾರದಲ್ಲಿ ಮುಂದುವರಿಯಬೇಕೆ? ಎಲ್ಲಿಯವರೆಗೆ ನೀವು ಇರಬೇಕು? ಎಲ್ಲಿಯವರೆಗೆ ದುರುಪಯೋಗ ಆಗಿದೆ ಎಂದು ವಿಚಾರ ಮಾಡಿದರೆ ಮಾನ್ಯ ಲೋಕ ಸಭೆಯ ಉಪಾಧ್ಯಕ್ಷರಾಗಿದ್ದ ಶ್ರೀ ಮಲ್ಲಿಕಾರ್ಜುನಯ್ಯನವರಿಗೆ ಒಂದು ಸೈಟ್ ಕೊಟ್ಟಿದ್ದೀರಿ. 80-50 ಅಳತೆಯ ಸೈಟ್. ಅವರಿಗೆ ಸೈಟ್ ಕೊಡುವಾಗ ದಿನಾಂಕ 20-10-90ರಂದು ಪತ್ರ ಬರೆದಿದ್ದಾರೆ. ಅವರ ಹೆಸರಿಗೆ ದಿನಾಂಕ 20-10-90 ರಂದು ಅಲಾಟ್ ಆಯಿತು 21 ರಂದು ಸ್ವಾಧೀನ ಪತ್ರ ಕೊಟ್ಟರು. ದಿನಾಂಕ 18-5-90ರಂದು ಶ್ರೀ ಮಥಾಯ್ ಸ್ವಾಮಿ ಎನ್ನುವವರಿಗೆ ಅಲಾಟ್ ಮಾಡಲಾಗಿದೆ. ಫೇಕ್ ಸೈಟ್ ಅನ್ನು ಅಲಾಟ್ ಮಾಡಲಾಗಿದೆ. ಲೆಡ್ಜರ್‌ನಲ್ಲಿ ಎಂಟ್ರಿ ಇಲ್ಲ. ಬುಕ್‌ನಲ್ಲಿ ಎಂಟ್ರಿ ಮಾಡಲಿಲ್ಲ. ಲೋಕಸಭೆಯ ಉಪಾಧ್ಯಕ್ಷರಾಗಿದ್ದವರಿಗೆ ಕೊಟ್ಟಂಥ ಸೈಟನ್ನು ಮತ್ತೊಬ್ಬರಿಗೆ ಕೊಟ್ಟಿರುವುದು. ಸಿಓಡಿ ರಿಪೋರ್ಟ್ ಬಂದರೂ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳಲಿಲ್ಲ. ಅವರಿಗೆ ನೀಡಿದ್ದಂತಹ ಸೈಟನ್ನು ಹರಾಜು ಹಾಕಿದ್ದರೆ ಸುಮಾರು ಕೋಟಿ ರೂಪಾಯಿ ಬೆಲೆ ಬಾಳುತ್ತಿತ್ತು. ತಾವು ಮಾನ್ಯ. ಉಪಾಧ್ಯಕ್ಷರಾಗಿದ್ದು ಶ್ರೀ ಮಲ್ಲಿಕಾರ್ಜುನಯ್ಯನವರಿಗೆ ಕೊಟ್ಟಂಥ ಸೈಟನ್ನು ಅವರ ಸ್ವಾಧೀನಕ್ಕೆ ಕೊಡದೆ ಹಣ ಪಡೆದು ಅದನ್ನು ಬೇರೆಯವರಿಗೆ ಕೊಡುವುದಾದರೆ ಇದರ ಬಗ್ಗೆ ಏನು ಹೇಳಬೇಕು? ಪ್ರತಿಷ್ಠಿತ ವ್ಯಕ್ತಿಗಳ ಸ್ಥಿತಿ ಹೀಗಾದರೆ ಇನ್ನು ಜನಸಾಮಾನ್ಯರ ಗತಿ ಏನು ಆಗಬಹುದು? ಒಂದು ಆಶ್ಚರ್ಯದ ಸಂಗತಿ ಅಂದರೆ ಶ್ರೀ ಮಥಾಯ್ ಸ್ವಾಮಿ ಅವರಿಗೆ ದಿನಾಂಕ 18-5-90 ರಂದು ಕೊಟ್ಟಿರುವಂತಹ ಸೈಟ್ ಫೇಕ್ ಅಲ್ಲ. ಅದನ್ನು ರಿಜಿಸ್ಟರ್‌ನಲ್ಲಿ ಬರೆದು ಕೊಡಲಾಯಿತು.

ಸರ್ಕಾರದ ದುಡ್ಡು ತೆಗೆದುಕೊಳ್ಳಲಿಲ್ಲ ನೇರವಾಗಿ ಏನೋ ಒಳ ವ್ಯವಹಾರ ಮಾಡಿಕೊಂಡು. 50 ಲಕ್ಷ ಬೆಲೆ ಬಾಳುವಂತಹ ಸೈಟನ್ನು ಕೊಡುವಾಗ ಅಧಿಕಾರಿಗಳ ಲೆವೆಲ್‌ನಲ್ಲಿ ರಿಜಿಸ್ಟರ್ ಆಯಿತು ಅವರಿಗೆ ಪೊಸೆಷನ್ ಸರ್ಟಿಫಿಕೇಟ್ ಸಹಕೊಟ್ಟರು. ಒಬ್ಬ ಡೆಪ್ಯೂಟಿ ಸ್ಪೀಕರ್, ಲೋಕಸಭೆ ಇವರಿಗೆ ನೀಡಿದ್ದಂಥ ಸೈಟನ್ನು ಇನ್ನೊಬ್ಬರಿಗೆ ಮಾರಿ, ಆ ವ್ಯಕ್ತಿಗೆ ಟೋಪಿ ಹಾಕುವಂತಹ ಘಟನೆ ನಡೆದಿದ್ದರೆ, ಅದು ನಿಮಗೆ ಗೊತ್ತಾಗಲಿಲ್ಲವೇ? ಈ ವ್ಯವಹಾರ ನಿಮಗೆ ತಿಳಿದಿರಲಿಲ್ಲವೇ? ಈ ವ್ಯವಹಾರ ನಿಮ್ಮ ಸರ್ಕಾರಕ್ಕೆ ಗೊತ್ತಿಲ್ಲವೇನು? ಮಾನ್ಯ ಮುಖ್ಯಮಂತ್ರಿಗಳು ಬಿಡಿಎ ಅನ್ನು ತಮ್ಮ ಹತ್ತಿರವೇ ಇಟ್ಟುಕೊಂಡಿದ್ದೀರಿ. ನಾನು ನನ್ನಲ್ಲಿರುವ ಫೈಲನ್ನು ತಮಗೆ ಕಳುಹಿಸಿಕೊಡುತ್ತೇನೆ. ಇಷ್ಟೆಲ್ಲಾ ಅವ್ಯವಹಾರ ನಡೆದಿದ್ದರೂ ನಿಮಗೆ ಏನೂ ಗೊತ್ತಾಗಲಿಲ್ಲವಾ? ಹಾಗಿದ್ದರೆ ನೀವು ಅಧಿಕಾರದಲ್ಲಿ ಮುಂದುವರಿಯಬಹುದಾ ಹೇಳಿ.

ಶ್ರೀ ಹೆಚ್.ಎನ್. ನಂಜೇಗೌಡ : ಮಾನ್ಯ ಉಪಾಧ್ಯಕ್ಷರೆ, ಶಾಸಕರ ಗತಿ ಏನಾಗಿದಿಯೆಂದರೆ, ನಂಜೇಗೌಡರಿಗೆ ಮತ್ತು ಗಂಗಾಧರ ಎನ್ನುವ ಇಬ್ಬರಿಗೂ ಸೈಟ್ ಕೊಟ್ಟರು. ನಂತರ ಅದರ ಪೊಸಿಷನ್ ಸರ್ಟಿಫಿಕೇಟ್ ಕೊಟ್ಟು ಸೇಲ್ ಡೀಡ್ ಮಾಡಿದ. ಬಳಿಕ ಅದನ್ನು ಡೀ-ನೋಟಿಫೈ ಮಾಡುತ್ತಾರೆ. ತದನಂತರ, ಅಲ್ಲೊಂದು

ಕಾಂಪ್ಲೆಕ್ಸ್ ಕಟ್ಟುತ್ತಾರೆ, ಕೋರ್ಟಿಗೆ ಹೋಗುತ್ತಾರೆ. ಡಿ-ನೋಟಿಫೈ ಮಾಡುವುದೇಕೆಂದರೆ ಕೋರ್ಟಿಗೆ ಹೋಗಿ ಅಲೆದಾಡಿಕೊಳ್ಳಲಿ ಎಂದು. ಕಳೆದ ಸಾರಿ ನಾನು ಮಾತನಾಡುವಾಗ ನಿರ್ದಿಷ್ಟ ಸೈಟ್‌ಗಳ ಉದಾಹರಣೆ ಕೊಟ್ಟು ಅಪಾದಿಸಿದ್ದೆ. ಹಣ ಕಟ್ಟಿದ ನಂತರ ಚಲನ್ ಕೊಡಬೇಕಲ್ಲಾ. ಬ್ಯಾಂಕಿನ ಮ್ಯಾನೇಜರ್ ಸೀಲ್ ಫೋರ್ಜರಿ ಯಾಗಿದ್ದು ಹಣ ಬ್ಯಾಂಕಿನಲ್ಲಿ ಕಟ್ಟಿಲ್ಲ. ಸದರಿ ಪ್ರಕರಣವನ್ನು ತನಿಖೆ ಮಾಡುತ್ತೇವೆಂದು ಹೇಳಿದರು. ಅದಕ್ಕೋಸ್ಕರವೇ ನಾನು ಹೇಳಿದ್ದುದು, It has become redundant; better you close it.

ಶ್ರೀ ಬಿ.ಎಸ್. ಯಡಿಯೂರಪ್ಪ : ನನ್ನ ಬಳಿ ಮೂರು ಕಡತಗಳಿವೆ. ಅದರಲ್ಲಿರುವ ಒಂದೊಂದೇ ವಾಕ್ಯ ಹೇಳುತ್ತೇನೆ. ವಿರೋಧ ಪಕ್ಷದ ನಾಯಕರಾದ ಯಡಿಯೂರಪ್ಪನವರು ದಾಖಲೆ ಇಲ್ಲದೆ ಮಾತನಾಡುತ್ತಿದ್ದಾರೆಂದು ನೀವು ಹೇಳುತ್ತೀರಲ್ಲ, ನಾನು ಕೊಡುವ ವಿವರಗಳಲ್ಲಿ ಒಂದೇನಾದರೂ ವ್ಯತ್ಯಾಸವಿದ್ದರೆ ಮುಖ್ಯಮಂತ್ರಿಗಳೇ ಉತ್ತರ ಕೊಡಲಿ. ಶ್ರೀ ಟಿ.ಹೆಚ್. ಕೆಂಪಯ್ಯ, ಉಪ ಆಯುಕ್ತರು ಸ್ಟ್ಯಾಂಪ್ಸ್ ಅನ್ನು ಅಪಮೌಲ್ಯ ಮಾಡಿದ್ದು, ರಾಜಾಜಿನಗರದ ಎಂಬತ್ತು ಅಡಿ ರಸ್ತೆಯಲ್ಲಿರುವ 10-ಇ ನಿವೇಶನದ ಅಂಚಿನ ಭೂಮಿಯನ್ನು ತಮಗೆ ನೀಡಬೇಕೆಂದು ಮನವಿ ಸಲ್ಲಿಸಿದಾಗ ಆಯುಕ್ತರು ಈ ಅಂಚಿನ ಜಾಗವನ್ನು ಕೆಂಪಯ್ಯನವರಿಗೆ ನೀಡುವಂತೆ ಆದೇಶಿಸಿದರು. ಆದರೆ, ಈ ಅಂಚಿನ ಭೂಮಿಯನ್ನು ಕೊಡುವುದಕ್ಕೆ ಬರುವುದಿಲ್ಲ. ಎಂಬತ್ತು ಅಡಿ ರಸ್ತೆಯಲ್ಲಿರುವ ಈ ಅಂಚಿನ ಭೂಮಿಯನ್ನು ಕೊಡುವುದಕ್ಕೆ ಬರುವುದಿಲ್ಲವೆಂದು ಗುಮಾಸ್ತರು ವರದಿ ಕೊಟ್ಟರು. ಆಯುಕ್ತರು ಸ್ಥಳ ಪರೀಕ್ಷೆ ಮಾಡಲು ಹೋಗುತ್ತಾರೆ. ಅದನ್ನು ಹರಾಜು ಮಾಡಿ ಎಂದು ಹೇಳಿದ್ದರೂ ಎರಡು ವರ್ಷಗಳಾಗುತ್ತಾ ಬಂದರೂ ಹರಾಜು ಮಾಡಿಲ್ಲ. ಬಿ.ಡಿ.ಎ.ನಲ್ಲಿ ಲೀಗಲ್ ಕನ್ಸಲ್‌ಟೆಂಟ್ ಆಗಿರುವ ದಿವಾಕರ್‌ರವರು ಕೋಟ್ಯಾಂತರ ರೂಪಾಯಿ ಬೆಲೆ ಬಾಳುವ ಈ ಭೂಮಿಯನ್ನು ಹರಾಜು ಮಾಡದಿರುವ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದರು. ಇದಾದ ನಂತರ ಹರಾಜು ಹಾಕಲು 30-8-95ರಂದು ಪತ್ರಿಕಾ ಪ್ರಕಟಣೆ ಹೊರಡಿಸಲು ಆದೇಶಿಸಿದ ನಂತರ ನಿವೇಶನದ ಹರಾಜಿನಿಂದ ಬಿ.ಡಿ.ಎ.ಗೆ ಒಂದು ಕೋಟಿ ರೂಪಾಯಿಗಿಂತ ಹೆಚ್ಚಾಗಿ ಹಣ ಬಂದಿದೆ. ಉಳಿದ ಏಳು ನಿವೇಶನಗಳನ್ನು ಇದುವರೆವಿಗೂ ಹರಾಜು ಹಾಕಿಲ್ಲ. ಈ ಪೈಕಿ 10-ಜಿ ನಿವೇಶನವನ್ನು ರೂಪಾ ಎನ್ನುವವರು ವಶಪಡಿಸಿಕೊಂಡು ಕಟ್ಟಡ ಕಟ್ಟುತ್ತಿರುವುದರಿಂದ ಇದನ್ನು ತೆರವುಗೊಳಿಸಲು ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಅಲ್ಲದೆ, ಬಿ.ಡಿ.ಎ.ಗೆ ತಪ್ಪು ಮಾಹಿತಿ ನೀಡಿದಂಥ ನಿಮ್ಮ ಅಧಿಕಾರಿ ಉಪ ಆಯುಕ್ತರಾದ ಕೆಂಪಯ್ಯನವರ ಮೇಲೆ ಇದುವರೆವಿಗೂ ಕ್ರಮ ತೆಗೆದುಕೊಳ್ಳಲಿಲ್ಲ ಆ ಕುರಿತ ಸಂಪೂರ್ಣ ದಾಖಲೆ ನನ್ನಲ್ಲಿದ್ದು ಅದರ ವಿವರ ಕೊಡುತ್ತೇನೆ. ಇದೊಂದು ದೊಡ್ಡ ಹಗರಣ. ಇನ್ನೊಂದು ವಿಚಾರ ಹೇಳಬೇಕೋ, ಬಿಡಬೇಕೋ ಗೊತ್ತಿಲ್ಲ.

ಯಾರು, ಏನೆಂದು ಮುಖ್ಯಮಂತ್ರಿಗಳೇ ಪತ್ತೆ ಹಚ್ಚಬೇಕು. ಏನೆಂದರೆ, ಬೆಂಗಳೂರು ದಕ್ಷಿಣ ತಾಲ್ಲೂಕಿನ ಕೆಂಗೇರಿ ಗ್ರಾಮದ ಸರ್ವೆ ನಂಬರ್ 38ರಲ್ಲಿ 0.37 ಗುಂಟೆ ಕಬರಸ್ಥಾನ, ಸರ್ಕಾರಿ ಸ್ಮಶಾನದ ಜಾಗ ಮತ್ತು ಸರ್ವೆ ನಂಬರ್ 39:1ರಲ್ಲಿ 36 ಗುಂಟೆ ಸೀತಾರಾಮ ಟ್ರಸ್ಟ್‌ಗೆ ಸೇರಿದಂಥ ಜಮೀನಾಗಿದ್ದು, ಇಲ್ಲಿನ ಒಂದು ಎಕರೆ ಮೂವತ್ತೂರು ಗುಂಟೆ ಜಾಗದಲ್ಲಿ ಒಂದು ಪೆಟ್ರೋಲ್‌ಬಂಕ್ ಕಟ್ಟಡ ನಿರ್ಮಾಣವಾಗುತ್ತಿದೆ, ಅದರ ಫೋಟೋ ಸಹ ನನ್ನ ಹತ್ತಿರವಿದೆ. ಒಂದು ಮುಜರಾಯಿ ಇಲಾಖೆಗೆ ಸೇರಿದರೆ ಮತ್ತೊಂದು ಸ್ಮಶಾನದ ಜಮೀನಾಗಿದೆ. ಜಮೀನಿನ ಬಗ್ಗೆ ಯಾವುದೇ ದಾಖಲೆಗಳಿಲ್ಲದೆ, ಪೆಟ್ರೋಲ್ ಬಂಕ್ ನಿರ್ಮಾಣವಾಗುತ್ತಿದೆ, ಅವರು ಸ್ಮಶಾನದ

ಜಾಗವನ್ನೂ ಸಹ ಬಿಡಲಿಲ್ಲ. ಅಲ್ಲಿ ಹೇಗೆ ಪೆಟ್ರೋಲ್ ಬಂಕ್ ನಿರ್ಮಾಣವಾಗುತ್ತದೆ? ಕನಿಷ್ಠ ಐದು ಕೋಟಿ ರೂಪಾಯಿಗಳಷ್ಟು ಆ ಜಮೀನು ಬೆಲೆ ಬಾಳುತ್ತದೆ, ಯಾರು ಈ ಪುರುಷರು? ಇವರ ಇನ್‌ಫ್ಲೂಯೆನ್ಸ್ ಏನು? ಬಹಳ ದೊಡ್ಡವರು. ಇವರ ಬಗ್ಗೆ ಹೇಳಿದರೆ ವೈಯಕ್ತಿಕವಾಗಿ ಆರೋಪ ಮಾಡುತ್ತಾರೆಂದು ನಿಮಗೆ ಅನ್ನಿಸಬಹುದು. ಇದರಲ್ಲಿ ಪ್ರಧಾನಿಯವರ ಬೀಗರಾದ ತಮ್ಮಣ್ಣ ಎಂಬುವವರು ಚೀಫ್ ಡೆವಲಪ್‌ಮೆಂಟ್ ಆಫೀಸರ್ ಆಗಿದ್ದು, ಅವರು ಮಾಡುತ್ತಿರುವಂಥ ಚೀಪ್ ರೇಟ್ ಕೆಲಸ ಇದಾಗಿದೆ. ಅವರ ಕಡೆಯವರೇ ಇದನ್ನು ಮಾಡುತ್ತಿರುವುದು. ಅವರ್‍ಯಾರೆಂದು ನನ್ನ ಬಾಯಿಂದ ಹೇಳಿಸಬೇಡಿ. ತಾವು ಐದು ನಿಮಿಷಗಳ ಕಾಲ ಸದನವನ್ನು ಮುಂದೂಡಿ ನನ್ನ ಜೊತೆ ಬನ್ನಿ ತೋರಿಸುತ್ತೇನೆ.

ನಾನು ಹೇಳುವುದರಲ್ಲಿ ಯಾವುದಾದರೊಂದು ವ್ಯತ್ಯಾಸವಿದ್ದರೆ ನೀವು ಅಧಿಕಾರದಲ್ಲಿ ಮುಂದುವರಿಯಬೇಕೆ? ಸರ್ಕಾರ ಅಧಿಕಾರದಲ್ಲಿರಬೇಕೇ? ಎಂದು ಹೇಳಿ. ಬೆಂಗಳೂರಿನ ಸುತ್ತಮುತ್ತಲೂ ಹಗಲು ದರೋಡೆಯಾಗುತ್ತಿರಬೇಕಾದರೆ, ಸುಮ್ಮನೆ ಕೈಕಟ್ಟಿಕೊಂಡು ಕುಳಿತಿದ್ದೀರಲ್ಲ, ಪರಿಸ್ಥಿತಿ ಹೀಗಿದ್ದರೂ ನೀವೇ ಅಧಿಕಾರದಲ್ಲಿ ಮುಂದುವರಿಯುತ್ತಿರುವುದು ನಿಮಗೆ ಶೋಭೆ ತರುತ್ತದೆಯೇ? ಮತ್ತೊಂದು ವಿಷಯ ಪ್ರಸ್ತಾಪಿಸುತ್ತೇನೆ. ಇದು ಮುಖ್ಯಮಂತ್ರಿಗಳಿಗೆ ಗೊತ್ತಿಲ್ಲದಿದ್ದರೆ ಗಾಬರಿಯಾಗುತ್ತದೆ, ಗೊತ್ತಿದ್ದರೆ ಬಹುಶಃ ಏನೂ ಆಗುವುದಿಲ್ಲ. ಬಿಡದಿ ಬಳಿ ರಾಮನಗರ ತಾಲ್ಲೂಕಿನ ಏಳು ಗ್ರಾಮಗಳಲ್ಲಿ ಸುಮಾರು 3,417 ಎಕರೆ ಮೂರು ಗುಂಟೆಯಷ್ಟು ಜಮೀನಿನ ವಿಸ್ತೀರ್ಣದಲ್ಲಿ ಬೆಂಗಳೂರಿನ ಕೆ.ಐ.ಎ.ಡಿ.ಬಿ.ಯಲ್ಲಿ ಚೀಫ್ ಡೆವಲಪ್‌ಮೆಂಟ್ ಆಫೀಸರ್ ಆಗಿರುವ ತಮ್ಮಣ್ಣನವರು ಸರ್ವೆ ಮಾಡಿಸಿದರು. ಕೈಗಾರಿಕಾ ಅಭಿವೃದ್ಧಿಗೋಸ್ಕರ ಕೆ.ಐ.ಎ.ಡಿ.ಬಿ.ಯವರು ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಸರ್ವೆ ಮಾಡಿಸಿದರು. ಸರ್ವೆ ಮಾಡಿಸಿದ ನಂತರ ಆ ಜಾಗಕ್ಕೆ ಬಂದವರ್‍ಯಾರೆಂದರೆ ಚಾಮುಂಡೇಶ್ವರಿ ಡೆವಲಪರ್ಸ್, ಪ್ರಭಾಕರ್ ಎನ್ನುವವರು, ಮತ್ತು ಈಗಲ್‌ಟನ್ ಅವರು ಬಂದರು. ಈಗ ಅಲ್ಲಿ ಏನಾಗಿದೆಯೆಂದರೆ, ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ ಒಂದು ಸಾವಿರ ಎಕರೆಗಳಿಗೆ ಕಾಂಪೌಂಡ್ ಹಾಕಿದ್ದಾರೆ. ಈ ಪೈಕಿ ಸರ್ವೆ ನಂಬರ್ 83ರಲ್ಲಿ 160 ಎಕರೆ 29 ಗುಂಟೆ ಸರ್ಕಾರದ ಗೋಮಾಳದ ಜಮೀನು ಸೇರಿದೆ. ಕನಿಷ್ಠ ಒಂದು ಸಾವಿರ ಕೋಟಿ ರೂಪಾಯಿಗಳಾಗಬಹುದು, ಒಂದುಸಾವಿರ ಎಕರೆಗಳಿಗೆ ಬೇಲಿ ಹಾಕಿದ್ದಾರೆ.

ಶ್ಯಾನಮಂಗಲ, ಬಾಣಂದೂರು ಮತ್ತು ಬಿಲ್ಲಕೆಂಪನಹಳ್ಳಿಯಲ್ಲಿ ಒಂದು 'ರಿಸಾರ್ಟ್ ಮಾಡುತ್ತಾರೆಂಬ ಉದ್ದೇಶಕ್ಕಾಗಿ ಈ ಗ್ರಾಮಗಳಿಗೆ ಸೇರಿರುವ 202 ಎಕರೆ 17 ಗುಂಟೆ ನಿವೇಶನ ಏಲಿನೇಷನ್ ಆಗಿದ್ದುಆದರೆ, ಒಂದು ಸಾವಿರ ಎಕರೆಗಳಷ್ಟು ಜಮೀನನ್ನು ಸ್ವಾಧೀನಕ್ಕೆ ತೆಗೆದುಕೊಂಡಿದ್ದಾರೆ. ಅದರಲ್ಲಿ ಪುಟ್ಟರೇವಯ್ಯನವರಿಗೆ ಸೇರಿರುವ 14 ಎಕರೆಗಳಷ್ಟು ಸ್ವಂತ ಜಮೀನಿಗೂ ಸಹ ಬೇಲಿ ಹಾಕಿದ್ದಾರೆ. ಕೆ.ಐ.ಎ.ಡಿ.ಬಿ.ನಿಂದ ದಿನಾಂಕ 3.7.96ರಂದು ಭೂ ಸ್ವಾಧೀನಕ್ಕಾಗಿ ನೋಟೀಸ್ ಹೋಗುತ್ತದೆ ಮತ್ತು ಅದು ಗೆಜೆಟ್‌ನಲ್ಲಿ ದಿನಾಂಕ 4.7.96ರಂದು ಮುದ್ರಿತವಾಗುತ್ತದೆ. ಇದರ ಬಗ್ಗೆ ತಡೆಯಾಜ್ಞೆ ತರಲು ಕೆ.ಐ.ಎ.ಡಿ.ಬಿ. ಯವರು ತಕ್ಷಣವೇ ಆರು ಕೋರ್ಟುಗಳಲ್ಲಿ ಕೇವಿಯಟ್ ಹಾಕುತ್ತಾರೆ. ಕೆ.ಐ.ಎ.ಡಿ.ಬಿ.ಯಲ್ಲಿ ರಾಮಸ್ವಾಮಿರೆಡ್ಡಿ ಎಂಬುವವರು ವಿಶೇಷ ಭೂ ಸ್ವಾಧೀನ ಅಧಿಕಾರಿಗಳಾಗಿದ್ದರು. ಅವರು ಅಲ್ಲಿನ ಸುತ್ತಮುತ್ತಲಿನ ಜಮೀನಿನವರನ್ನೆಲ್ಲಾ ಕರೆಯಿಸುತ್ತಾರೆ. ಮೊದಲು ಏನು ನಾಟಕ ಮಾಡಿದರೆಂದರೆ, ಕೆ.ಐ.ಎ.ಡಿ.ಬಿ.ಯವರೇ ನೋಟಿಫಿಕೇಷನ್ ಹೊರಡಿಸಿದರು. Acquisition proposals for formation of industrial area at Bidadi, Ramangar Taluk ಸುಮಾರು 3417 ಎಕರೆಗಳಷ್ಟು ಜಮೀನನ್ನು ಸರ್ವೆ

ಮಾಡಿಸಿದ್ದಾರೆ. ಸರ್ವೆ ಮಾಡಿಸಿದ ನಂತರ ಡೆವಲಪ್‌ಮೆಂಟ್ಸ್‌ಗೆ ಜಮೀನು ತೆಗೆದುಕೊಳ್ಳುವುದಿಲ್ಲ. ಯಾರೋ ಒಬ್ಬ ಬಿಲ್ಡರ್ ಬಂದು ಅಲ್ಲಿನ ರೈತರನ್ನು, ಹೆದರಿಸುತ್ತಾನೆ, ಬೆದರಿಸುತ್ತಾನೆ. ಅಂತೆಯೇ ಕೆ.ಐ.ಎ.ಡಿ.ಬಿ.ಯ ನಿಮ್ಮ ವಿಶೇಷ ಭೂ ಸ್ವಾಧೀನ ಅಧಿಕಾರಿಯಾದ ರಾಮಸ್ವಾಮಿರೆಡ್ಡಿಯವರು ಅಲ್ಲಿಗೆ ಹೋಗಿ ನೋಡಿ, ಜಮೀನನ್ನು ಸ್ವಾಧೀನ ಮಾಡಿಕೊಳ್ಳುತ್ತೇವೆ, ನಿಮಗೆ ಐವತ್ತು ಸಾವಿರ ರೂಪಾಯಿಗಳೂ ಸಹ ಸಿಗುವುದಿಲ್ಲವಾದ್ದರಿಂದ ಕೊಟ್ಟುಬಿಡಿ' ಎಂದು ಹೆದರಿಸುತ್ತಾರೆ. ಆತ ಸ್ಥಳದಲ್ಲಿಯೇ ನಿಂತು ದುಡ್ಡು ಕೊಡಿಸುತ್ತಾರೆ ಮತ್ತು ಸಬ್ ರಿಜಿಸ್ಟ್ರಾರ್ ಸಹ ಸ್ಥಳಕ್ಕೆ ಹೋಗಿ ರಿಜಿಸ್ಟರ್ ಮಾಡಿಸುತ್ತಾರೆ. ನಿಮಗೆ ಹೇಳಬೇಕೆಂದರೆ, ಹೆಲಿಕ್ಯಾಪ್ಟರ್ ಬರುತ್ತದೆ, ಹೆಲಿಕ್ಯಾಪ್ಟರಿನಲ್ಲಿ ಯಾರು ಬಂದರೆಂದರೆ ಮಾಜಿ ಪ್ರಧಾನಿಯವರ ಮಗ ಬರುತ್ತಾರೆ. ಇದನ್ನು ನಾನು ಹೇಳುವುದಲ್ಲ, ನೀವು ಐದು ನಿಮಿಷಗಳ ಕಾಲ ಸದನ ಮುಂದೂಡಿ ನನ್ನ ಜೊತೆ ಬನ್ನಿ ನಾನು ತೋರಿಸುತ್ತೇನೆ. ಎಷ್ಟು ಬೆಲೆ ಬಾಳಬಹುದು ಒಂದು ಸಾವಿರ ಕೋಟಿ ರೂಪಾಯಿಗಳು......

ಶ್ರೀ ಜೆ.ಹೆಚ್. ಪಟೇಲ್ : ನಾವು ಪ್ರತಿ ಸಲವೂ ಹೇಳುತ್ತಿದ್ದೇವೆ. ಈ ಸದನದ ಸದಸ್ಯರಿರಲಿ, ಇಲ್ಲದಿರಲಿ ಅವರ ಬಗ್ಗೆ ಈ ತರಹದ ಅಪಾದನೆಗಳನ್ನು ಮಾಡುವ ಮೊದಲು ತಮಗೆ ನೋಟೀಸ್ ಕಳುಹಿಸಬೇಕು. ನೋಟೀಸ್‌ಕಳುಹಿಸಿದ ನಂತರ ಮೇಲ್ನೋಟಕ್ಕೆ ಸತ್ಯಾಂಶ ಕಂಡುಬಂದರೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬಹುದು. ಈಗ ಇದ್ದಕ್ಕಿದ್ದಂತೆ ಮಾಜಿ ಪ್ರಧಾನಿಗಳ ಮಗನ ಹೆಸರು ಹೇಳಿದರೆ ಹೇಗೆ? ಅವರ ಹತ್ತಿರ ಆ ಕುರಿತ ದಾಖಲೆಗಳಿದ್ದರೆ ತಮ್ಮನ್ನು ಕನ್‌ವಿನ್ಸ್ ಮಾಡಬೇಕು. ಕನ್‌ವಿನ್ಸ್ ಮಾಡಿದ ನಂತರ ಮಾತನಾಡಲು ಅವಕಾಶ ಕೊಡಬೇಕು. ಅದು ಬಿಟ್ಟು ಕನ್‌ವಿನ್ಸ್ ಮಾಡದೆ ಸುಮ್ಮನೆ ಈ ರೀತಿ ಹೇಳುವುದಾದರೆ ಅದು ದಾಖಲೆಗೆ ಹೋಗಲು ಅವಕಾಶ ಕೊಡಬಾರದು.

1.00 ಪಿ.ಎಂ.

ಶ್ರೀ ಪಿ.ಜಿ.ಆರ್.ಸಿಂಧ್ಯ : ಸನ್ಮಾನ್ಯ ಉಪಾಧ್ಯಕ್ಷರೆ, ಮಾಜಿ ಪ್ರಧಾನಮಂತ್ರಿಗಳ ಕಡೆಯವರೆಂದು ಹೇಳಿದ್ದಾರೆ, ಸ್ಪಷ್ಟವಾಗಿ ಯಾರು ಎಂದು ಹೇಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೆ, ನಿಮ್ಮ ಸರ್ಕಾರದ ದಾಖಲೆಗಳಲ್ಲಿ ಈ ಸ್ಥಳಕ್ಕೆ ಒಂದು ಹೆಲಿಕ್ಯಾಪ್ಟರ್‌ಬಂದರೆ, ಅಲ್ಲಿ ಅದು ಇಳಿದು ಸ್ಥಳವನ್ನು ಎರಡು ಬಾರಿ ಅದರಲ್ಲಿದ್ದವರು ನೋಡಿಕೊಂಡು ಹೋದರೆ, ಸುತ್ತಮುತ್ತಲ ಹಳ್ಳಿಯ ಸಾವಿರಾರು ಜನರು ಯಾರು ಬಂದಿದ್ದರು ಎಂಬ ಬಗ್ಗೆ ಹೇಳುವಂಥ ಪರಿಸ್ಥಿತಿ ಬಂದರೆ ಅದಕ್ಕೆ ಸರ್ಕಾರದ ಹತ್ತಿರ ದಾಖಲೆ ಇರುವುದಿಲ್ಲವೆ? ಯಾರ ಹೆಲಿಕ್ಯಾಪ್ಟರ್ ಎಲ್ಲಿಗೆ ಬೇಕಾದರೂ ಬಂದು ಹೋಗಬಹುದೆ?

SRI J.H. PATEL : I am not going into the merits of the case. ಹೆಲಿಕ್ಯಾಪ್ಟರ್ ಬಂದಿತ್ತೋ, ವಿಮಾನ ಬಂದಿತ್ತೋ, • ಯಾರದು ಬಂದಿತ್ತೋ ಅದಲ್ಲ, ತಮ್ಮಲ್ಲಿರುವ ಮಾಹಿತಿಗಳನ್ನು ಮೊದಲು ಅಧ್ಯಕ್ಷರಿಗೆ ತಿಳಿಸಬೇಕು, ಅವರು ಅದರ ಬಗ್ಗೆ ಚರ್ಚೆಮಾಡಲು ಅವಕಾಶ ಮಾಡಿಕೊಟ್ಟರೆ ಮಾತ್ರ ತಾವು ಅದರ ಬಗ್ಗೆ ಇಲ್ಲಿ ಹೇಳಬೇಕು, ಅದನ್ನು ಬಿಟ್ಟು ಏಕಾಏಕಿ ಅವರ ಮಗ, ಇವರ ಮಗ ಎಂದು ಹೇಳುವುದು ಸರಿಯಲ್ಲ. That is not allowed under the rules. If you have any evidence, you convince him and let him allow.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೆ, ಇಂದು ಚರ್ಚೆಯಾಗುತ್ತಿರುವುದು ಅವಿಶ್ವಾಸದ ನಿರ್ಣಯದ ಬಗ್ಗೆ. ಸರ್ಕಾರಕ್ಕೆ ಸೇರಿದ ಗೋಮಾಳದ 176 ಎಕರೆ ಪ್ರದೇಶಕ್ಕೆ ಬೇಲಿಯನ್ನು ಹಾಕಿಕೊಳ್ಳಲು ತಾವು ಬಿಡುತ್ತೀರಿ. ಅದರ ಪಕ್ಕದಲ್ಲಿರುವ ಗುಡ್ಡದ ಭಾಗವಾದ 500 ಎಕರೆ ಪ್ರದೇಶಕ್ಕೆ ಬೇಲಿಯನ್ನು ಹಾಕಿದ್ದಾರೆ ಅದಕ್ಕೆ ಅವಕಾಶ ಮಾಡಿಕೊಡುತ್ತೀರಿ? ರಾಮನಗರ ಯಾವುದು? ಯಾರು ಪ್ರತಿನಿಧಿಸಿರುವ ಕ್ಷೇತ್ರ? ಅಲ್ಲೇಕೆ ಈ ರೀತಿ ನಡೆಯುತ್ತಿದೆ? ಅಧಿಕಾರದಲ್ಲಿರುವ ತಾವೇನು ಮಾಡುತ್ತಿದ್ದೀರಿ?

ಶ್ರೀ ಜೆ.ಹೆಚ್. ಪಟೇಲ್ : ತಾವು ಆ ರೀತಿ ಮಾತನಾಡಬಾರದು. ನಿಯಮದ ಪ್ರಕಾರ ಆ ರೀತಿ ಮಾತನಾಡುವಂತಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಏಕೆ ಮಾತನಾಡಬಾರದು? ಯಾವ ನಿಯಮವಿದೆ ಎಂಬುದನ್ನು ಹೇಳಿ?

ಶ್ರೀ ಕೆ.ಎಸ್. ಈಶ್ವರಪ್ಪ : ಬೇಲಿಯನ್ನು ಹಾಕಲು ಯಾವ ನಿಯಮವಿತ್ತು?

ಶ್ರೀ ಜೆ.ಹೆಚ್. ಪಟೇಲ್ : ಬೇಲಿಯನ್ನು ಹಾಕಿದ್ದಾರೆಂಬುದು ಯಾರಿಗೆ ಗೊತ್ತು?

ಶ್ರೀ ಕೆ.ಎಸ್. ಈಶ್ವರಪ್ಪ : ಆ ರೀತಿ ಬೇಲಿಯನ್ನು ಹಾಕಿರುವುದೇ ದಾಖಲೆ ಇಲ್ಲಿರುವುದು. ಫೋಟೋದ ಸಹಿತವಾಗಿ ಅದನ್ನು ತೋರಿಸುತ್ತೇವೆ ನೋಡಿ.

(ಗೊಂದಲ)

ಶ್ರೀ ಜೆ.ಹೆಚ್. ಪಟೇಲ್ : ದಾಖಲೆಗಳಿದ್ದರೆ ದಯಮಾಡಿ ಕೊಡಿ. ಸದನದಲ್ಲಿ ತಾವು ಹೇಳಿದ್ದೇ ನಿಯಮವೇ?

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ಯಾವುದೇ ವಿಚಾರದ ಬಗ್ಗೆ ಡಿಫೆಂಡ್ ಮಾಡಿಕೊಳ್ಳಲು ಬೇರೆಯವರಿಗೆ ಸಾಧ್ಯವಿಲ್ಲ. ಇವರು ಏನು ಬೇಕಾದರೂ ಹೇಳಬಹುದೆಂದರೆ ಹೇಗಾಗುತ್ತದೆ?

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ : ಇವರಿಗೆ ಕಾನೂನು ಸರಿಯಾಗಿ ....

(ಗೊಂದಲ)

ಶ್ರೀ ಎಸ್. ಸುರೇಶ್‌ಕುಮಾರ್ : ಮಾನ್ಯ ಉಪಾಧ್ಯಕ್ಷರೆ, ಟ್ರೆಜರಿ ಬೆಂಚ್‌ನಿಂದ ಒಬ್ಬರು ಈ ಭಾಗಕ್ಕೆ ತಪ್ಪಿಸಿಕೊಂಡು ಬಂದಿದ್ದಾರೆ, ದಯವಿಟ್ಟು ಅವರನ್ನು ಅಲ್ಲಿಗೆ ತಲುಪಿಸಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು ಹೇಳುವುದು ಸರಿಯಾಗಿದೆ. ಈ ಪ್ರಕರಣದಲ್ಲಿ ತಮ್ಮ ಸರ್ಕಾರ ಮತ್ತು ತಮ್ಮ ಅಧಿಕಾರಿಗಳು ಶಾಮೀಲಾಗಿ, ಕೈಗಾರಿಕಾ ಉದ್ದೇಶಕ್ಕಾಗಿ ಭೂಮಿಯನ್ನು ಸ್ವಾಧೀನ ಮಾಡಿಕೊಳ್ಳಲು ಪ್ರಯತ್ನ ಮಾಡಿ, ಸರ್ವೆ ಮಾಡಿಸಿ ಅನಂತರ ಈಗಲ್‌ಟನ್ ಎನ್ನತಕ್ಕ ಅಂತರಾಷ್ಟ್ರೀಯವನು ಬಂದು ಅಲ್ಲಿ ಬೇಲಿಯನ್ನು ಹಾಕಿದ್ದಾನೆ. ಇದರ ಬಗ್ಗೆ ಎರಡು ಮೂರು ಅಪಾದನೆಗಳು ನನ್ನಲ್ಲಿದೆ. ಮೊದಲನೆಯದಾಗಿ ಸರ್ಕಾರಕ್ಕೆ ಸಂಬಂಧಪಟ್ಟ

ಗೋಮಾಳದ ಸುತ್ತ ಬೇಲಿಯನ್ನು ಹಾಕಿದ್ದಾನೆ, ಎರಡನೆಯದಾಗಿ ಬಾಣಂದೂರು ಗುಡ್ಡವಿದೆ, ಸುಮಾರು ನಾಲ್ಕನೂರು ಎಕರೆ ವಿಸ್ತೀರ್ಣವಾಗುತ್ತದೆ, ಅದಕ್ಕೂ ಬೇಲಿಯನ್ನು ಹಾಕಿದ್ದಾರೆ. ರೈತರಿಂದ ಭೂಮಿಯನ್ನು ಸ್ವಾಧೀನಮಾಡುವುದಕ್ಕೂ ಮೊದಲು ಬೇಲಿಯನ್ನು ಹಾಕಲಾಗಿದೆ. ಸರ್ಕಾರಕ್ಕೆ ಸಂಬಂಧಪಟ್ಟ ರಸ್ತೆಗೆ ಬೇಲಿಯನ್ನು ಹಾಕಲಾಗಿದೆ. ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ಮಂಡಳಿಯ ಭೂಸ್ವಾಧೀನ ವಿಭಾಗ ಇದರಲ್ಲಿ ಶಾಮೀಲಾಗಿದೆ.

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಉಪಾಧ್ಯಕ್ಷರೆ, ತಾವೇನು ಹೇಳುತ್ತೀರಿ ಅದರಲ್ಲಿ ಯಾರ ಹೆಸರನ್ನೂ ತರದೆ ಹೇಳುವುದಿದ್ದರೆ ನನ್ನ ಅಭ್ಯಂತರವಿಲ್ಲ. ಆದರೆ ತಾವು ಅವರು ಮಾಡಿದ್ದಾರೆ, ಇವರು ಮಾಡಿದ್ದಾರೆ, ಹೆಲಿಕ್ಯಾಪ್ಟರ್‌ನಲ್ಲಿ ಹೋದರು ಮುಂತಾಗಿ ಹೇಳುವುದು ಸರಿಯಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನೇಕೆ ಆ ರೀತಿ ಹೇಳಲಿ. ಅಲ್ಲಿನ ಸಾವಿರಾರು ಜನರು ಹೇಳುತ್ತಿದ್ದಾರೆ.

ಶ್ರೀ ಜೆ.ಹೆಚ್. ಪಟೇಲ್ : ಸಾವಿರ ಜನರು ಹೇಳುತ್ತಾರೆಂದು ನಾವು ಹೇಳುವುದೇ? ಆ ರೀತಿ ಹೇಳಬಾರದು.

(ಗೊಂದಲ)

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಉಪಾಧ್ಯಕ್ಷರೆ, ಬೇಕಾದರೆ ಆ ಪರ್ಟಿಕ್ಯುಲರ್ ನಿಯಮವನ್ನು ನಮೂದು ಮಾಡಿ ಹೇಳುವುದೇನೆಂದರೆ, ಸದನದ ಸದಸ್ಯರಾಗಿರಲಿ, ಹೊರಗಿನವರಾಗಿರಲಿ, ಯಾರಮೇಲೇ ಆಗಲಿ ಅವರ ಮೇಲೆ ಭ್ರಷ್ಟಾಚಾರದ ಅಥವಾ ಕಾನೂನಿಗೆ ವಿರುದ್ಧವಾಗಿ ಹೋಗಿರುವ ಬಗ್ಗೆ ಯಾವುದೇ ಆಪಾದನೆ ಮಾಡುವುದಾಗಿದ್ದರೆ ಮೊದಲು ಅಧ್ಯಕ್ಷರಿಗೆ ತಿಳಿಸಬೇಕು. ಅವರಿಂದ ಅನುಮತಿಯನ್ನು ಪಡೆದುಕೊಳ್ಳಬೇಕು. ಈ ಸದನದ ಸದಸ್ಯರಲ್ಲದವರ ಮೇಲೆ ಅಪಾದನೆಯಾಗಿರಬಹುದು. ಕಾನೂನಿಗೆ ವಿರುದ್ಧವಾಗಿ ಬೇಲಿಯನ್ನು ಹಾಕಿದ್ದರೆ ಅದನ್ನು ತೆಗೆಸುತ್ತೇವೆ. ಆದರೆ ಅದು ವಿಚಾರವಲ್ಲ. ಆ ವ್ಯಕ್ತಿಯ ಹೆಸರನ್ನು ಇಲ್ಲಿ ಹೇಳಬಾರದು.

ಉಪಾಧ್ಯಕ್ಷರು : ಪ್ರಧಾನಿಯವರ ಪುತ್ರನ ಮತ್ತು ಈ ಸದನದಲ್ಲಿ ಸದಸ್ಯರಲ್ಲದವರ ಹೆಸರನ್ನು ಇಲ್ಲೇಕೆ ಹೇಳಬೇಕು ಎಂದು ಮುಖ್ಯಮಂತ್ರಿಗಳ ವಾದವಾಗಿದೆ.

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ : ಪ್ರಧಾನಿಯವರ ಹೆಸರನ್ನು ಇಲ್ಲಿ ಹೇಳಬೇಕಾಗಿಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾಜಿ ಪ್ರಧಾನಿಯವರ ಪುತ್ರ.

ಶ್ರೀ ಸಿ. ಬೈರೇಗೌಡ : ಅವರ ಬಗ್ಗೆ ....

ಉಪಾಧ್ಯಕ್ಷರು : ಮಾನ್ಯ ಬೈರೇಗೌಡರೆ, ಮಾಜಿ ಪ್ರಧಾನಿಗಳು ಎಂದು ಹೇಳಿದ್ದಾರೆ, ಒಟ್ಟಿನಲ್ಲಿ ಮಾಜಿ ಪ್ರಧಾನಿಗಳಿರಲಿ ಇಂದಿನ ಪ್ರಧಾನಿಗಳಿರಲಿ ಅವರ ಹೆಸರು ಇಲ್ಲಿ ಹೇಳುವುದು ಬೇಡ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೆ, ಈ ಪ್ರದೇಶವು ಮೈಸೂರು, ಬೆಂಗಳೂರು, ಹೆದ್ದಾರಿಯಿಂದ 200-300 ಅಡಿಗಳಷ್ಟು ದೂರದಲ್ಲಿ ಬರುತ್ತದೆ. ಬೆಂಗಳೂರು - ಮೈಸೂರು ಹೆದ್ದಾರಿಯ 29.5 ಕಿ.ಮಿ. ದೂರದ ಎಡಭಾಗದಲ್ಲಿ ಒಂದು ಕಿಲೋಮೀಟರ್ ಒಳಕ್ಕೆ ಹೋದರೆ "ಈಗಲ್‌ಟನ್"ನ ಬಗ್ಗೆ ಪರಿಚಯವಾಗುತ್ತದೆ. ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ಮಂಡಳಿಯ ಭೂಸ್ವಾಧೀನದ ವಿಭಾಗ, ಕಂದಾಯಾಧಿಕಾರಿಗಳು, ಬಿ.ಎಂ.ಆರ್.ಡಿ.ಎ ಅಧಿಕಾರಿಗಳು, ರಾಮನಗರ ತಾಲ್ಲೂಕು ಪಂಚಾಯಿತಿಯ ಅಧಿಕಾರಿಗಳು, ಶ್ಯಾನಮಂಗಲ ಗ್ರಾಮ ಪಂಚಾಯಿತಿಯ ಅಧಿಕಾರಿಗಳು ಇದರಲ್ಲಿ ಶ್ಯಾಮಿಲಾಗಿ, ಕಾನೂನುಬಾಹಿರವಾಗಿ ಎಲ್ಲಾ ಕಾನೂನುಗಳನ್ನು ಗಾಳಿಗೆ ತೂರಿದ್ದಾರೆ. ಇದರ ಪ್ರಮೋಟರ್ಸ್ ಮತ್ತು ಡೆವಲಪರ್ಸ್, ಚಾಮುಂಡೇಶ್ವರಿ ಬಿಲ್ಡರ್ಸ್, ಪ್ರೈವೇಟ್ ಲಿಮಿಟೆಡ್, ಲಕ್ಷ್ಮಿ ಕಾಂಪ್ಲೆಕ್ಸ್, ಕೆ.ಆರ್. ರಸ್ತೆ, ಬೆಂಗಳೂರು ಇವರ ಕಛೇರಿ ಇದೆ. ಇದರ ಚಟುವಟಿಕೆಗಳಲ್ಲಿ ಎದ್ದು ಕಾಣುವಂಥ ವ್ಯಕ್ತಿ ಶ್ರೀ ಅಶೋಕ್‌ಕುಮಾರ್ ಎಂಬುವವರು. ರಾಮನಗರ ತಾಲ್ಲೂಕು ಬಿಡದಿ ಹೋಬಳಿ, ಬಿಲ್ಲೆಕೆಂಪನಹಳ್ಳಿ, ಮತ್ತು ಶ್ಯಾನಮಂಗಲ ಗ್ರಾಮಕ್ಕೆ ಸೇರಿದ 538 ಎಕರೆ ಜಮೀನಿನಲ್ಲಿ 380 ಎಕರೆಯಲ್ಲಿ ನಿವೇಶನ, ಮನೆಗಳು 158 ಎಕರೆಯಲ್ಲಿ ಅಂತಾರಾಷ್ಟ್ರೀಯ ಮಟ್ಟದ ಗಾಲ್ಫ್ ಗ್ರೌಂಡ್‌ನ್ನು ಮಾಡುತ್ತಿದ್ದಾರೆ. ಬಾಣಂದೂರಿಗೆ ಸಂಬಂಧಪಟ್ಟ ಸರ್ಕಾರದ ಜಮೀನಾದ ಸುಮಾರು 354 ಎಕರೆ ಗುಡ್ಡದ ಭಾಗ ಮತ್ತು ಸರ್ಕಾರದ ಗೋಮಾಳದ ಬಗ್ಗೆ ಸರ್ವೆ ನಂಬರ್ ಮುಂತಾದ ಮಾಹಿತಿಯನ್ನು ತಮಗೆ ಈಗಾಗಲೇ ಕೊಟ್ಟಿದ್ದೇನೆ.

ಇವೆಲ್ಲವನ್ನೂ ಸೇರಿಸಿ ಬೇಲಿಯನ್ನಾಕಿಕೊಂಡಿದ್ದಾರೆ. ತಾವು ಈಗ ಹೋದರೆ ಅದನ್ನು ನೋಡಬಹುದು. ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಸುತ್ತಲೂ ಕಾಂಪೌಂಡ್‌ನ್ನು ಹಾಕಿಕೊಂಡಿದ್ದಾರೆ. ತಾವು ಐದುನಿಮಿಷ ಸದನವನ್ನು ಮುಂದೂಡಿದರೆ ಆದನ್ನು ತೋರಿಸಿಕೊಂಡು ಬರಲು ನಾನು ಸಿದ್ಧನಿದ್ದೇನೆ. ನಾನು ಜವಾಬ್ದಾರಿಯಿಂದ ಆ ಸ್ಥಳಕ್ಕೆ ಹೋಗಿ ಬಂದಿದ್ದೇನೆ, ಬೇಕೆಂದು ನಾನು ಇದರಲ್ಲಿರುವ ವ್ಯಕ್ತಿಯ ಬಗ್ಗೆ ಹೆಸರನ್ನು ಹೇಳುತ್ತಿಲ್ಲ, ಎಚ್ಚರಿಕೆಯಿಂದ ನಾನಿದ್ದೇನೆ. ಏಕೆಂದರೆ ತಾವು ಸದನವನ್ನು ಐದುನಿಮಿಷಗಳ ಕಾಲ ಮುಂದೂಡಿದರೆ ಅಲ್ಲಿ ಸುಮಾರು ಒಂದು ಸಾವಿರ ಎಕರೆಗೆ ಬೇಲಿಯನ್ನು ಹಾಕಿಕೊಂಡಿರುವುದು, ರೈತರನ್ನು ಹೆದರಿಸಿ ಅವರಿಂದ ಭೂಮಿಯನ್ನು ಸ್ವಾಧೀನಮಾಡಿಕೊಳ್ಳದೆಯೇ ಸರ್ಕಾರದ ರಸ್ತೆಗಳನ್ನೂ ಸೇರಿಸಿ ಬೇಲಿಯನ್ನು ಹಾಕಿಕೊಂಡಿದ್ದಾರೆ. ಬಾಣಂದೂರು ಗುಡ್ಡ ಮತ್ತು ಗೋಮಾಳಕ್ಕೆ ಬೇಲಿಯನ್ನು ಹಾಕಿಕೊಂಡಿರುವ ಕೆಲಸವಾಗಿದೆ. ರಾಮನಗರ, ಒಬ್ಬ ಪ್ರತಿಷ್ಠಿತ ವ್ಯಕ್ತಿ ಪ್ರತಿನಿಧಿಸಿರುವ ಕ್ಷೇತ್ರ. ಇಲ್ಲಿ ಭಾರಿ ಶಿಫಾರಸ್ಸಿನಿಂದ ಎಲ್ಲಾ ಕಾನೂನನ್ನು ಗಾಳಿಗೆ ತೂರಿ ಒಂದು ವ್ಯವಹಾರ ನಡೆದಿದೆ. ನಿಮ್ಮ ಸರ್ಕಾರ ಗುಡ್ಡ, ಗೋಮಾಳಕ್ಕೆ ಬೇಲಿಹಾಕಿರುವುದನ್ನು ನೋಡಿಕೊಂಡು ಕಣ್ಣು ಮುಚ್ಚಿಕುಳಿತಿದೆ. ಬೇಕಾದರೆ ಇದರ ಬಗ್ಗೆ ದಾಖಲೆಯೊಂದಿಗೆ ಸಾಬೀತುಪಡಿಸುತ್ತೇನೆ. ಮತ್ತು ತಾವು ರಾಜೀನಾಮೆಯನ್ನು ಕೊಟ್ಟು ಹೋಗಬೇಕೆಂದು ಹೇಳುತ್ತಿದ್ದೇನೆ.

(ಈ ಹಂತದಲ್ಲಿ ಪ್ರೇಕ್ಷಕರ ಗ್ಯಾಲರಿಯಲ್ಲಿ ಹಲವರು ಕಬ್ಬಿಗೆ ಬೆಲೆಯನ್ನು ಕೊಡದ ಸರ್ಕಾರಕ್ಕೆ ಧಿಕ್ಕಾರವೆಂದು ಘೋಷಣೆ ಕೂಗುತ್ತಿದ್ದರು)

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಉಪಾಧ್ಯಕ್ಷರೇ, ಈಗ ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಏನು ಮಾತನಾಡುತ್ತಿದ್ದಾರೆ, ಆ ಗಾಲ್ಫ್ ಗ್ರೌಂಡ್ ಬಂದಿರತಕ್ಕಂಥದ್ದು, ಅಲ್ಲೊಂದು ಟಾನ್‌ಷಿಪ್ ಬಂದಿರತಕ್ಕಂಥದ್ದು, ಇದೆಲ್ಲಾ ನಮ್ಮ ಸರ್ಕಾರ, ನಾವು ಅಧಿಕಾರಕ್ಕೆ ಬಂದ ಮೇಲೆ ಆಗಿರತಕ್ಕಂಥದ್ದು ಅಲ್ಲ, ಬೆಂಗಳೂರು ಸುತ್ತಮುತ್ತ

ಹಲವಾರು ವರ್ಷಗಳಿಂದ ಈ ರೀತಿಯಾಗಿ ಕಾರ್ಯಕ್ರಮಗಳು ನಡೆಯುತ್ತಿವೆ. ನಾವೇನು ಮಾನ್ಯ ಯಡಿಯೂರಪ್ಪನವರಿಗೆ ಹೇಳುತ್ತಿದ್ದೇವೆ ಎಂದರೆ, ಮಾಜಿ ಪ್ರಧಾನಿಗಳ ಮಗ ಒಬ್ಬರು ಹೆಲಿಕ್ಯಾಪ್ಟರ್‌ನಲ್ಲಿ ಬಂದಿದ್ದರು, ಹಾಲಿ ಪ್ರಧಾನಿಗಳ ನೆಂಟರೊಬ್ಬರು ಕೆ.ಐ.ಡಿ.ಬಿ.ನಲ್ಲಿ ಅಧಿಕಾರಿಗಳಾಗಿದ್ದಾರೆ, ಅವರು ಇದಕ್ಕೆ ಶಾಮೀಲಾಗಿದ್ದಾರೆ ಎನ್ನುವ ಅರ್ಥದಲ್ಲಿ ಅವರು ಮಾತನಾಡುತ್ತಿದ್ದಾರೆ. ಈಗ ನಮಗೆ ಪ್ರಶ್ನೆ ಬಂದಿರತಕ್ಕಂಥಾದ್ದು, ಟ್ಯಾನ್‌ಜೆಂಟ್ ಆಗಿ ಇವರು ಮಾನನಾಡುತ್ತಿದ್ದಾರೆ? ನಮ್ಮ ಸರ್ಕಾರಕ್ಕೂ ಇದಕ್ಕೂ ಯಾವುದೇ ರೀತಿಯಾದ ಸಂಬಂಧವಿಲ್ಲ. ಅವರು ಏನೇ ಆಪಾದನೆಗಳನ್ನು ಮಾಡಬೇಕಾದರೂ ಮಾಡಲಿ, ಅದಕ್ಕೇನೂ ಅಭ್ಯಂತರವಿಲ್ಲ. ಆದರೆ ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದರು, ಆ ರೀತಿ ಮೊದಲು ನೋಟೀಸ್ ಕೊಡಬೇಕು. ನೀವು ಯಾರಾದರೂ ಹೆಸರನ್ನು ಹೇಳುವಾಗ, ಅದು ಏನು ಅರ್ಥ ಬರುತ್ತದೆ ಎಂದರೆ ಏನೋ ಇವರೆಲ್ಲಾ ಜಮೀನನ್ನು ಹೊಡೆದುಕೊಂಡು ಕುಳಿತಿದ್ದಾರೆ ಎನ್ನುವಂತಹ ಅರ್ಥ ಬರುತ್ತದೆ. ಈಗ ಸರ್ಕಾರಿ ಗೋಮಾಳವನ್ನು ಆಕ್ರಮಿಸಿಕೊಂಡಿರತಕ್ಕಂಥದ್ದು, ಬೇಲಿ ಹಾಕಿಕೊಂಡಿರುವುದು ಸರಿ ಎಂದು ಹೇಳಿ ನಮ್ಮ ಕಂದಾಯ ಮಂತ್ರಿಗಳಾಗಲಿ ಅಥವಾ ಮಾನ್ಯ ಮುಖ್ಯಮಂತ್ರಿಗಳಾಗಲಿ ಹೇಳಿಲ್ಲ. ಆ ರೀತಿ ಯಾರು ಹೇಳಿದ್ದಾರೆ? ತಪ್ಪಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳೋಣ. ಆದರೆ ಇವರೇನು ಮಾಡಲಿಕ್ಕೆ ಹೊರಟಿದ್ದಾರೆ ಎಂದರೆ, ಗುಡ್ಡ ಅಗೆದು.......

ಶ್ರೀ ಜೆ.ಹೆಚ್. ಪಟೇಲ್ : ಅದೇನಾದರೂ ಕಾನೂನಿಗೆ ವಿರುದ್ಧವಾಗಿ ಹಿಂದಿನ ಸರ್ಕಾರದ ಕಾಲದಲ್ಲಿ ಆಗಿದ್ದರೂ ಸಹ ಆ ಬಗ್ಗೆ ನಾವು ಸೂಕ್ತ ಕ್ರಮವನ್ನು ಸಂಬಂಧಿಸಿದವರ ವಿರುದ್ಧ ತೆಗೆದುಕೊಳ್ಳುತ್ತೇವೆ.

ಶ್ರೀ ಪ್ರಮೀಳಾ ನೇಸರ್ಗಿ : ಮಾನ್ಯ ಉಪಾಧ್ಯಕ್ಷರೇ, ಈ ಜಮೀನಿಗೆ ಸಂಬಂಧಪಟ್ಟಂತೆ ನೋಟಿಫಿಕೇಷನ್ 3ನೇ ಜುಲೈ 1996ರಲ್ಲಿ ಆಗಿದೆ. ಹಿಂದೆ ಯಾರೋ ಮಾಡಿದ್ದುದು ಎಂದು ನೀವುರ ಹೇಳುತ್ತೀರಿ. 1996ರ ಜುಲೈ 3 ರಂದು ಗೆಜೆಟ್ ನೋಟಿಫಿಕೇಷನ್ ಆಗಿದೆ. ಆ ಅಧಿಸೂಚನೆ ಸಂಖ್ಯೆ : ಸಿಐ 176 ಎಸ್‌ಪಿಕ್ಯೂ 96. ದಿನಾಂಕ 3ನೇ ಜುಲೈ 1996. ಅದರಲ್ಲಿ ಈ ರೀತಿ ಇದೆ. "ಕೆಳಗಡೆ ಷೆಡ್ಯೂಲ್‌ನಲ್ಲಿ ನಮೂದಿಸಿರತಕ್ಕಂಥ ಜಮೀನುಗಳು ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಕೈಗಾರಿಕೆಗಳನ್ನು ಸ್ಥಾಪಿಸಿ ಅಭಿವೃದ್ಧಿ ಪಡಿಸುವ ಉದ್ದೇಶಕ್ಕಾಗಿ ಕರ್ನಾಟಕ ಸರ್ಕಾರಕ್ಕೆ ಬೇಕಾಗಿದೆ" ಎಂದು ಸದರಿ ಅಧಿಸೂಚನೆಯಲ್ಲಿ ಇದೆ. ತಾವು ಬೇಕಾದರೆ ನೋಡಿ.ಇದೆ ಜಮೀನನ್ನೇ ಇವತ್ತು ಕೊಡುತ್ತಿರುವುದು. ಕಾಂಪೌಂಡ್ ಕಟ್ಟಡ ಹಾಕಿಸಿರತಕ್ಕಂಥದ್ದು, ಇದು ಹಳೆಯ ಸರ್ಕಾರದಲ್ಲಿ ಆಗಿರುವುದಲ್ಲ. ಈಗಿನ ಸರ್ಕಾರದಲ್ಲೇ ಆಗಿರತಕ್ಕಂಥದ್ದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಆ ಬಗ್ಗೆ ನನ್ನ ಹತ್ತಿರ ದಾಖಲಾತಿಗಳಿವೆ ಅದನ್ನು ನಾನು ನಿಮಗೆ ಕಳುಹಿಸಿಕೊಡುತ್ತೇನೆ.

ಶ್ರೀ ಸಿ. ಬೈರೇಗೌಡ : ತಾವು ಹೇಳಿದ್ದುದು ನಮಗೂ ಅರ್ಥವಾಗುತ್ತದೆ. ತಪ್ಪು ಆಗಿದ್ದರೆ ಸರ್ಕಾರ ಖಂಡಿತವಾಗಿಯೂ ಆ ಬಗ್ಗೆ ಕಠಿಣವಾದಂತಹ ಕ್ರಮವನ್ನು ತೆಗೆದುಕೊಳ್ಳುತ್ತದೆ. ಈಗ ಕೆ.ಐ.ಡಿ.ಬಿ.ಯವರು ಗೆಜೆಟ್‌ನಲ್ಲೇ ನೋಟಿಫಿಕೇಷನ್ ಅನ್ನು ಇಷ್ಯೂ ಮಾಡಿದ ಮೇಲೆ, ಯಾವ ಉದ್ದೇಶಕ್ಕೋಸ್ಕರ ಎಂಬುದೂ ಕೂಡ ಅದರಲ್ಲೇ ನಮೂದಾಗಿದೆ. ಅದರಲ್ಲಿ ತಪ್ಪೇನಿದೆ? ಇದರಲ್ಲಿ ಏನೋ ಅನಾಹುತ, ಅಚಾತುರ್ಯ ನಡೆದಿದೆ ಎನ್ನುವ ಅರ್ಥದಲ್ಲಿ ನೀವು ಮಾತನಾಡಿದರೆ ಇದಕ್ಕೆ ನಾವೇನು ಹೇಳೋಣ?

ಇದಕ್ಕೆ ಉತ್ತರ ಯಾವ ತರಹ ಕೊಡುವುದು ಎಂಬುದನ್ನು ಹೇಳಿ ನೋಡೋಣ. ಯಾವ ಉದ್ದೇಶಕ್ಕೋಸ್ಕರ ಜಮೀನನ್ನು ಅಕ್ವೈರ್ ಮಾಡುತ್ತಿದ್ದೇವೆ ಎಂಬುದು ಆ ಅಧಿಸೂಚನೆಯಲ್ಲಿ ಇದೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಆ ಬಗ್ಗೆ ತಮಗೆ ವಿವರ ಕೊಡುತ್ತೇನೆ. ಸನ್ಮಾನ್ಯ ಮುಖ್ಯಮಂತ್ರಿಗಳೇ, ನನ್ನ ಆರೋಪ ಏನೆಂದರೆ ಚೀಫ್ ಡೆವಲಪ್‌ಮೆಂಟ್ ಆಫೀಸರ್, ಕೆ.ಐ.ಡಿ.ಬಿ., ಬೆಂಗಳೂರು ಇವರು Acquisition proposals for formation of industrial area in Bidadi Hobli, Ramnagar talukË

"Sir, as per your kind self directions, the acquisition proposals are prepared and submitted for lands at Bidadi, Ramnagar taluk for the formation of industrial area. The total area proposed covers seven villages of Bidadi Hobli situated in Ramnagar taluk. The total areas proposed is 3,417 acres and 3 guntas, out of which 591 acres 24 guntas are government lands.

ಈ ಪರ್ಪಸ್‌ಗೆ ಅಕ್ವೈರ್ ಮಾಡಿಕೊಳ್ಳುವುದಕ್ಕೆ ಈ ಅಧಿಸೂಚನೆ ಮಾಡಿದರು. ನನ್ನ ಅರೋಪ ಏನೆಂದರೆ, ಇದನ್ನು. ವಶ ಮಾಡಿಕೊಳ್ಳಲೇ ಈ ಸಂಸ್ಥೆಯವನಿಗೆ ಅನುಕೂಲವಾಗಿಲಿ ಎಂದು ಸರ್ವೆ ಮಾಡಿಸಿದರು.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಉಪಾಧ್ಯಕ್ಷರೇ, ಕರ್ನಾಟಕ ಏರಿಯಾ ಡೆವಲಪ್‌ಮೆಂಟ್ ಬೋರ್ಡ್ ಕೈಗಾರಿಕೆಗಳ ಸಲುವಾಗಿ ಲ್ಯಾಂಡ್ ಅನ್ನು ಅಕ್ವೈರ್ ಮಾಡುತ್ತದೆ. ಇಡೀ ರಾಜ್ಯದಲ್ಲಿ ನಾವು ಈ ರೀತಿಯಾಗಿ ಮಾಡುತ್ತಿದ್ದೇನೆ. ಇವತ್ತು ಇಲ್ಲಿ ಒಂದು ಕೈಗಾರಿಕೆ ಬರಬೇಕು ಎನ್ನುವ ಒಂದು ಒಳ್ಳೆಯ ಉದ್ದೇಶದಿಂದ ಅವರೇ ಹೇಳಿದ ಪ್ರಕಾರ ನಾವು ನೋಟಿಫಿಕೇಷನ್ ಇಷ್ಯೂ ಮಾಡಿದ್ದೇವೆ. ಈಗ ಆ ನೋಟಿಫಿಕೇಷನ್ ಅನ್ನು ನಾವೇನಾದರೂ ಡಿಲೀಟ್ ಮಾಡಿದ್ದೇವೆಯೇ? ಸ್ವಾಧೀನ ಕ್ರಮ ಸ್ಟಾಪ್ ಮಾಡಿದ್ದೇವೆಯೇ ಎಂಬುದನ್ನು ಹೇಳಿ. ಅಥವಾ ಕಾಂಟ್ರರಿ ಟು ಲಾ ಏನಾದರೂ ನೋಟಿಫೈ ಮಾಡಿದ್ದೇವೆಯೇ ಎಂಬುದನ್ನು ಹೇಳಿ.

ಶ್ರೀ ಪ್ರಮೀಳಾ ನೇಸರ್ಗಿ : ಬಿ.ಎಂ.ಆರ್.ಡಿ.ಎ. ಆಕ್ಟ್ ಪ್ರಕಾರ ಪರ್ಮಿಷನ್ ತೆಗೆದುಕೊಂಡಿದ್ದೀರೆಯೇ? ಇಲ್ಲದಿದ್ದರೆ, ಅವರು ಹೇಗೆ ಮುಂದುವರೆಯುತ್ತಿದ್ದಾರೆ ಈ ಆಕ್ಟಿನ ಪ್ರಕಾರ ಡೆವಲಪರ್ ಇವತ್ತಿನವರೆಗೂ ಪರ್ಮಿಷನ್ ತೆಗೆದುಕೊಂಡಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ನೀವೇನು ಚಾರ್ಜ್ ಮಾಡುತ್ತಿದ್ದೀರಿ ಅಂದರೆ, ಕರ್ನಾಟಕ ಏರಿಯಾ ಡೆವಲಪ್‌ಮೆಂಟ್ ಬೋರ್ಡ್ ಯಾರಿಗೋ ಸಹಾಯ ಮಾಡಲಿಕ್ಕೆ ಈ ರೀತಿ ಮಾಡಿದ್ದಾರೆ ಎಂದು. ದಯಮಾಡಿ ಹೇಳಿ, ನಾವೇನು ಸಹಾಯ ಮಾಡಿದ್ದೇವೆ, ಕರ್ನಾಟಕ ಏರಿಯಾ ಡೆವಲಪ್‌ಮೆಂಟ್ ಬೋರ್ಡ್‌ನವರು ಈ ಲ್ಯಾಂಡ್ ನೋಟಿಫೈ ಮಾಡಿ ಯಾರಿಗೆ ಏನು ಸಹಾಯ ಮಾಡಲಿಕ್ಕೆ ಪ್ರಯತ್ನ ಮಾಡಿದ್ದಾರೆ? ಅವರಿಗೆ ನಾವು ಲ್ಯಾಂಡ್ ಅನ್ನು ಅಲಾಟ್ ಮಾಡಿದ್ದೇವೇನು?

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಕರ್ನಾಟಕ ಏರಿಯಾ ಡೆವಲಪ್‌ಮೆಂಟ್ ಬೋರ್ಡ್‌ನಿಂದ ಇಡೀ ರಾಜ್ಯದಲ್ಲಿ ಲ್ಯಾಂಡ್ಸ್ ಅಕ್ವೈರ್ ಮಾಡುತ್ತಿದ್ದೇವೆ. ಕೈಗಾರಿಕೆ ಬೆಳೆಯಬೇಕು ಎಂಬ ಉದ್ದೇಶದಿಂದ ಮಾಡುತ್ತಿದ್ದೇವೆ. ಆ ರೀತಿಯ ಅಕ್ವೈರ್ ಮಾಡಬೇಕಾದರೆ, ನಮ್ಮ ಸರ್ಕಾರದವರು ಬಂದ ಮೇಲೆ ಒಂದು ಹೊಸ ಕಾನೂನು ಅನ್ನು ಮಾಡಿದ್ದೇವೆ. ಒಂದು ಕೈಗಾರಿಕೆಗೆ ನಾವು ಕೊಡಬೇಕಾದ ಲ್ಯಾಂಡ್ 100 ಎಕರೆಗೂ ಮೇಲ್ಪಟ್ಟು ಇದ್ದರೆ, ಲ್ಯಾಂಡ್ ಆಡಿಟ್ ಮಾಡಿಕೊಡಬೇಕೆಂದು ಮಾಡಿದ್ದೇವೆ

ವಿತೌಟ್ ಲ್ಯಾಂಡ್ ಅಡಿಟ್ ಕೊಡಬಾರದು ಎಂದು ಇದೆ. ಚೀಫ್ ಸೆಕ್ರೆಟರಿಯವರ ಅಧ್ಯಕ್ಷತೆಯಲ್ಲಿ ಒಂದು ಲ್ಯಾಂಡ್ ಆಡಿಟ್ ಕಮಿಟಿ ಮಾಡಿದ್ದೇವೆ. ಯಾವುದೋ ಒಂದು ಕೈಗಾರಿಕೆಗೆ ಲ್ಯಾಂಡ್ ಬೇಕಾದರೆ, ಆ ಕಮಿಟಿ ಮುಂದೆ ಆ ಪ್ರಸ್ತಾವನೆ ಬರುತ್ತದೆ, ಒಂದು ವೇಳೆ ಅದಕ್ಕೆ ಲ್ಯಾಂಡ್ ಅವಶ್ಯಕತೆ ಇದ್ದರೆ ನಾವು ಅದನ್ನು ಅಲಾಟ್ ಮಾಡುತ್ತೇವೆ. ಇಲ್ಲಿ ಕರ್ನಾಟಕ ಏರಿಯಾ ಡೆವಲಪ್‌ಮೆಂಟ್ ಬೋರ್ಡ್‌ನವರು ಕಾಂಟ್ರರಿ ಟು ದ ರೂಲ್ಸ್ ಅಂಡ್ ರೆಗ್ಯೂಲೇಷನ್ಸ್ ಏನಾದರೂ ನೋಟಿಫಿಕೇಷನ್ ಹೊರಡಿಸಿದ್ದಾರೆಯೇ? ಕಾಂಟ್ರರಿ ಟು ರೂಲ್ಸ್ ಯಾರಿಗಾದರೂ ಅಲಾಟ್ ಮಾಡಿದ್ದಾರೇನು? ದಯಮಾಡಿ ಹೇಳಿ. ಅಥವಾ ಅದನ್ನು ಡಿ-ನೋಟಿಫೈ ಮಾಡಿದ್ದೇವೆಯೇ ಎಂಬುದನ್ನು ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ಸಂಸ್ಥೆ ಬಿ.ಎಂ.ಆರ್.ಡಿ.ಎ. ಕಾಯ್ದೆ 1985ರ ಸೆಕ್ಷನ್ 10(1) ಮತ್ತು ಸರ್ಕಾರಿ ಆದೇಶ : ಹೆಚ್‌ಯುಡಿ 17 ಬಿಎಂಆರ್ 95 ದಿನಾಂಕ 9.1.95ರ ಆದೇಶದಂತೆ, ಈ ವಸತಿ ಸಮುಚ್ಚಯ ಹಾಗೂ ಈ ಗಾಲ್ಫ್ ಗ್ರೌಂಡ್ ನಿರ್ಮಾಣಕ್ಕೆ ಅನುಮತಿ ಪಡೆದಿಲ್ಲ. ಇದನ್ನು ಪಡೆಯದೇ, ಒಂದು ಸಾವಿರಕ್ಕೂ ಹೆಚ್ಚಿನ ಜಮೀನನ್ನು ಅಭಿವೃದ್ಧಿ ಮಾಡುವುದಕ್ಕೋಸ್ಕರ, ಕೋಟ್ಯಾಂತರ ರೂ.ಗಳನ್ನು ಖರ್ಚು ಮಾಡಿ ದೊಡ್ಡದೊಂದು ಕಾಂಪೌಂಡ್‌ಹಾಕಿಸಿದ್ದಾನೆ, ಏಕೆ ನೀವು ಅವನ ಮೇಲೆ ಕ್ರಮ ತೆಗೆದುಕೊಂಡಿಲ್ಲ? ಮೇನ್ ರೋಡ್‌ನಲ್ಲಿ ನೀವು ಇದನ್ನು ನೋಡಲಿಲ್ಲವೇ? ಇದನ್ನು ಭೂ ಸ್ವಾಧೀನ ಮಾಡಲಾಗುವುದು ಎಂಬಂತಹ ಹೆದರಿಕೆ ಒಡ್ಡಿ ನಂತರ ಈ ರೈತರು ಡೆವಲಪರ್ ಸಂಸ್ಥೆಗೆ ಜಮೀನು ಮಾರಾಟ ಮಾಡಲಿಲ್ಲ ಎಂಬ ಒಂದೇ ಒಂದು ಉದ್ದೇಶದಿಂದ ಕೆ.ಐ.ಡಿ.ಬಿ. 3.7.96ರ ಭೂ ಸ್ವಾಧೀನದ ಅಧಿಸೂಚನೆಯನ್ನು ಹೊರಡಿಸಲಾಗಿದೆ. ಅದಲ್ಲದೇ, 16 ಎಕರೆ 26 ಗುಂಟೆ ಜಮೀನಿನಲ್ಲಿ ಯಾವ ಕೈಗಾರಿಕೆಯನ್ನು ಪ್ರಾರಂಭಿಸಬೇಕು.

ಶ್ರೀ ಪುಟ್ಟರಂಗಯ್ಯ ಎಂಬುವವನ ಜಮೀನು ಯಾವುದು ಇದೆ, ಇವನದು 16 ಎಕರೆ ಜಮೀನನ್ನು ಭೂ ಸ್ವಾಧೀನ ಮಾಡಿಕೊಳ್ಳುತ್ತೇವೆ, ನಮಗೆ ಡೆವಲಪ್‌ಮೆಂಟ್ಸ್‌ಗೆ ಬೇಕು ಎಂದು 3.7.96 ರಂದು ಭೂ ಸ್ವಾಧೀನದ ಅಧಿಸೂಚನೆ ಹೊರಡಿಸಿತು. 4.7.96ಕ್ಕೆ ಅದು ಗೆಜೆಟ್‌ನಲ್ಲೆಲ್ಲಾ ಬಂದಿತು. ಈ 16 ಎಕರೆ 26 ಗುಂಟೆ ಜಮೀನಿನಲ್ಲಿ ಯಾವ ಕೈಗಾರಿಕೆಯನ್ನು ಪ್ರಾರಂಭ ಮಾಡುತ್ತೀರಿ? ಒಂದು ಸಾವಿರ ಎಕರೆಯ ಒಳಗಡೆ ಇರುವಂಥಾದ್ದು ಇದು, ಹೊರಗಡೆ ಅಲ್ಲ. ಈ ಬಗ್ಗೆ ತಾವು ಉತ್ತರ ಕೊಡುವಾಗ ಹೇಳಿ. ಈ ಪ್ರಕಟಣೆ ಆದಮೇಲೆ ಜಮೀನು ವಶ ಮಾಡಿಕೊಳ್ಳಲಿಲ್ಲ. ಈ ಪ್ರಕಟಣೆಯಾದ ನಂತರ ಮಾನ್ಯ ಪುಟ್ಟರೇವಯ್ಯನವರ 7 ಎಕರೆ 16 ಗುಂಟೆ ಬಿಟ್ಟು ಉಳಿದಂತಹ 9 ಎಕರೆ 18 ಗುಂಟೆ ಜಮೀನನ್ನು ಕೆ.ಐ.ಡಿ.ಬಿ. ಭೂ ಸ್ವಾಧೀನ ಅಧಿಕಾರಿ ಶ್ರೀ ರಾಮಸ್ವಾಮಿರೆಡ್ಡಿಯವರೇ ಅಲ್ಲಿ ಕುಳಿತುಕೊಂಡು ಹಣ ನೀಡಿ, ಆ ಡೆವಲಪರ್ ಹೆಸರಿನಲ್ಲಿ ರಿಜಿಸ್ಟರ್ ಮಾಡಿಸುತ್ತಾನೆ. ಅದು ಇಲ್ಲಿರುವ ಪ್ರಶ್ನೆ.

ಈ 16 ಎಕರೆ ಕೇಳಿದ್ದೇಕೆ? ಕೆ.ಐ.ಡಿ.ಬಿ.ಗೆ ಬೇಕು ಎಂದು ಅದರೆ ಯಾರಿಗೆ ಕೊಡಿಸಿದರು? ಅವನಿಗೆ ಕೊಡಿಸಿದರು. ಅಂದರೆ ಈ ಡೆವಲಪರ್ಸ್‌ಗೆ ಕೊಡಿಸಿದರು. ಆ ಬಗ್ಗೆ ನಾನು ನಿಮಗೆ ದಾಖಲೆಗಳನ್ನು ಕಳುಹಿಸಿಕೊಡುತ್ತೇನೆ. ಇದೊಂದು ಭಾಗ ಆಯಿತೇ ಶ್ಯಾನಮಂಗಲ ಗ್ರಾಮದ ಸರ್ವೆ ನಂಬರ್ 83ರಲ್ಲಿ, ಅಧಿಕೃತವಾಗಿ ನಿಮಗೆ ಹೇಳುತ್ತಿದ್ದೇನೆ, 186 ಎಕರೆ 15 ಗುಂಟೆ ಸರ್ಕಾರದ ಗೋಮಾಳ ಇದೆ. ಈ ಜಮೀನಿನ ಸುತ್ತ ಬೇಲಿ ಹಾಕಿಕೊಂಡಿದ್ದಾನೆ. ಈ ಗಡಿಯಲ್ಲಿರುವ ಬಾಣಂದೂರು ಗ್ರಾಮದ

ಗುಡ್ಡದಲ್ಲಿ ಅಂದಾಜು 200 ಎಕರೆ ಜಮೀನು ಬುಲ್ಡೋಜರ್ ಮೂಲಕ ಈಗ ಸಮ ಮಾಡುತ್ತಿದ್ದಾನೆ. ಹೆಲಿಕ್ಯಾಪ್ಟರ್ ಬಂತು, ಮಾಜಿ ಪ್ರಧಾನಿಯವರ ಮಗ ಒಬ್ಬ ಬಂದಿದ್ದ ಎಂದು ಕುಳಿತಲ್ಲಿ ನಿಂತಲ್ಲಿ ಒಂದು ಸಾವಿರ ಜನ ಸಾಕ್ಷಿ ಹೇಳುತ್ತಾರೆ. ಈ ವ್ಯವಹಾರ, ಒಂದು ಸರ್ಕಾರ ನಡೆಸುವಂತಹ ಮುಖ್ಯಮಂತ್ರಿಗಳ ಕೈಯಲ್ಲಿ ಈ ಇಲಾಖೆ ಇರುವಂತಹ ಸಂದರ್ಭದಲ್ಲಿ, ಸಾವಿರಾರು ಕೋಟಿ ರೂ.ಗಳ ಬೆಲೆ ಬಾಳುವಂತಹ ಈ ರೀತಿಯ ಅವ್ಯವಹಾರ ನಡೆಯುತ್ತಿದ್ದರೆ ಹೇಗೆ? ಉಳಿದಿದ್ದೆಲ್ಲಾ ಮರೆತು ಬಿಡಿ. ಸರ್ಕಾರಿ ಗೋಮಾಳಕ್ಕೆ ಅವನು ಹೇಗೆ ಬೇಲಿಹಾಕುತ್ತಾನೆ? ಸರ್ಕಾರಿ ಗುಡ್ಡಕ್ಕೆ ಅವನು ಹೇಗೆ ಬೇಲಿ ಹಾಕುತ್ತಾನೆ? ಗುಡ್ಡ ಹೇಗೆ ಅವನು ಡಿಮಾಲಿಷ್ ಮಾಡುತ್ತಾನೆ? ನಿಮ್ಮ ಸರ್ಕಾರ ಬದುಕಿಲ್ಲ, ಸತ್ತಿದೆ. ಈ ಸರ್ಕಾರ ಇದರಲ್ಲಿ ಶಾಮೀಲಾಗಿದೆ. ಅದಕ್ಕಾಗಿ ಸರ್ಕಾರದ ರಾಜೀನಾಮೆಗೆ ನಾನು ಈವತ್ತು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಎಸ್. ಕೃಷ್ಣಪ್ಪ : ಈ ಹಿಂದೆ ಅವರು ಮಾತನಾಡುವಾಗ ಕುಮಾರಸ್ವಾಮಿ ಹೆಸರನ್ನು ಹೇಳಿದ್ದಾರೆ. ಆ ಹೆಸರನ್ನು ಕಡತದಿಂದ ಮೊದಲು ತೆಗೆಸಿ. ಮಾಜಿ ಪ್ರಧಾನಿಯವರ ಮಗ ಎಂದು ಈಗ ಹೇಳುತ್ತಾರೆ. ಹಿಂದೆ ಕುಮಾರಸ್ವಾಮಿ ಹೆಸರನ್ನು ಹೇಳಿದ್ದಾರೆ.

ಉಪಾಧ್ಯಕ್ಷರು : ಆ ರೀತಿ ಇದ್ದರೆ ತೆಗೆಸೋಣ, ತಾವು ಈಗ ಕುಳಿತುಕೊಳ್ಳಿ. ಮಾನ್ಯ ಯಡಿಯೂರಪ್ಪನವರೇ, ತಾವು ತಮ್ಮ ಮಾತು ಮುಂದುವರೆಸಿ.

ಶ್ರೀ ಎಂ. ಶ್ರೀನಿವಾಸ್ : ಯಾರೋ ಒಬ್ಬರು ನಮ್ಮೂರಲ್ಲಿ ಹೇಳಿದ್ದರೆ, "ಕಿವುಡು ಕಿವುಡು ಅಂದರೆ ತೌಡು ತೌಡು ಅಂದರಂತೆ" ಹಾಗಾಯಿತು ಇವರು ಈಗ ಹೇಳಿದ್ದುದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಂಡಲ ಪಂಚಾಯಿತಿ, ಪ್ಲ್ಯಾನಿಂಗ್ ಡಿಪಾರ್ಟ್‌ಮೆಂಟ್‌ನಿಂದ ಬೇರೆ ಯಾವುದೇ ಅನುಮತಿ ಇಲ್ಲದೆ, ಅವರಿಗೆ ಅನುಮತಿ ಕೊಡುವುದಕ್ಕೆ ಅಧಿಕಾರ ಇದೆಯೇ ದಾಖಲೆ ತರಿಸಿ ನೋಡಿದರೆ ನಾಚಿಕೆಯಿಂದ ತಲೆ ತಗ್ಗಿಸಬೇಕಾಗುತ್ತದೆ. ಶಾಕ್ ಆಗುತ್ತದೆ. ಮುಖ್ಯ ಮಂತ್ರಿಗಳು ಒಂದು ಕ್ಷಣ ಸಹ ನಿಮ್ಮ ಅಧಿಕಾರಿಗಳು ಈ ತರಹ ನಿಮಗೆ ಕೈ ಕೊಟ್ಟು ನಿಮಗೆ ಮೋಸ ಮಾಡಿ ನಿಮಗೆ ಗೊತ್ತಿಲ್ಲದೆ ಇದ್ದರೆ, ಗೊತ್ತಿದ್ದೂ, ನಡೆಯುತ್ತಿದ್ದರೆ, "ಘೋಡಾ ಹೈ ಮೈದಾವ್‌ಹೈ" ನಮ್ಮದು ಏನೂ ಅಭ್ಯಂತರವಿಲ್ಲ. ನಾನು ಏನು ಹೇಳುತ್ತಿದ್ದೇನೆ, ನಿಮಗೆ ಎಲ್ಲಾ ಗೊತ್ತಿದೆ. ಈಗ ಏನೂ ಗೊತ್ತಿಲ್ಲದೆ ನಾಟಕವಾಡುತ್ತಿದ್ದೀರಿ. ನೀವು ಇದರಲ್ಲಿ ಶಾಮೀಲಾಗಿದ್ದೀರಿ, ಈ ಹಗರಣದಲ್ಲಿ ನೀವು ಪಾಲುದಾರರಾಗಿದ್ದೀರಿ. ಅದಕ್ಕಾಗಿ ರಾಜೀನಾಮೆ ಕೊಡಬೇಕು. ಒಂದು ಕ್ಷಣವೂ ನೀವು ಅಧಿಕಾರದಲ್ಲಿ ಮುಂದುವರೆಯುವುದಕ್ಕೆ ನೈತಿಕ ಹಕ್ಕು ಇಲ್ಲ ಎಂದು ಹೇಳುವುದಕ್ಕೆ ಇದು ಒಂದು ಆರೋಪ......

ಶ್ರೀ ವೈ. ರಾಮಕೃಷ್ಣ : ನೀವು ದಾಖಲೆ ಬೇಕು ಎಂದು ಹೇಳುತ್ತಿದ್ದೀರಿ, ಬಿಚ್ಚಿ ಬಿಚ್ಚಿ ಹೇಳಿ ಎಂದು ಹೇಳಿದಿರಿ. ಅದಕ್ಕೆ ಹೇಳುತ್ತಿದ್ದೇವೆ. ಇನ್ನೂ ಇದೆ ಹೇಳುತ್ತೇವೆ.

ಶ್ರೀ ಎಂ. ಶ್ರೀನಿವಾಸ್ : ಆ ರೆಕಾರ್ಡ್ ಇದೆ ಗೊತ್ತೇ ಜಮೀನು ಸರ್ಕಾರದ್ದು ಪ್ರೈವೇಟ್‌ನವನು 35ಲಕ್ಷ ರೂಪಾಯಿ ಅಕ್ವಿಸಿಷನ್ ಮಾಡಿಕೊಂಡು ದುಡ್ಡು ತೆಗೆದುಕೊಂಡು ಲೇ ಔಟ್ ಮಾಡುತ್ತಿದ್ದಾನೆ, ಅದೂ ತಂದಿದ್ದೇನೆ ಗೊತ್ತೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ಎಲ್ಲಾ ಫೈಲ್ ಕಳುಹಿಸಿಕೊಡುತ್ತೇನೆ. ಯಾವುದೂ ಮುಚ್ಚಿಡುವಂತಹ ಪ್ರಶ್ನೆ ಇಲ್ಲ. ನಾನು ಹೇಳುವುದರಲ್ಲಿ ಒಂದು ಲೋಪ ಕಂಡುಬಂದರೆ ನೀವು ಉತ್ತರ ಕೊಡಬಹುದು. ಬೇಜವಾಬ್ದಾರಿಯಿಂದ ನಾನು ಮಾತನಾಡುತ್ತಿಲ್ಲ. ನನಗೆ ಏನು ಅನುಮಾನ ಎಂದರೆ ನಿಮಗೆ ಗೊತ್ತಿಲ್ಲ ಎನ್ನುವ ಹಾಗೆ ನೀವು ಮಾತನಾಡುತ್ತಿದ್ದೀರಿ ಎಂದು ನನಗೆ ಗೊತ್ತಾಗುತ್ತಿದೆ. ಹಾಗಾದರೆ ಹೇಗೆ, ಮುಖ್ಯಮಂತ್ರಿಗಳಾಗಿ ಮುಂದುವರೆಯುತ್ತೀರಿ ನೀವು ಎಂದು. ನೀವು ಹೇಗೆ ಸಾಧ್ಯ, ಇಷ್ಟು ಒಳ್ಳೆಯವರಾದರೆ, ನಿಮಗೆ ಗೊತ್ತಿಲ್ಲ ಎನ್ನುವುದಾದರೆ ನೀವು ಅಧಿಕಾರದಲ್ಲಿ ಮುಂದುವರೆಯುವಂಥದ್ದಕ್ಕೆ ನೈತಿಕ ಹಕ್ಕು ಇಲ್ಲ. ನೀವು ರಾಜೀನಾಮೆ ಕೊಡಬೇಕು. ಗೊತ್ತಿದೆ ಎನ್ನುವುದಾದರೆ ನೀವೂ ಶಾಮೀಲಾಗಿದ್ದೀರಿ ಅದಕ್ಕಾಗಿ ರಾಜೀನಾಮೆ ಕೊಡಬೇಕು.

ಶ್ರೀ ಜೆ.ಹೆಚ್. ಪಟೇಲ್ : ಗೊತ್ತಿದ್ದು ಗೊತ್ತಿಲ್ಲ ಎಂದು ಏಕೆ ಹೇಳಲಿ ನನಗೆ ಅದರಲ್ಲಿ ಕಾನೂನಿನ ವಿರುದ್ಧವಾಗಿ ಏನಾದರೂ ನಡೆದಿದೆಯೂ ಇಲ್ಲ ಇದನ್ನು ತಿಳಿದುಕೊಳ್ಳಬೇಕಾಗಿದೆ, ಹೊರತು ಯಾರೋ ಒಬ್ಬ ಬೇಲಿ ಹಾಕಿದ್ದಾನೆ, ಒಬ್ಬ ಗುಂಡಿ ತೆಗೆದಿದ್ದಾನೆ, ಇದನ್ನೆಲ್ಲಾ ಮುಖ್ಯ ಮಂತ್ರಿಗಳು ನೋಡಿಕೊಂಡು ಹೋಗುತ್ತಾರೆಯೇ If it is done against the law, we will take action.

ಶ್ರೀ ಬಿ. ಎಸ್. ಯಡಿಯೂರಪ್ಪ : ಎಲ್ಲಾ ಗೊತ್ತಿದ್ದೂ ಗೊತ್ತಿಲ್ಲ ಎಂದು ಕೆಲವರು ನಿಮಗೆ ಗೊತ್ತಿಲ್ಲದೆ ಇರುವ ಹಾಗೆ ನಟನೆ ಮಾಡಿದರೆ, ನಾನು ಏನು ಮಾಡಲಿ, ನಿಮ್ಮ ಬಗ್ಗೆ ಗೊತ್ತಿಲ್ಲ. ನೀವು ಮಲಗಿದ್ದವರನ್ನು ಎಬ್ಬಿಸುವುದು, ನಿಮ್ಮ ಬಗ್ಗೆ ನಾನು ಏನು ಹೇಳುತ್ತಿದ್ದೇನೆ, ನಿಮಗೆ ಗೊತ್ತಿಲ್ಲ ಎಂದರೆ ಅದು ಮಹಾ ಅಪರಾಧ. ಗೊತ್ತಿದ್ದು ಸುಮ್ಮನಿದ್ದರೆ ಒಂದು ಕ್ಷಣ ನೀವು ಇಲ್ಲಿ ಮುಂದುವರೆಯಬಾರದು. ಎಂದು ನಾನು ಹೇಳುತ್ತಿದ್ದೇನೆ. ನೋ ಕಾನ್‌ಫಿಡೆನ್ಸ್ ಮೋಷನ್ ಇದು. ಇದು ಏನೂ ಬೀಗರ ಸಂಬಂಧ ಅಲ್ಲ, ಬೆಂಗಳೂರು ಕಾರ್ಪೋರೇಷನ್‌ನಲ್ಲಿ ಲೀಸ್‌ಗೆ ಒಂದು ಜಮೀನು ಕೊಟ್ಟಿದ್ದಾರೆ, ಕೋಡಿ ಹಳ್ಳಿ ಗ್ರಾಮದ ಸರ್ವೇ ನಂ. 152 ರಲ್ಲಿ 39,204 ಚ.ಅ. ಜಾಗವನ್ನು ಮೆಸರ್ಸ್ ಯೂನಿವರ್ಸಲ್ ರಿಸಾರ್ಟ್ ಸಂಸ್ಥೆಗೆ ತಿಂಗಳಿಗೆ ಒಂದಕ್ಕೆ 3,267ರೂ.ಗಳಂತೆ ಗುತ್ತಿಗೆ ನೀಡಿದ್ದಾರೆ. ಅಂದರೆ ಒಂದು ಚ.ಅ. ಗೆ ಒಂದು ರೂಪಾಯಿ ಆಯಿತು. ಕಾರ್ಪೋರೇಷನ್ ಜಾಗವನ್ನು ರಿಸಾರ್ಟ್‌ಗೆ ನೀಡುವುದಕ್ಕೆ ನಿಮಗೆ ಏನು ಅಧಿಕಾರ ಇದೆ? 22.3.1995ರಲ್ಲಿ ಇದು ಆಗಿದೆ. ಆಗ ಯಾರು ಅಧಿಕಾರದಲ್ಲಿದ್ದರು, ಡೇಟ್ ಹೇಳುತ್ತಿದ್ದೇನೆ, ದಾಖಲೆ ಕಳುಹಿಸುತ್ತೇ.

ಶ್ರೀ ಕೆ.ಎಸ್. ಈಶ್ವರಪ್ಪ : ತಪ್ಪು ಮಾಡಿದ್ದೇವೆಂದು ಒಪ್ಪಿಕೊಳ್ಳಿ.

(ಗೊಂದಲ)

ಶ್ರೀ ಸಿ. ಬೈರೇಗೌಡ : ತಪ್ಪು ಯಾರು ಮಾಡಿದರೂ ತಪ್ಪೇ. ಆದ್ದರಿಂದ ಯಾವಾಗ ಆಯಿತು, ಎನ್ನತಕ್ಕಂಥದ್ದು ಕೇಳುತ್ತಿದ್ದೇನೆ. ಯಾರು ತಪ್ಪು ಮಾಡಿದರೂ ಅದು, ತಪ್ಪೇ. ದಯವಿಟ್ಟು, ಕೇಳಿ. ಅದಕ್ಕೋಸ್ಕರ ತಾರೀಖು ತಿಳಿದುಕೊಳ್ಳೋಣ ಎಂದು ಹೇಳಿದ್ದುದು.

ಶ್ರೀ ಎಂ. ಶ್ರೀನಿವಾಸ್ : ಅವರು ತಾರೀಖು ಹೇಳಿದರು, ನೀವು ಕೇಳಿಸಿಕೊಳ್ಳಲಿಲ್ಲ.

ಶ್ರೀ ಸಿ. ಬೈರೇಗೌಡ : ಅವರು ತಾರೀಖು ಹೇಳಲಿಲ್ಲ. ನಿಮಗೆ ಕೇಳುವುದಿಲ್ಲ. ನಾನು ಏನು ಮಾಡಲಿ?

ಶ್ರೀ ಎಂ. ಶ್ರೀನಿವಾಸ್ : ನನಗೆ ಕೇಳಿಸುತ್ತದೆ, ನಿಮಗೆ ಕೇಳಿಸುವುದಿಲ್ಲ, ಕುಂಬಳಕಾಯಿ ಕಳ್ಳ ಅಂದರೆ ಭುಜ ಮುಟ್ಟಿ ಕೊಂಡರಂತೆ.

ಶ್ರೀ ಸಿ. ಬೈರೇಗೌಡ : ನಾನು ಕೇಳಿಸಿಕೊಂಡೇ ಕೇಳುತ್ತಿರುವುದು, ನೀವು ಕೇಳಿಸಿದೆ ಹೇಳಿದ್ದಾರೆಂದು ಹೇಳಿದರೆ ನಾನೇನು ಮಾಡಲಿ. ನೀವು ಬಹಳ ಕುಂಬಳ ಕಾಯಿ ಹೊತ್ತವರು. ನಿಮಗೆ ಗೊತ್ತಿರುವ ಮಾತು ಬಿಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೇ, ನಾನು ಒಂದು ಸಾರಿ ಇಲ್ಲಿ ಮಾತನಾಡಿ ಕೈ ಸುಟ್ಟುಕೊಂಡಿದ್ದೇನೆ. ವಿರೋಧ ಪಕ್ಷದ ನಾಯಕನಾಗಿ ಮಾತನಾಡುವ ಕಾಲದಲ್ಲಿ ಬೇಜವಾಬ್ದಾರಿಯಿಂದ ನಾನು ಮಾತನಾಡುವಂಥದ್ದು, ಸಂಬಂಧ ಇಲ್ಲದೆ ಇರುವಂತಹ ಹೆಸರು ತರುವಂಥದ್ದು ಅಕ್ಷಮ್ಯ ಅಪರಾಧವಾಗುತ್ತದೆ. ಗಂಭೀರತೆ ಇರಬೇಕಾಗುತ್ತದೆ. ನಾನು ಮಾಡಿದಂತಹ ಛಾರ್ಜ್‌ಗೆ ಸ್ಟಿಕ್ ಆನ್ ಆಗಬೇಕಾಗುತ್ತದೆ.

ಪ್ರೂವ್ ಮಾಡಬೇಕಾಗುತ್ತದೆ. ನೀವು ಉತ್ತರ ಕೊಡುವಾಗ ದಾಖಲೆ ತರಿಸಿ ಸತ್ಯ, ಅಸತ್ಯ ಪರಿಶೀಲನೆ ಮಾಡಲೇಕಾಗುತ್ತದೆ. ಯೂನಿವರ್ಸಲ್ ರಿಸಾರ್ಟ್ ಲಿಮಿಟೆಡ್, ಹೋಟೆಲ್ ಹರ್ಷ ನಂ. 11 ಪಾರ್ಕ್ ರೋಡ್, ಬೆಂಗಳೂರು - 51. Lease of land at Kodihalli. 11 months lease. Commissioner's order dt. 22.3.95. Lease amount Rs. 3,267/- per month. Measurement, 39,204 square feet. 2) M/s. Surya Advertisers, No. 29, 1st Main, 4th Block, 3rd Stage. Lease of land at the junction of church Street at Museum road. 5 years lease. Administrator's Resolution No. 315 dated 19.12.95. per month Rs. 500/- land amount. 368 square yards.

ಇನ್ನೂ ಅನೇಕ ಜನಗಳಿಗೆ ಸಂಘಸಂಸ್ಥೆಗಳಿಗೆ ಕೊಟ್ಟಿದ್ದಾರೆ. ನಾನು ಆ ವಿವರಕ್ಕೆ ಹೋಗುವುದಿಲ್ಲ. ಕೊಟ್ಟಿದ್ದರೆ ತಪ್ಪು ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಇವರು ಏಕೆ ನಿಮ್ಮ ಚಿಕ್ಕಪ್ಪ ದೊಡ್ಡಪ್ಪನ ಮಕ್ಕಳೇ? ಕೋಟ್ಯಾಂತರ ರೂಪಾಯಿ ಬೆಲೆ ಬಾಳುವಂತಹ ಕಾರ್ಪೋರೇಷನ್ ಲ್ಯಾಂಡ್ ಯಾರು ಕೊಟ್ಟರು? ಇಂಥವು ನೂರು ಕೊಡುತ್ತೇನೆ. ಎರಡು ದಾಖಲೆ ಇರುವುದನ್ನು ನಾನು ನಿಮಗೆ ಕೊಡುತ್ತೇನೆ. ದಾಖಲೆ ಕೇಳಿದಿರಿ ಅದಕ್ಕೆ ಕೊಡುತ್ತೇನೆ.' ಇಲ್ಲಿ ನಾನು ಕರ್ನಾಟಕ ಹೌಸಿಂಗ್ ಬೋರ್ಡ್ ಬಗ್ಗೆ ಮಾತನಾಡಿದಾಗ, ಸಚಿವರು ತಪ್ಪು ತಿಳಿದುಕೊಂಡು ನಾನು ಸಿ.ಬಿ.ಐ.ಗೆ ಬೇಕಾದರೆ ಒಪ್ಪಿಸುತ್ತೇನೆಂದು ಹೇಳಿದರು. ನಾನು ನಿಮ್ಮ ಮೇಲೆ ಆರೋಪ ಮಾಡುತ್ತಿಲ್ಲ, ನಿಮ್ಮ ಮೇಲೆ ಆರೋಪ ಏನೆಂದರೆ, ನೀವು ಇಲಾಖೆ ವಹಿಸಿಕೊಂಡ ಮೇಲೆ ನಡೆದಿರುವಂತಹ ಅವ್ಯವಹಾರ ಸರಿಪಡಿಸಿಲ್ಲ ಎನ್ನುವಂಥದ್ದು ನನ್ನ ಆರೋಪ, ಸಿ.ಬಿ.ಐ.ಗೆ. ನೀವು ಹೇಳುವುದಕ್ಕೆ ಹೊರಟಿದ್ದೀರಿ. ಜಿ.ವಿ. ವಿಶ್ವನಾಥ್ ಸಮಿತಿಯವರು ಕೆ.ಹೆಚ್.ಬಿ.ಯಲ್ಲಿ ಬಿಡಿ ನಿವೇಶನ ಹಂಚಿಕೆಯಲ್ಲಿ ಆದ ಅವ್ಯವಹಾರದ ಬಗ್ಗೆ ಒಂದು ವರದಿಯನ್ನು ಕೊಟ್ಟಿದ್ದಾರೆ. ವರದಿ ನೀಡಿ ಎರಡು ವರ್ಷಗಳಾಯಿತು. ಕೆಲವು ನಾಗರೀಕ ಸೌಲಭ್ಯ ನಿವೇಶನಗಳನ್ನು ಕಾನೂನಿಗೆ ವಿರುದ್ಧವಾಗಿ ಹಂಚಿದ್ದಾರೆ. ಕೆಲವು ಬೆಲೆ ಬಾಳುವಂತಹ ನಿವೇಶನಗಳನ್ನು ಅನರ್ಹರಿಗೆ ಮಂಜೂರು ಮಾಡಿದ್ದಾರೆ.

ಎರಡು ವರ್ಷಗಳು ಆಯಿತು ವರದಿ ನೀಡಿ. ತನಿಖೆಗೆ ಜಿ.ವಿ. ವಿಶ್ವನಾಥ್‌ರವರು ಹೇಳಿದರೂ ಸಹ ಏಕೆ ನಿಧಾನ ಮಾಡುತ್ತಿದ್ದೀರಿ? ಏಕೆ ವಶಪಡಿಸಿಕೊಳ್ಳಲಿಲ್ಲ? ಜಿ.ವಿ. ವಿಶ್ವನಾಥ್‌ರವರ ಸಮಿತಿವರದಿ ಕೊಡುವಂತಹ ಅಗತ್ಯ ಏನಿತ್ತು? ಕೊಟ್ಟು ಎರಡು ವರ್ಷಗಳಾದ ಮೇಲೆ, ಡಿಲೇ ಏಕೆ ಮಾಡುತ್ತಿದ್ದೀರಿ? ಅವರೆಲ್ಲಾ ಮನೆಗಳನ್ನು

ಕಟ್ಟಿಕೊಳ್ಳಲಿ ಎಂದೇ? ಕೋಟ್ಯಾಂತರ ರೂಪಾಯಿಗಳ ಆಸ್ತಿಯನ್ನು ಕಬಳಿಸಲಿ ಎಂದೇ ಈ ವರದಿಯನ್ನು ಅಕ್ಸೆಪ್ಟ್ ಮಾಡಿ ಕೊಂಡಿದ್ದೀರೋ ನೀವು? 1.1.1992ರಿಂದ 31.12.96ರ ವರೆಗೆ ಸುಮಾರು 477 ಮನೆ ನಿವೇಶನಗಳು ವ್ಯಾಪಾರ ಉದ್ದೇಶಕ್ಕಾಗಿ ನಿವೇಶನ, ಹಾಗೂ ನಾಗರೀಕ ಸೌಲಭ್ಯಕ್ಕಾಗಿ ಏನು ಮೀಸಲಿಟ್ಟಿದ್ದಾರೆ, ಅವುಗಳನ್ನು ಹಂಚಿಕೆ ಮಾಡಲಾಗಿದೆ. ಈ ವರದಿ. ನಾನು ತರಿಸಿಕೊಂಡಿದ್ದೇನೆ, ಎಲ್ಲಿಂದ ಬಂದಿತು ಎಂದು ಕೇಳಬೇಡಿ.

ನೀವು ಟೇಬಲ್ ಮಾಡುವುದಿಲ್ಲ ಮುಚ್ಚಿಡುತ್ತೀರಿ ಎಂದು ನಾನು ಹೇಳುತ್ತಿದ್ದೇನೆ. ಇಡೀ ರಾಜ್ಯದ್ದು ನಿಮಗೆ ಸಂಬಂಧಪಟ್ಟಂಥದ್ದು ಹೇಳುತ್ತೇನೆ. ಬೆಂಗಳೂರಿನಲ್ಲಿ ಒಟ್ಟು 223 ನಿವೇಶನ, ಮೈಸೂರಿನಲ್ಲಿ 55 ನಿವೇಶನ, ಶಿವಮೊಗ್ಗದಲ್ಲಿ 38, ಹಾಸನದಲ್ಲಿ 05, ಮಂಗಳೂರಿನಲ್ಲಿ 18, ಹುಬ್ಬಳ್ಳಿಯಲ್ಲಿ 66, ಬೆಳಗಾಂನಲ್ಲಿ 16 ಗುಲ್ಬರ್ಗಾದಲ್ಲಿ 42 ಮತ್ತು ಬಳ್ಳಾರಿಯಲ್ಲಿ 14. ಇಲ್ಲಿ ಕರ್ನಾಟಕ ಗೃಹ ಮಂಡಳಿ ತನ್ನ ಅಧಿಕಾರ ವ್ಯಾಪ್ತಿ ಮೀರಿ ಯಲಹಂಕ 'ಎ' ಮೂರನೇ ಹಂತದಲ್ಲಿ ಒಂದರಿಂದ 91 ಸೈಟ್ ಅಂಗಡಿ ನಿವೇಶನ ಒಟ್ಟು ನಾಲ್ಕು 128 ರಿಂದ 131ರವರೆಗೆ ಪಟ್ಟಣಗೆರೆಯಲ್ಲಿ 12 ನಿವೇಶನ 211ರಿಂದ 222. ನಿವೇಶನ ಸಂಖ್ಯೆ 29 'ಎ' ಸೆಕ್ಟರ್ 'ಸಿ' ಮೂರನೇ ಹಂತದಲ್ಲಿ ಯಲಹಂಕ ಕೈಗಾರಿಕಾ ಪ್ರದೇಶ ಇದ್ದುದು, ಇದು ಲಾರಿ ಪಾರ್ಕಿಂಗ್, ಕ್ಯಾಂಟೀನ್ ಮುಂತಾದ ವಿಷಯಗಳಿಗೆ ಮೀಸಲಿಟ್ಟಿತ್ತು, ಈ ನಿವೇಶನ ಹಂಚಿಕೆ ಮಾಡಿರುವುದು, ಹಂತಿಕೆ ನಿವೇಶನ ಮತ್ತು ನಿವೇಶನ ರಚನೆ ಯೋಜನೆಗೆ ವಿರುದ್ಧವಾಗಿದೆ. ಎಂದು ಅವರು ಅಭಿಪ್ರಾಯ ಪಟ್ಟಿದ್ದಾರೆ. ವರದಿಯನ್ನೂ ಕೂಡ ಕೊಟ್ಟಿದ್ದಾರೆ. ಯಲಹಂಕ ನ್ಯೂ ಟೌನ್ ಶಿಪ್ ಸೈಟ್ ನಂ. 19, ಈ ನಿವೇಶನದಲ್ಲಿ ಉದ್ಯಾನವನಕ್ಕೆ, ಮೀಸಲಿಟ್ಟಿದ್ದಾರೆ. ಹಾಸ್ಟೆಲ್ ಕಟ್ಟಲು ಹಂಚಿಕೆ ಮಾಡಿರುವುದು, ಹಾಸ್ಟೆಲ್ ಕಟ್ಟು ವುದಕ್ಕೋಸ್ಕರ ಉದ್ಯಾನ ವನದ ಸೈಟ್ ನಂ. 19ನ್ನು ಕೊಟ್ಟರಿ.

ಈ ಬೆಂಗಳೂರಿನಲ್ಲಿ ಅತ್ಯಂತ ಪ್ರತಿಷ್ಠೆಯ ಜಾಗ, ವಿಜಯನಗರ ಪ್ರವೇಶ ದ್ವಾರದಲ್ಲಿರುವ ಮನುವನ ಕೆ.ಹೆಚ್.ಬಿ. ಕಾಲೋನಿಯಲ್ಲಿ ಮೂಲೆ ನಿವೇಶನಗಳನ್ನು ಕತ್ತರಿಸಿ ಮಧ್ಯಂತರ ನಿವೇಶನಗಳಾಗಿ ಪರಿವರ್ತಿಸಿ ಹಂಚಿಸಿದ್ದಾರೆ. ಬೆಂಗಳೂರಿನಲ್ಲಿ ಹಂಚಿರುವ ವಿವರ, ವಸತಿ ನಿವೇಶನ 127, ಅಂಗಡಿ ನಿವೇಶನ 23, ಕೈಗಾ ನಿವೇಶನ 7, ನಾಗರೀಕ ಸೌಲಭ್ಯ ನಿವೇಶನ 3, ಜಾರಕಬಂಡೆ ಕಾವಲಿನಲ್ಲಿ ವಸತಿ ನಿವೇಶನ 34, ಕೆಂಗೇರಿಯಲ್ಲಿ 7, ಅಗ್ರಹಾರ, ದಾಸರಹಳ್ಳಿ 1, ಮನುವನ ವಿಜಯನಗರದಲ್ಲಿ 7, ಜಯನಗರ 1 ಮತ್ತು ಪಟ್ಟಣಗೆರೆಯಲ್ಲಿ 12..

ನಿವೇಶನ ಸಂಖ್ಯೆ 29 ಎ ನರಸಿಂಹರೆಡ್ಡಿಯವರಿಗೆ, ವೆಂಕಟೇಶ್ವರ ಡಿಸ್ಟಿಲರೀಸ್, ಯಶವಂತಪುರರವರಿಗೆ ಹತ್ತು ಸಾವಿರದ ನೂರ ಹದಿನೈದು ಚದರ್ ಅಡಿ ಕೊಟ್ಟಿದ್ದಾರೆ.

ಶ್ರೀ ಸಿದ್ಧರಾಮಯ್ಯ : ಅದು ಕನಿಟಿ ರಿಪೋರ್ಟ್ ಕಾಪಿಯೇ?

ಶ್ರೀ ಬಿ.ಎಸ್. ಯಡಿಯೂರಪ್ಪ : ಹೌದು ಇದು ಕಮಿಟಿ 'ರಿಪೋರ್ಟ ಕಾಪಿ. ಅಂದರೆ ಏಕೆ ವಿಶ್ವನಾಥ್ ಸಮಿತಿ ವರದಿ? ಎರಡು ವರ್ಷಗಳಿಂದ ಏತಕ್ಕೆ ಇಟ್ಟುಕೊಂಡಿದ್ದೀರಿ? ಏಕೆ ಇಲ್ಲಿ, ಟೇಬಲ್ ಮಾಡಲಿಲ್ಲ? ಹೀಗಾದರೆ ಏಕೆ ಮಂತ್ರಿಗಳು ಬೇಕು? ಏಕೆ ಇಲಾಖೆ ಬೇಕು? ಏಕೆ ಅಧಿಕಾರಿಗಳು ಬೇಕು? ಲೂಟಿ ಮಾಡುವುದಕ್ಕೇನು? ಏಕೆ ತನಿಖೆ ಮಾಡಿಸುವ ನಾಟಕ? ಯಾವುದೋ ಕಾಲದಲ್ಲಿ ಆಗಿದ್ದು, ನೀವೇನು ಮಾಡುತ್ತಿದ್ದೀರಿ? ವಿಶ್ವನಾಥ್ ಸಮಿತಿ ವರದಿ ಬಂದಮೇಲೆ,

ಕೆ.ಹೆಚ್.ಬಿ. ಅಧ್ಯಕ್ಷರ ಕಾಲದಲ್ಲಿ ಅದಂಥದ್ದರ ಬಗ್ಗೆ ನಿಮಗೆ ಬುದ್ಧಿ ಬರಬೇಕಾಗಿತ್ತು. ಸಾಮಾನ್ಯ ಅರ್ಜಿದಾರರು ನಿವೇಶನ ಬೇಕು ಎಂದು ಸಾವಿರಾರು ಜನ ಇರಬೇಕಾದರೆ, ಮತ್ತೆ ಈ 41 ಜನರಿಗೆ ಇತ್ತೀಚೆಗೆ 1.6.1996ರಂದು ಕರ್ನಾಟಕ ಗೃಹ ಮಂಡಳಿಯವರು ಸೈಟ್ ಕೊಡುತ್ತಾರೆ. ಯಾವ ಶುಭದಿನ ಅದು? ಸ್ವಾಮಿ, ನಂಬರ್ ಡಿಓಹೆಚ 99-ಕೆಹೆಚ್‌ಬಿ 96 ದಿನಾಂಕ 18.5.1996ರಂದು ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯಿಂದ ಸರ್ಕಾರಿಯ ಒಂದು ಆದೇಶ ಹೋಗುತ್ತದೆ, ಇಂತಿಂಥವರಿಗೆ ಸೈಟ್ ಕೊಡಿ ಎಂದು. ಅವರು ಅಪ್ಲಿಕೇಷನ್ ಕೂಡ ಹಾಕಿಲ್ಲ. ಅದರೂ ಸರ್ಕಾರಿ ಆದೇಶ ಹೋಗುತ್ತದೆ. ಆಶ್ಚರ್ಯ ಎಂದರೆ ಈ ಸಂಬಂಧಪಟ್ಟವರು, ಪ್ರಮುಖರು ಅರ್ಜಿಗಳನ್ನು ಕೊಡುವುದಕ್ಕಿಂತ ಮುಂಚೆಯೇ ನಿವೇಶನಗಳು ಮಂಜೂರು ಆಗಿಹೋಯಿತು. ಬೋರ್ಡ್ ಮೀಟಿಂಗ್‌ನಲ್ಲಿ ಅವರ ಎಲಿಜಿಬಿಲಿಟಿಯನ್ನು ಪರಿಶೀಲನೆ ಮಾಡಿ ಸೈಟ್ ಕೊಡಿ ಎಂದು ಸರ್ಕಾರದ ಆದೇಶದ ಪ್ರಕಾರ ತೀರ್ಮಾನ ಆಗುತ್ತದೆ.

ಈ ರೀತಿಯ ನಿವೇಶನ ಮಂಜೂರು ಪಡೆದಿರುವವರಲ್ಲಿ ಮುಖ್ಯಮಂತ್ರಿಗಳ ವಿಶೇಷಾಧಿಕಾರಿಯಾಗಿರತಕ್ಕಂಥ ಡಾ॥ ನರಸಿಂಹ ಮೂರ್ತಿ ಶ್ರೀ ನಾರಾಯಣಪ್ಪ ಈಗಿನ ವಸತಿ ಸಚಿವರ ಆಪ್ತಕಾರ್ಯದರ್ಶಿಗಳು ಇವರಿಗೆ ಹೋಯಿತು. ಕರ್ನಾಟಕ ಗೃಹ ಮಂಡಳಿಗೆ ನೇರ ಸಂಬಂಧ ಹೊಂದಿ ನಿರ್ದೇಶಕರೂ ಆಗಿರುವಂಥ ಶ್ರೀ ಎ.ಬಿ. ದಾಸ್. ರೀಜನಲ್ ಚೀಫ್ ಹುಡ್ಕೋ, ಬೆಂಗಳೂರು ಅವರಿಗೆ ಒಂದು ನಿವೇಶನ ಶ್ರೀ ಲುಕೋಸ್ವೆಲ್ ತುರ್ರೈ ಐ.ಎ.ಎಸ್. ಅಧಿಕಾರಿ ಇವರಿಗೂ ಒಂದು ನಿವೇಶನ.

ಶ್ರೀ ಸಿದ್ಧರಾಮಯ್ಯ : ಅದು ಡಿಸ್‌ಕ್ರಿಷನರಿ ಕೋಟಾ ಇರಬಹುದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಲ್ಲ ಇದು ಡಿಸ್‌ಕ್ರಿಷನರಿ ಕೋಟಾ ಅಲ್ಲ. ಡಿಸ್‌ಕ್ರಿಷನರಿ ಕೋಟಾ ಆದರೆ ಬೋರ್ಡಿನಲ್ಲಿರುವಂಥ ಸದಸ್ಯರೇ ಬೋರ್ಡಿನಲ್ಲಿ ತೆಗೆದುಕೊಂಡು ತೀರ್ಮಾನ ಮಾಡಿ ಕೊಟ್ಟುಕೊಂಡು ಬಿಡುತ್ತಾರೆಯೇ? ಬಡ ಬಗ್ಗರು ಇಲ್ಲವೇ? ಬೋರ್ಡ್ ಇರುವುದು ಕಮಿಟಿ ಇರೋದು, ಸರ್ಕಾರ ಇರುವಂಥದ್ದು ಖುಷಿ ಬಂದವರಿಗೆ ಕೊಡುವುದಕ್ಕೇನು ಡಿಸ್‌ಕ್ರಿಷನರಿ ಕೋಟಾ ಇರುವಂಥದ್ದು ನಿಮ್ಮ ನಿಮ್ಮ ಸೆಕ್ರೆಟರಿಗೆ ತೆಗೆದುಕೊಳ್ಳುವುದಕ್ಕೇನು? ಹಿಂದಿನ ಮುಖ್ಯ ಮಂತ್ರಿಗಳ ವಿಶೇಷ ಅಧಿಕಾರಿ ಶ್ರೀ ಬಿ.ಕೆ. ಸಂತೋಷ ಅವರಿಗೆ ಕೊಡುತ್ತಾರೆ, ಶ್ರೀ ಉಗ್ರಪ್ಪ ಎಂ.ಎಲ್.ಸಿ. ಅವರಿಗೆ ಸೈಟ್ ಕೊಡುತ್ತಾರೆ, ಐ.ಎ.ಎಸ್. ಅಧಿಕಾರಿ ಮಾಲತಿದಾಸ್, ಅವರ ಪತಿ ಶ್ರೀ ಎಸ್.ಕೆ. ದಾಸ್ ಅವರೂ ಸಹ ಐ.ಎ.ಎಸ್. ಅಧಿಕಾರಿ ಅವರಿಗೂ ಒಂದು ನಿವೇಶನ, ಇಬ್ಬರಿಗೂ ಒಂದು ನಿವೇಶನ, ಐ.ಪಿ.ಎಸ್. ಅಧಿಕಾರಿ ಗೋಪಾಲ್ ಹೊಸೂರಿ ಅವರಿಗೆ ಮತ್ತು ಶ್ರೀ ಬಿ.ಬಿ. ಪಾಟೀಲ್ ಪೋಲೀಸ್ ಇನ್‌ಸ್ಪೆಕ್ಟರ್ ಸಿ.ಓ.ಡಿ. ಅವರಿಗೆ ಒಂದು ಸೈಟ್ ಕೊಡುತ್ತೀರಿ.

ಭಾರತದ ರಾಷ್ಟ್ರಪತಿಗಳ ಕಚೇರಿಯಲ್ಲಿ ಸೆಕ್ಷನ್ ಆಫೀಸರ್ ಲಕ್ಕನ್‌ಗಾಂವ್ ಅವರಿಗೂ ಸಹ ಒಂದು ನಿವೇಶನ ಒಟ್ಟು 41 ಜನರಿಗೆ, ಶ್ರೀ ವಾಸುದೇವನ್‌ರವರು ಹೌಸಿಂಗ್ ಕಮೀಷನರ್‌ರಾಗಿರುವಂಥ •ಕೆ.ಹೆಚ್.ಬಿ.ನಲ್ಲಿ ನಡೆದ ಇದು ಒಂದು ಇನ್ಸಿಡೆಂಟ್ ಇದು ಇಷ್ಟಾಯಿತು. ಇನ್ನೊಂದು ವಿಶೇಷ ಕರ್ನಾಟಕಗೃಹ ಮಂಡಳಿಯವರು ದಿನಾಂಕ 27.3.1996ರಂದು ಚದರ್ ಮೀಟರ್‌ಗ 950 ರೂಪಾಯಿ ದರ ನಿಗದಿ ಮಾಡಿದರೆ ಈ 41 ಮಹಾ ಪುರುಷರಿಗೆ ಚದರ್ ಮೀಟರ್‌ಗೆ 200 ರೂಪಾಯಿಗಳಂತೆ ಫಿಕ್ಸ್ ಮಾಡುತ್ತಾರೆ. ಆ ದರವನ್ನು ಸರ್ಕಾರಿ ಆದೇಶ ಡಿ.ಓಹೆಚ್ 99-ಕೆಹೆಚ್‌ಬಿ 96 ದಿನಾಂಕ 18.5.1996ರಲ್ಲಿ ತಿಳಿಸಲಾಗಿದೆ. ಯಾವ ಸಾಹಸವನ್ನು ಅವರು ಮಾಡಿದರು

ಎಂದು ಹೇಳಿ ತಾವು ಡಿಸ್‌ಕ್ರಿಷನರಿ ಕೋಟಾದಲ್ಲಿ ಚದರ್ ಮೀಟರ್‌ಗೆ 950 ರೂಪಾಯಿ ಇದ್ದದ್ದನ್ನು 200 ರೂಪಾಯಿಗಳಿಗೆ ಕೊಟ್ಟಿರಿ ಸ್ವಾಮಿ?

ಉಪಾಧ್ಯಕ್ಷರು : ತಾವು ಹೇಳುವಾಗ 200 ರೂಪಾಯಿ ಎಂದು ಹೇಳಿದಿರಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಕ್ಷಮಿಸಿ 200 ಅಲ್ಲ ಅದು 800. ನಾನು ಪ್ರೊನೌನ್ಸ್ ಮಾಡುವಾಗ ತಪ್ಪಾಗಿದ್ದರೆ ಅದನ್ನು ತಿದ್ದಿಕೊಳ್ಳುತ್ತೇನೆ. ದಿನಾಂಕ 18.5.1996ರಂದು ಇವೆಲ್ಲಾ ದಾಖಲೆ ಬೇಕು ಎಂದು ಶ್ರೀ ಸತ್ಯನಾರಾಯಣ, ಅಧೀನ ಕಾರ್ಯದರ್ಶಿಯವರಿಗೆ ಒಂದು ಪತ್ರವನ್ನು ಬರೆದೆ. ಇದು ಪಬ್ಲಿಕ್ ಡಾಕ್ಯುಮೆಂಟ್ ಅಲ್ಲ ಇದನ್ನು ಕೊಡುವುದಕ್ಕೆ ಬರುವುದಿಲ್ಲ ಎಂದು ಅವರು ಹೇಳುತ್ತಾರೆ. ಅಂದರೆ ನಿಮ್ಮಲ್ಲಿ ಎಲ್ಲಾ ವ್ಯವಹಾರಗಳು ಪ್ರೈವೇಟೇನೇ? ಕೊನೆಗೂ ನಾನು ತೆಗೆದುಕೊಂಡೆ. ಸರ್ಕಾರದ ನಿಮ್ಮ ಬೋರ್ಡ್ ಮೀಟಿಂಗ್ ರೆಸಲ್ಯೂಷನ್ ಕಾಪಿ, ದಾಖಲೆ, ಯಾರಿಗೆ ಕೊಟ್ಟಿರಿ ಏನೆಲ್ಲಾ ಮಾಡಿದಿರಿ ಇದೆಲ್ಲಾ ಇದೆ. ಅಲ್ಲಿ ನಿಮ್ಮ ಮೀಟಿಂಗ್‌ನಲ್ಲಿ ಬರುತ್ತದೆ.

"The eligibility will be considered only ofter the receipt of applications and before issue of the intimation of all allotment orders as per the directions contained in the said Government letter."

ಅರ್ಜಿಗೆ ಮುಂಚೆ ಗವರ್ನ್‌ಮೆಂಟ್ ಲೆಟರ್ ಹೋಗುತ್ತದೆ. ಅರ್ಜಿಗೆ ಮುಂಚೆ ಸೈಟ್‌ಕೊಡಿ ಇಂಥಿಂಥವರಿಗೆ ಅಲಾಟ್‌ಮಾಡಿ ಎಂದು ಸರ್ಕಾರಿ ಆಜ್ಞೆ ನಿಮ್ಮ ಕಚೇರಿಯಿಂದ ಹೋಗುತ್ತದೆ. ಈ ದೇಶದಲ್ಲಿ ಎಲ್ಲಿಯಾದರೂ ಹೀಗೆ ಆಗುತ್ತದೆಯೇ? ಗವರ್ನ್‌ಮೆಂಟ್ ಲೆಟರ್ನ ನಂಬರ್ ಡಿ ಓಹೆಚ್ 99-ಕೆಹೆಚ್‌ಬಿ 96 ದಿನಾಂಕ 18.5.1996ರಲ್ಲಿ ಸರ್ಕಾರದಿಂದ ಇಂಥಿಂಥವರಿಗೆ ನಿವೇಶನ ಅಲಾಟ್ ಮಾಡಿ ಎಂದು ಹೋಗುತ್ತದೆ. ಆಮೇಲೆ ನಾಮಕಾವಾಸ್ಥೆ ಬೋರ್ಡಿನವರು ಕುಳಿತುಕೊಳ್ಳುತ್ತಾರೆ. ಯಾರಿಗೋ ದಾನ ಮಾಡುವಾಗ ಅಲ್ಲಿರುವಂಥ ಬೋರ್ಡ್ ಮೆಂಬರ್ಸ್ ಸಹ ಒಂದೊಂದು ಸೈಟ್ ನಂಬರನ್ನು ತಮ್ಮ ಹೆಸರಿಗೆ ಬರೆಯುತ್ತಾರೆ. ಯಾರ ಅಪ್ಪನ ಆಸ್ತಿ? ಇದಕ್ಕೆ ಡಿಸ್‌ಕ್ರಿಷನರಿ ಕೋಟಾ ಇರುವುದು? ಇದೆ ನೀವು ಮಾಡುವುದು? ನಿಮ್ಮ ಮೇಲೆ ಅವಿಶ್ವಾಸ ನಿರ್ಣಯ ಮಂಡನೆ ಮಾಡಿ ನಿಮ್ಮ ಸರ್ಕಾರ ಮನೆಗೆ ಹೋಗಬೇಕು ಎಂದು ಹೇಳುವುದಲ್ಲದೆ ಇನ್ನೇನು ಹೇಳಬೇಕು? ಇನ್ನೇನು ಲೂಟಿ ಮಾಡಿದರೆ ರಾಜೀನಾಮೆ ಕೊಡಬೇಕು ಇನ್ನೂ ಕೊಡುತ್ತೇನೆ. ಇಂಥ ದಾಖಲೆ ಬೇಕು ಎಂದು ಕೇಳಿ. ಸ್ವಾಮಿ ಇನ್ನೂ ಇದೆ. ಊಟ ಆದಮೇಲೆ ತೆಗೆದುಕೊಳ್ಳೋಣ. ಇನ್ನೂ ಬಹಳ ಇದೆ. ಅವರಿಗೆ ಇನ್ನೂ ಬೇರೆ ಡೋಸ್‌ಗಳು ಇದ್ದಾವೆ.

ಉಪಾಧ್ಯಕ್ಷರು : ಈಗಾಗಲೇ ತಾವು ಮೂರು ತಾಸು ಮಾತನಾಡಿದ್ದೀರಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನನಗೆ ಇನ್ನೂ ಕನಿಷ್ಠ ಐದು ತಾಸು ಬೇಕು.

ಉಪಾಧ್ಯಕ್ಷರು : ನೀವು ಮಾತನಾಡಿ ನನಗೇನಿಲ್ಲ. ಆದರೆ ತಾವು ಈಗಾಗಲೇ ಮೂರು ತಾಸು ಮಾತನಾಡಿದ್ದೀರಿ, ನಿಮ್ಮ ಪಕ್ಷದ 22 ಜನರ ಲಿಸ್ಟ ಕೊಟ್ಟಿದ್ದೀರಿ. ಅದಕಾರಣ ತಾವು ಸ್ವಲ್ಪ ಸಮಯ ನೋಡಿಕೊಂಡು ಮಾತನಾಡಿ. ನಮಗೆ ಪ್ರಶ್ನೆ ಇಲ್ಲ, ಯಾವ ಯಾವ ಲೆಕ್ಕದಲ್ಲಿ ಇದೆ ಆ ಲೆಕ್ಕದಲ್ಲಿ ತಾವು ಮಾತನಾಡಿ. ಇನ್ನೂ 22 ಜನ ಇದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರು ರಾಜೀನಾಮೆ ಕೊಟ್ಟು ಹೋಗಬೇಕಾದರೆ ಯಾರಾದರೂ ಏತಕ್ಕೆ ಮಾತನಾಡಬೇಕು.

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ : ಸರಿಯಾಗಿ ಸಾಬೀತು ಮಾಡುವುದಕ್ಕೆ ಆಗದಿದ್ದರೆ ಅವರೇ ರಾಜೀನಾಮೆ ಕೊಡಬೇಕು.

ಉಪಾಧ್ಯಕ್ಷರು : ಎರಡು ಗಂಟೆಯವರೆಗೆ ತಾವು ಮಾತನಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಊಟ ಆದ ಮೇಲೆ ಅರ್ಧ ಮುಕ್ಕಾಲು ಗಂಟೆ ಬರೀ ಓದಿಕೊಂಡು ಹೋಗಿ ಬಿಡುತ್ತೇನೆ, ಇನ್ನೇನೂ ವಿವರ ಹೇಳುವುದಿಲ್ಲ.

ಉಪಾಧ್ಯಕ್ಷರು : ತಾವು ಎರಡು ಗಂಟೆಯವರೆಗೆ ಮಾತನಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಊಟಕ್ಕೆ ಹೋಗಿ ಬಂದಮೇಲೆ ನನಗೆ ಒಂದು ಗಂಟೆ ಟೈಮ್ ಕೊಡಿ, ಅರ್ಧ ಗಂಟೆಯೊಳಗೆ ಓದಿಬಿಡುತ್ತೇನೆ. ಇದೊಂದು ಅವರಿಗೆ ಚಾರ್ಜ್‌ಶೀಟ್, ಅವರು ಅಧಿಕಾರ ಬಿಟ್ಟು ತೊಲಗುವುದಕ್ಕೆ ಇದೊಂದು ಚಾರ್ಜ್ ಶೀಟ್. ಇಲ್ಲವಾದರೆ ಈಗಲೇ ಹೇಳಲಿ ನಮಗೆ ಮನದಟ್ಟಾಗಿದೆ. ನಾನು ಏತಕ್ಕೆ ಊಟಕ್ಕೆ ಅಡ್ಜರ್ನ್ ಮಾಡಿ ಎಂದು ಹೇಳುತ್ತೇನೆ ಎಂದರೆ, ಇವೆಲ್ಲಾ ನೋಡಿಕೊಂಡು ನೀವು ಚರ್ಚೆ ಮಾಡಿಕೊಂಡು ವಾಪಸ್ಸು ಬಂದು, ಇಲ್ಲ ನಾವು ಮಾನ ಮರ್ಯಾದೆ ಕಿಂಚಿತ್ತು ಇರುವುದರಿಂದ ಈ ಸಮಯದಲ್ಲಿ ಅಧಿಕಾರವನ್ನು ....

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಸ್ವಾಮಿ, ನಾನು ಮಾತನಾಡುವುದಿಲ್ಲ, ನಿಲ್ಲಿಸಿಬಿಡುತ್ತೇನೆ ಸೀಕ್ರೆಟ್ ಬ್ಯಾಲೆಟ್‌ಗೆ ಮುಖ್ಯಮಂತ್ರಿಗಳು ಒಪ್ಪಿಕೊಳ್ಳಲಿ.

ಶ್ರೀ ಹೆಚ್.ಎನ್. ನಂಜೇಗೌಡ : ಎಷ್ಟಾದರೂ ಹೆಸರು ಕೊಡಲಿ. ನಮ್ಮ ನಾಯಕರು ಮಾನತಾಡಿ ಟೈಂ ಉಳಿದರೆ ಬೇರೆಯವರು ಮಾತನಾಡುತ್ತಾರೆ. ಇಲ್ಲದಿದ್ದರೆ ಅವರೇ ಮಾತನಾಡಿಕೊಳ್ಳಲಿ. ಆದರೆ ಈಗ ಊಟಕ್ಕೆ ಅಡ್ಜರ್ನ್ ಮಾಡಿ ಪುನಃ ಬೇಕಾದರೆ ನಾವು ಮೂರು ಗಂಟೆಗೆ ಸೇರಬಹುದು ಎಂದು ಕಾಣುತ್ತದೆ.

ಉಪಾಧ್ಯಕ್ಷರು : ಈಗ ಸದನವನ್ನು ಮುಂದೂಡಿ ಪುನಃ ಮೂರು ಗಂಟೆಗೆ ಸೇರುತ್ತದೆ.

(ಸದನವು 1.40 ಗಂಟೆಗೆ ಮುಂದೂಡಲ್ಪಟ್ಟು ಪುನಃ ಮೂರು ಗಂಟೆಗೆ ಸೇರಲು ನಿರ್ಧರಿಸಿತು)

(ಸದನವು ಮಧ್ಯಾಹ್ನ 3.10 ಕ್ಕೆ ಪುನಃ ಸಮಾವೇಶಗೊಂಡಿತು)

ಉಪಾಧ್ಯಕ್ಷರು (ಶ್ರೀ ಚಂದ್ರಶೇಖರ ಎಂ. ಮಾಮನಿಯವರು ಪೀಠವನ್ನಲಂಕರಿಸಿದ್ದರು).

ಶ್ರೀ ಕೆ.ಎಸ್. ಈಶ್ವರಪ್ಪ : ಮಂತ್ರಿಗಳು ಯಾರೂ ಇಲ್ಲ, ಮುಖ್ಯ ಮಂತ್ರಿಗಳೂ ಇಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಈಗಲೇ ಓಟಿಗೆ ಹಾಕುವುದಿದ್ದರೆ ಹೇಳಿ.

ಉಪಾಧ್ಯಕ್ಷರು : ಮುಖ್ಯ ಮಂತ್ರಿಗಳು ಬರುತ್ತಾರೆ. ಕರೆಸುತ್ತಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿರತಕ್ಕ ಎಲ್ಲಾ ವಿಚಾರಗಳನ್ನು ಅಕ್ಷರಶಃ ಬರೆದುಕೊಂಡಿದ್ದೇನೆ. ಸರ್ಕಾರದ ವತಿಯಿಂದ ಉತ್ತರ ಕೊಡುತ್ತೇನೆ. ದಯವಿಟ್ಟು ಮಾತನಾಡಿ. ಅನಾಹುತವಾಗುತ್ತದಂತೆ. ಅನಾಹುತವಾದರೆ ನಮಗೇನೂ ಅನಾಹುತವಾಗುವುದಿಲ್ಲ. ಯಾವ ಸರ್ಕಾರಕ್ಕೂ ಅನಾಹುತವಾಗುವುದಿಲ್ಲ. ಮಾನ್ಯ ಯಡಿಯೂರಪ್ಪನವರು ಧೈರ್ಯವಾಗಿ ಮಾತನಾಡಬಹುದು. ಅವರು ವಿರೋಧ ಪಕ್ಷದ ನಾಯಕರಾಗಿರುತ್ತಾರೆ, ನಾವು ಇಲ್ಲೇ ಇರುತ್ತೇವೆ, ಮಾತನಾಡಿ. ಮುಖ್ಯ ಮಂತ್ರಿಗಳು ಬರುತ್ತಾರೆ. ಮಾತನಾಡಿ.

ಶ್ರೀ ಯು.ಆರ್, ಸಭಾಪತಿ: ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಮುಖ್ಯ ಮಂತ್ರಿಗಳು ಇರಬೇಕಲ್ಲಾ.

ಉಪಾಧ್ಯಕ್ಷರು : ಅವರು ಬರುತ್ತಾರೆ ಮಾತನಾಡಿ ಸಿಂಧ್ಯಾರವರು ಉತ್ತರ ಹೇಳುತ್ತಾರೆ.

ಶ್ರೀ ಕೆ.ಎಸ್. ಈಶ್ವರಪ್ಪ : ಅವಿಶ್ವಾಸ ನಿರ್ಣಯದ ಬಗ್ಗೆ ಅವರಿಗೆ ಗೌರವ ಇಲ್ಲವೆಂದರೆ ನಾವು ಯಾರ ಹತ್ತಿರ ಮಾತನಾಡಬೇಕು?

ಶ್ರೀ ಬಿ.ಬಿ. ಶಿವಪ್ಪ : ನಮ್ಮದು ಅವಿಶ್ವಾಸ ನಿರ್ಣಯ ಇರತಕ್ಕದ್ದು ಮುಖ್ಯ ಮಂತ್ರಿ ಶ್ರೀ ಜೆ.ಹೆಚ್. ಪಟೇಲ್ ಸರ್ಕಾರದ ಮೇಲೆ. ಸಿಂಧ್ಯರವರ ಸರ್ಕಾರದ ಮೇಲೆ ಅಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಮಗೆ ಜಂಟಿ ಜವಾಬ್ದಾರಿ ಇದೆ, ನಾವೆಲ್ಲಾ ಒಂದೇ.

ಉಪಾಧ್ಯಕ್ಷರು : ಯಡಿಯೂರಪ್ಪನವರೇ, ತಾವು ಮಾತನಾಡಿ ಅವರು ಮಂತ್ರಿಮಂಡಲದ ಹಿರಿಯ ಸದಸ್ಯರು ಇದ್ದಾರೆ. ಅವರು ರೆಕಾರ್ಡ್ ಮಾಡಿಕೊಳ್ಳುತ್ತಾರೆ. ತಾವು ಮಾತನಾಡಬಹುದು, ಮಾತನಾಡಿ.

ಶ್ರೀ ಯು.ಆರ್. ಸಭಾಪತಿ : ಇದು ಸರಿಯಲ್ಲ. ಮುಖ್ಯ ಮಂತ್ರಿಗಳು ಬರಬೇಕು.

ಶ್ರೀ ಹೆಚ್.ಎನ್. ನಂಜೇಗೌಡ : ನಾಮ ಏತಕ್ಕೆ ಹೇಳುತ್ತೇನೆಂದರೆ, ಈಗ ಒಂದು ಪಕ್ಷ ನಾವು Closure Motion ಮೂವ್ ಮಾಡಿ ಓಟಿಗೆ ಹಾಕಿ ಎನ್ನುತ್ತೇವೆ. ಆಗ ಏನು ಮಾಡುತ್ತೀರಿ? Alright, we will move a closure Motion Than we will demand for voting .

SRI B.S. YEDIYURAPPA : Ate you ready?

ಶ್ರೀ ಎಂ. ಶ್ರೀನಿವಾಸ್ : ನಾವು ಮಾತನಾಡುವುದು ಬೇಡ. ನಾವು ಮಾತನಾಡುವ ಅಗತ್ಯವಿಲ್ಲ. ನೀವು ಬೆಲ್ ಮಾಡಿ ಓಟಿಗೆ ತೆಗೆದುಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೇ ಇದನ್ನು ಬಹಳ ಲಘುವಾಗಿ ತೆಗೆದುಕೊಳ್ಳಬಾರದು. Vote on No Confidence Motion move ಮಾಡಿದ ಮೇಲೆ ಏನೇನು ಚಾರ್ಜಸ್ ಅವರ ಮೇಲೆ ಮಾಡುತ್ತೇವೆ, ಸರ್ಕಾರದ ಮೇಲೆ

ಮಾಡುತ್ತೇವೆ ಅದನ್ನು ಕೇಳುವುದಕ್ಕೆ ಮುಖ್ಯ ಮಂತ್ರಿಗಳು ಇಲ್ಲವೆಂದರೆ ನಾವು ಹೇಳುವುದು ಯಾರಿಗೆ? ಏಕೆಂದರೆ ನಾವು ಮೋಷನ್ ಮೂವ್ ಮಾಡಿದ್ದು in his name. ಶ್ರೀ ಜೆ.ಹೆಚ್. ಪಟೇಲರ ನೇತೃತ್ವದಲ್ಲಿರತಕ್ಕ ಸರ್ಕಾರದ ವಿರುದ್ಧ ನಾವು No confidence Motion Move ಮಾಡಿದ್ದು. ಅವರೇ ಇಲ್ಲವೆಂದಾಗ ನಾವು ಮಾತನಾಡತಕ್ಕ ಅಗತ್ಯ ಏನಿದೆ?

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಖರ್ಗೆಯವರು 1972ರಿಂದ ಈ ಹೌಸ್‌ನಲ್ಲಿದ್ದಾರೆ.

ಈ ರೀತಿಯ ಅವಿಶ್ವಾಸ ನಿರ್ಣಯವನ್ನು ಅವರು ಮೂವ್ ಮಾಡಿದ್ದಾರೆ. ನಾವು ಆಕಡೆ ಇದ್ದಾಗ ಮೂವ್ ಮಾಡಿದ್ದೇವೆ. ಎಲ್ಲಾ ಸಂದರ್ಭದಲ್ಲೂ ಮುಖ್ಯ ಮಂತ್ರಿಗಳು ಇಲ್ಲದೇ ಇರುವುದನ್ನು ನಾವು ನೋಡಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮುಖ್ಯ ಮಂತ್ರಿಗಳು ಆಬ್ಸೆಂಟ್ ಇದ್ದರೆ? It is Unfair.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಮ್ಮವರೇ ಮುಖ್ಯ ಮಂತ್ರಿಗಳು ಮೂರು ಜನ ಇದ್ದರಲ್ಲಾ ಸ್ವಾಮಿ. ಹೆಗಡೆಯವರು ಇದ್ದರು, ದೇವೇಗೌಡರು ಇದ್ದರು, ಬೊಮ್ಮಾಯಿಯವರು ಇದ್ದರು. ಈಗ ಇವರು ನಾಲ್ಕನೆಯವರು ಜನತಾ ದಳದ ಮುಖ್ಯ ಮಂತ್ರಿ. ಹತ್ತು ನಿಮಿಷದಲ್ಲಿ ಅವರು ಬರುತ್ತಾರೆ. ತಾವು ಮಾತನಾಡುತ್ತಾ ಇರಿ. ನಾವು ಈಗ 7-8 ಜನರಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದು ಸರಿಯಲ್ಲ. ಈ ರೀತಿಯಾಗಿ ಈ ಸದನವನ್ನು ಬಹಳ ಲಘುವಾಗಿ ನೋಡಿಕೊಳ್ಳುತ್ತಿದ್ದೀರಿ ಎಂಬ ಮಾತನ್ನು ಹೇಳುತ್ತಿದ್ದೇನೆ. ಮತ್ತು ಕೊನೇಪಕ್ಷ ತಾವು ಅವರನ್ನು ಕರೆಸಬೇಕು. ಇಲ್ಲದಿದ್ದರೆ ಸರಿಯಲ್ಲ.

ಶ್ರೀ ಪಿ.ಜಿ.ಆರ್. ಸಂಧ್ಯಾ : ಸ್ವಾಮಿ, ನಾನು ಹೇಳಿಕಳುಹಿಸಿದ್ದೇನೆ. 8 ಜನ ಇದ್ದಾರೆ. ಮಾತನಾಡಲಿ. ನಾನೇ ಎಲ್ಲಾ ಬರೆದುಕೊಳ್ಳುತ್ತಿದ್ದೇನೆ ಬೆಳಿಗ್ಗೆಯಿಂದ ಕಷ್ಟಪಟ್ಟು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಎಲ್ಲವೂ ನಿಮ್ಮ ಮಾತಿನಂತೆಯೇ ನಡೆಯುತ್ತಿತ್ತು ಅಂದರೆ ಸರಿ. ಹಿಂದೆ ದೇವೇಗೌಡರಿದ್ದಾಗ ಅವರ ಸರ್ಕಾರ ಇದ್ದಾಗ ತಮ್ಮ ಮಾತು ಎಷ್ಟು ನಡೆಯುತ್ತಿತ್ತೋ ಅಷ್ಟು ಈಗ ನಡೆಯುವುದಿಲ್ಲ. ಅದಕ್ಕಾಗಿ ತಾವು ಬರೆದುಕೊಂಡರೂ ಅಷ್ಟು ಪ್ರಯೋಜನವಾಗುವುದಿಲ್ಲ. ಅದಕ್ಕಾಗಿ ನಾವು ಅವರು ಬರಲಿ ಎಂದು ಹೇಳುವುದು.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಾನು ಹೇಳುತ್ತಾ ಇದ್ದೇನೆ, ದೇವೇಗೌಡರ ಸರ್ಕಾರದಲ್ಲಿ ಒಬ್ಬ ಮಂತ್ರಿಮಂಡಲದ ಸದಸ್ಯನಾಗಿ ನನಗೆ ಎಷ್ಟೊಂದು ಬೆಲೆ ಸಿಗುತ್ತಿತ್ತೋ ಅದಕ್ಕಿಂತ ಹೆಚ್ಚಿನ ಬೆಲೆ ಅಷ್ಟೇ ಬೆಲೆ ನನ್ನ ಮಾತಿಗಿದೆ. ಅದರಲ್ಲಿ ಏನೂ ಸಂಶಯ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆತ್ಮ ಸಾಕ್ಷಿಯಾಗಿ ಹೇಳಿ. ಹೀಗೆ ತಾವು ಕೈ ಇಟ್ಟುಕೊಂಡು (ಎದೆಯ ಮೇಲೆ) ಹೇಳಿದರೆ ಅದನ್ನು ನಂಬಬಹುದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಇಷ್ಟು ಗಂಭೀರವಾದ ಒಂದು ಅವಿಶ್ವಾಸ ನಿರ್ಣಯವನ್ನು ಆಡಳಿತಪಕ್ಷಕ್ಕೆ ಸರಿಸಮಾನವಾಗಿರುವಂಥ ಪ್ರತಿಪಕ್ಷ ತಂದಿರುವಂಥ

ಕಾಲದಲ್ಲಿ ಬೇರೆ ಸಮಯದಲ್ಲಂತೂ ರಾಜಕೀಯ ಗೊಂದಲದಲ್ಲಿ ಅವರು ಸಿಕ್ಕಿಕೊಂಡು ನರಳುತ್ತಿರುತ್ತಾರೆ ಆದರೆ ಈ ಸಮಯದಲ್ಲಿ ಬರುವುದಕ್ಕೆ ಪುರಸೊತ್ತಿಲ್ಲ ಈ ಮಂತ್ರಿಗಳಿಗೆ ಹಾಗೂ ಮುಖ್ಯಮಂತ್ರಿಗಳಿಗೆ. ಎಂದರೆ ಇದು ಎಷ್ಟೊಂದು ಬೇಜವಾಬ್ದಾರಿತನ ಈ ಸರ್ಕಾರಕ್ಕಿದೆ ಎಂದು ತೋರಿಸುತ್ತದೆ. ಅಧಿಕಾರದ ಮದದಿಂದ ನಾವು ಏನು ಮಾಡಿದರೂ ಸಹಿಸಿಕೊಳ್ಳುತ್ತಾರೆ, ಇನ್ನೊಂದು ಚುನಾವಣೆ ಬಂದಾಗ ನೋಡಿಕೊಳ್ಳೋಣ ಎನ್ನುವಂಥ ಹಮ್ಮು ಏನಿದೆ, ಸೊಕ್ಕೇನಿದೆ, ಇದರ ಒಂದು ಚಿತ್ರ ಇವತ್ತು ನಾವು ಕಾಣುತ್ತಾ ಇದ್ದೇವೆ. ನಾನು ಹಗುರವಾಗಿ ಇದನ್ನು ತೆಗೆದುಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ. ನಾನು ಮಾತನಾಡುತ್ತೇನೆ. ಆದರೆ ನಿಮ್ಮ ಜವಾಬ್ದಾರಿ ಇರುವಂಥ ಸರ್ಕಾರಕ್ಕೆ ಇದು ಶೋಭೆ ತರುವಂಥ ಸಂಗತಿಯೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಜೆ.ಹೆಚ್. ಪಟೇಲ್ ಸಾಹೇಬರ ಬೆಂಬಲಿಗರು ಏನಿದ್ದಾರೆ ಮುಖ್ಯಮಂತ್ರಿಗಳ ಬೆಂಬಲಿಗರು ಅವರೊಬ್ಬರೂ ಇಲ್ಲ. ದೇವೇಗೌಡರ ಬೆಂಬಲಿಗರು ಏನಿದ್ದಾರೆ ಅವರು ಮಾತ್ರ ಇಲ್ಲಿ ಇದ್ದಾರೆ,

ಶ್ರೀ ಸಿ. ಬೈರೇಗೌಡ : ಇದನ್ನು ನಾನು ಖಂಡತುಂಡವಾಗಿ ವಿರೋಧಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಪ್ರಧಾನಮಂತ್ರಿಯವರ ಸಪೋರ್ಟರ್ಸ್ ಏನಿದ್ದಾರೆ ಅವರು ಮಾತ್ರ ಇಲ್ಲಿದ್ದಾರೆ. ಯಾರು ಮಾನ್ಯ ಮುಖ್ಯಮಂತ್ರಿಗಳ ಸಪೋರ್ಟರ್ಸ್ ಆಗಿದ್ದರು ಅವರೊಬ್ಬರೂ ಕೂಡ ಇಲ್ಲಿ ಇಲ್ಲ.

ಶ್ರೀ ಸಿ. ಬೈರೇಗೌಡ : ಮಾನ್ಯ ಉಪಾಧ್ಯಕ್ಷರೆ, ಇವರು ಮೊಸರಿನಲ್ಲಿ ಕಲ್ಲು ಹುಡುಕುತ್ತಿದ್ದಾರೆ. ಮೊಸರಿನಲ್ಲಿ ಕಲ್ಲು ಹುಡುಕುವಂಥ ಕೆಲಸ ಬೇಡ. ಆ ವ್ಯವಹಾರ ಮಾಡುವುದಕ್ಕೆ ಹೋಗಬೇಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಆಗಲಿ ಸ್ವಾಮಿ ಆಗಲಿ. ಮಾನ್ಯ ಉಪಾಧ್ಯಕ್ಷರೇ, ನಾನು ಒತ್ತಾಯ ಮಾಡುವುದಿಲ್ಲ ಅವರಿರಲೇಬೇಕು ಎಂದು. ಏಕೆಂದರೆ ಆ ರೀತಿಯ ವರ್ತನೆ ನಾವು ಮುಖ್ಯಮಂತ್ರಿಗಳ ಹತ್ತಿರ ಕಾಣುತ್ತಿದ್ದೇವೆ. ಇರಬಹುದು. ಒಂದು ಗಂಟೆ ಸಮಯಕೊಟ್ಟಿರಿ. ನಾವೂ ಜವಾಬ್ದಾರಿಯಿಂದ ಬಂದಿದ್ದೇವೆ. ಬರಬೇಕು ಎಂದು ನಾನು ಆಗ್ರಹ ಮಾಡುವುದೂ ಇಲ್ಲ. ರಾಜ್ಯದ ಜನರಿಗೆ ಗೊತ್ತಾಗಿಲ್ಲ. ಇಂಥ ಒಂದು ಸಂದರ್ಭದಲ್ಲೂ ಸಹ ಎಷ್ಟೊಂದು ಹಗುರವಾಗಿ ನಮ್ಮ ಉಪ ಮುಖ್ಯಮಂತ್ರಿಗಳು ಮುಖ್ಯಮಂತ್ರಿಗಳು ತೆಗೆದುಕೊಳ್ಳುತ್ತಾರೆ ಎನ್ನುವುದು ನಾಡಿನ ಜನರಿಗೆ ಗೊತ್ತಾಗಲಿ ಎಂದು ನಾನು ಇವತ್ತು ಇದನ್ನು ಪ್ರಸ್ತಾಪ ಮಾಡುತ್ತೇನೆ. ತುಂಬಾ ಸಂತೋಷ. ನಾನು ಏನು ಹೇಳುತ್ತಾ ಇದ್ದೆ ಎಂದರೆ, ತಾವು ಒಂದು ಮಾತನ್ನು ಏನು ಹೇಳಿದಿರಿ ಎಂದರೆ ಇವತ್ತು ದೇವೇಗೌಡರ ಬೆಂಬಲಿಗರೆಲ್ಲಾ ಇದ್ದೀರಿ, ಜೆ.ಹೆಚ್.ಪಟೇಲರ ಬೆಂಬಲಿಗರು ಯಾರೂಇಲ್ಲ ರಾಮಕೃಷ್ಣ ಹೆಗಡೆ ಬೆಂಬಲಿಗರು ಯಾರೂ ಇಲ್ಲ ಎನ್ನುವಂಥದ್ದು ಈ ಒಂದು ಅಟೆಂಡೆನ್ಸ್ •ನೋಡಿದಾಗ ಸ್ಪಷ್ಟವಾಗುತ್ತದೆ ಎನ್ನುವಂಥ ಮಾನತ್ನು ಹೇಳುತ್ತಾ ಅಧ್ಯಕ್ಷರೇ, ಬಹಳ ಪ್ರಮುಖವಾದಂಥ ಒಂದು ಆರೋಪವನ್ನು ನಾನು ಮಾಡಿದ್ದೆ. ನಾನು ಇವರು ಕ್ವೆಶ್ಚನ್ ಮಾಡಬೇಕು, ಕೆಲವು ದಾಖಲೆಗಳು ನಿಮ್ಮಲ್ಲಿಲ್ಲ ಎಂದು ಕೂಗಬೇಕು, ಚೀರಬೇಕು, ಆಮೇಲೆ ನಾನು ಆ ದಾಖಲೆಗಳನ್ನು ನಿಮಗೆ ಕೊಡಬೇಕು ಎಂದು ಉದ್ದೇಶಪೂರ್ವಕವಾಗಿ ನಾನು ಕೊಡಲಿಲ್ಲ. 100-200 ದಾಖಲೆಗಳನ್ನು ಕೊಡುತ್ತೇನೆ ಅನೇಕ ವಿಷಯಗಳ ಬಗ್ಗೆ.

ಆದರೆ ಪ್ರಮುಖವಾಗಿ ಈ ಚಾಮುಂಡೇಶ್ವರಿ ಬಿಲ್ಡರ್ಸ್ ..... ನಾನೇನೋ ಒಂದು ಸಾವಿರ ಎಕರೆ ಜಮೀನಿನಲ್ಲಿ ..... ಒಂದು ನಿಮಿಷ ಅದಕ್ಕೆ ದಾಖಲೆ ಕೊಡುತ್ತಿದ್ದೇನೆ. ಗೋಮಾಳ, ಗುಡ್ಡಗಳು ಆಕ್ರಮಿಸಿಕೊಂಡಿದ್ದಾರೆ ಎಂದು ನಾನು ಹೇಳಿದೆ. ಆಗ ಒಂದು ಪ್ರಶ್ನೆಯನ್ನು ಎತ್ತಿದರು ಕಾನೂನು ಬಾಹಿರವಾದಂಥ ಕೆಲಸವನ್ನು ನಾವೇನಾದರೂ ಮಾಡಿದ್ದೇವೆಯೇ ಎಂದು. ಮಾನ್ಯ ಅಧ್ಯಕ್ಷರೇ, ಈ ಬಿ.ಎಂ.ಆರ್.ಡಿ.ಎ. ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಏನಿದೆ ಕಾಯಿದೆ ಪ್ರಕಾರ ವಸತಿ ಸಮುಚ್ಛಯ ಯಾರಾದರೂ ಮಾಡಬೇಕಿದ್ದರೆ ಬಿ.ಎಂ.ಆರ್.ಡಿ.ಎ. ಅನುಮತಿಯನ್ನು ಪಡೆಯಬೇಕಾಗುತ್ತದೆ. ಇದು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿಗೆ ಇದು ಸೇರುತ್ತದೆ. ಈ ಚೌಕಟ್ಟಿಗೆ ಬರುತ್ತದೆ. ಗ್ರಾಮಪಂಚಾಯಿತಿಯ ಅಧ್ಯಕ್ಷ, ಕಾರ್ಯದರ್ಶಿ ಈ ನಕ್ಷೆಗಳಿಗೆ ಅನುಮೋದನೆ ಮಾಡಿ ಕೊಟ್ಟಿದ್ದಾರೆ ಉಪಾಧ್ಯಕ್ಷರೇ, 1000 ಕೋಟಿ ರೂಪಾಯಿ ಬೆಲೆ ಬಾಳುವಂಥ ......

2) ಪ್ರಕಟಣೆ.

ಉಪಾಧ್ಯಕ್ಷರು : ಒಂದು ನಿಮಿಷ ಇರಿ, ಒಂದು ಪ್ರಕಟಣೆ ಇದೆ. ಇಂದು ಮಧ್ಯಾಹ್ನ ಸುಮಾರು 1-10 ಗಂಟೆ ಸಮಯದಲ್ಲಿ ಕರ್ನಾಟಕ ರಾಜ್ಯ ರೈತಸಂಘ, ಮೈಸೂರು ಜಿಲ್ಲಾ ಶಾಖೆಯ ಶ್ರೀ ಸದ್ಗುರು, ಶ್ರೀ ಬಸವರಾಜು, ಶ್ರೀ ಹೆಚ್. ಸುರೇಶ್, ಶ್ರೀ ಮಲ್ಲಪ್ಪ, ಶ್ರೀ ನಂಜುಂಡಸ್ವಾಮಿ ಹಾಗೂ ಶ್ರೀ ಎಸ್. ಪ್ರಕಾಶ್ ಅವರುಗಳು ಸದನದ ಪ್ರೇಕ್ಷಕರ ಗ್ಯಾಲರಿಯಿಂದ ಘೋಷಣೆಗಳನ್ನು ಕೂಗಿ ಸದನದ ಕಲಾಪಕ್ಕೆ ಅಡ್ಡಿಯುಂಟು ಮಾಡಿರುತ್ತಾರೆ. ಇವರುಗಳನ್ನು ಪಹರೆ ಮತ್ತು ನಿಗಾವಣೆ ಶಾಖೆಯವರು ತಮ್ಮ ವಶಕ್ಕೆ ತೆಗುದುಕೊಂಡು ವಿಧಾನಸೌಧದ ಪೋಲೀಸ್ ಠಾಣೆಯವರ ವಶದಲ್ಲಿಟ್ಟಿರುತ್ತಾರೆ. ಅವರುಗಳು ಸದನಕ್ಕೆ ತೀವ್ರ ಸ್ವರೂಪದ ಅಪರಾಧಗಳನ್ನು ಮಾಡಿರುವುದರಿಂದ ಈ ಮೇಲ್ಕಾಣಿಸಿದವರಿಗೆ ಶಿಕ್ಷೆಯನ್ನು ವಿಧಿಸಿದ್ದು ಇಂದು ಅವರು ಸದನವು ಮುಗಿಯುವವರೆಗೆ ವಿಧಾನಸೌಧದ ಪೋಲೀಸ್ ಕಸ್ಟಡಿಯಲ್ಲಿರಬೇಕೆಂದು ಆದೇಶಿಸುತ್ತೇನೆ. ತಾವು ಮುಂದುವರೆಸಿ.

3) ಅವಿಶ್ವಾಸ ನಿರ್ಣಯದ ಮೇಲಿನ ಚರ್ಚೆ

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ಇಡೀ ರಾಜ್ಯದ ರೈತರು ಕೂಲಿಕಾರರು ಒದ್ದಾಡುತ್ತಿರುವಂಥ ಸಂದರ್ಭದಲ್ಲಿ ಪ್ರತಿಭಟನೆ ಮಾಡಿದ್ದಾರೆ.

ಉಪಾಧ್ಯಕ್ಷರು : ಆಯಿತು, ಎಲ್ಲಾ ಗೊತ್ತಿದೆ. ಅವರು ಮಾತನಾಡಲಿ. ಈಗ ವಿರೋಧಪಕ್ಷದ ನಾಯಕರು ಮಾತನಾಡಲಿ.

ಶ್ರೀ ಕೆ.ಎಸ್. ಈಶ್ವರಪ್ಪ : ಈಗ ಅವರನ್ನು ಬಿಡುಗಡೆ ಮಾಡಿ. ಬೇರೆ ಇನ್ನೇನೂ ಇಲ್ಲ. ನಾನು ಮನವಿ ಮಾಡಿಕೊಳ್ಳುತ್ತೇನೆ ಇಡೀ ರಾಜ್ಯದ ರೈತರ ಪರವಾಗಿ ಅವರ ನೋವನ್ನು ನಿಮ್ಮ ಗಮನಕ್ಕೆ ತಂದಿದ್ದಾರೆ. ದಯವಿಟ್ಟು ಅವರನ್ನು ಬಿಡುಗಡೆ ಮಾಡಿ.

ಉಪಾಧ್ಯಕ್ಷರು : ಆಯಿತು. ಈಗ ಅವರು ಮಾತನಾಡಲಿ.